ಸಂಪುಟ: 06 **ಸಂಚಿಕೆ:** 228 **ಪುಟಗಳು:** 08 **ಮಂಗಳವಾರ** 03 **ನವೆಂಬರ್** 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 + 91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಮುಂಜಾನೆ ಮಾತು

ಒಮ್ಮೆ ಜೋರಾಗಿ ಉರಿಯುತ್ತಿರುವ ದೀಪದ ಬಳಿ ಕತ್ತಲೆ ಕೇಳಿತಂತೆ ಯಾಕೆ ಇಷ್ಟು ಜೋರಾಗಿ ಉರಿಯುತ್ತಿದ್ದೀಯಾ. ಸ್ವಲ್ಪ ಹೊತ್ತಲ್ಲೇ ನಿನ್ನ ಸಾವು ಸಂಭವಿಸಲಿದೆ, ಶಾಂತವಾಗಿ ಅದನ್ನ ಸ್ವೀಕರಿಸು ಅಂತ ಅದಕ್ಕೆ ದೀಪ ನಕ್ಕು ಹೇಳಿತಂತೆ .. ನಾನು ಸಾಯುವುದು ನಿಜವೇ ಅಂದ ಮೇಲೆ ಕತ್ತಲೆ ತುಂಬಿದ ನಿನ್ನ ಬದುಕಿಗೆ ಎಷ್ಟು ಸಾಧ್ಯವೋ ಅಷ್ಟು ಬೆಳಕನ್ನು ನೀಡಲು ಬಯಸುತ್ತೇನೆ.

ಸಿದ್ದರಾಮಯ್ಯ ತಣಿಸಲು ಕುಮಾರಸ್ವಾಮಿ ಮೇಲೆ ಸ್ಟಿಂಗ್ ಆರೋಪ: ಶ್ರೀರಾಮುಲು

• ಉದಯವಾಹಿನಿ, ಬೆಂಗಳೂರು

ಸ್ಟಿಂಗ್ ಆಪರೇಷನ್ ಕೇಸ್‌ನಲ್ಲಿ ಸಿದ್ದರಾಮಯ್ಯ ತಣಿಸಲು ಕೇಂದ್ರ ಸಚಿವ ಕುಮಾರಸ್ವಾಮಿ ಮೇಲೆ ಕಮೀಷನರ್ ಕೈಯಲ್ಲಿ ಆರೋಪ ಮಾಡಿಸಿದ್ದಾರೆ ಎಂದು ಮಾಜಿ ಸಚಿವ ಶ್ರೀರಾಮುಲು ಆರೋಪ ಮಾಡಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಾತಾಡಿದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಬಗ್ಗೆ ಚರ್ಚೆ ಆಗಬೇಕಿತ್ತು. ಆದರೆ ಕಾಫಿ ಲೋಟದಲ್ಲಿ ಚಂಡ ಮಾರುತ ರೀತಿ ಚರ್ಚೆ ಆಗುತ್ತಿದೆ. ಸಿದ್ದರಾಮಯ್ಯ ದೆಹಲಿಗೆ ಹೋಗಿದ್ದಾರೆ. ಅವರನ್ನು ಸಮಾಧಾನ ಮಾಡುವ ಕೆಲಸ ಮಾಡುತ್ತಿದ್ದಾರೆ.

ಸ್ಟಿಂಗ್ ಪ್ರಕರಣ ಬೇರೆ ಕಡೆ ತಿರುಗಿಸುವ ಕೆಲಸ ಆಗುತ್ತಿದೆ ಎಂದು ಕಿಡಿಕಾರಿದರು. ಯತೀಂದ್ರ ಅವರೇ ನಮ್ಮ ಪಕ್ಷದವರು ಸ್ಟಿಂಗ್ ಮಾಡಿದ್ದಾರೆ ಅಂತ ಹೇಳಿದ್ದಾರೆ. ಕಾಂಗ್ರೆಸ್‌ನಲ್ಲಿ ಒಬ್ಬ ಲೇಡಿ ವಿಚಾರಣೆ ಮಾಡಿದ್ದಾರೆ. ಹರಿಪ್ರಸಾದ್ ಕೃಪಾ ಆಳ್ವಾ ಅವರನ್ನು ಉಚ್ಚಾಟನೆ ಮಾಡಿದರೆ ಸಾಲಲ್ಲ. ಸಾಕಷ್ಟು ಜನ ಸಿದ್ದರಾಮಯ್ಯ ಇಳಿಸಲು ಇದನ್ನ ಮಾಡಿದ್ದಾರೆ. ಗೃಹ ಸಚಿವರು ಆರ್‌ಎಸ್‌ಎಸ್ ಬಗ್ಗೆ ಮಾತಾಡೋದು ಬಿಟ್ಟು ಸ್ಟಿಂಗ್ ಬಗ್ಗೆ ಮಾತಾಡಲಿ ಎಂದು ಆಗ್ರಹಿಸಿದರು. ಕೃಪಾ ಆಳ್ವಾ ಉಚ್ಚಾಟನೆ ಮಾಡಿದ್ದಾರೆ. ಯತೀಂದ್ರ ಅವರೇ ಇದನ್ನ ನಮ್ಮ ಪಕ್ಷದವರು ಮಾಡಿದ್ದಾರೆ ಅಂತ ಹೇಳಿದ ಮೇಲೆ ಕುಮಾರಸ್ವಾಮಿ ಕೊರಳಿಗೆ ಯಾಕೆ ಕಟ್ಟಲು ಹೋಗುತ್ತಿದ್ದೀರಾ? ಮೊದಲ ದಿನದಿಂದ ಕುಮಾರಸ್ವಾಮಿ ಇದರ ಬಗ್ಗೆ ಹೇಳುತ್ತಿದ್ದಾರೆ.

ಹೆಚ್‌ಡಿಕೆ ಮನೆಯಲ್ಲಿ ವಿಡಿಯೋ ಅಪ್ಲೋಡ್, 29 ಲಕ್ಷ ವಹಿವಾಟು: ಕಾಂಗ್ರೆಸ್

• ಉದಯವಾಹಿನಿ, ಬೆಂಗಳೂರು

ಹೆಚ್‌ಡಿ ಕುಮಾರಸ್ವಾಮಿ ಮನೆಯಲ್ಲೇ ವಿಡಿಯೋ ಅಪ್‌ಲೋಡ್ ಮಾಡಲಾಗಿದ್ದು 29 ಲಕ್ಷ ರೂ. ಹಣಕಾಸು ವಹಿವಾಟು ನಡೆದಿದೆ ಎಂದು ಕಾಂಗ್ರೆಸ್ ನಾಯಕ ಎಂ ಲಕ್ಷ್ಮಣ್ ಗಂಭೀರ ಆರೋಪ ಮಾಡಿದ್ದಾರೆ. ರಾಜ್ಯ ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿರುವ ಸ್ಟಿಂಗ್ ಆಪರೇಷನ್ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸಾಮಿ ಅವರ ಸುದ್ದಿಗೋಷ್ಠಿಯ ಬೆನ್ನಲ್ಲೇ ಕಾಂಗ್ರೆಸ್ ಮಾಧ್ಯಮಗೋಷ್ಠಿ ನಡೆಸಿ ತಿರುಗೇಟು ನೀಡಿದೆ. ಸ್ಟಿಂಗ್ ಆಪರೇಷನ್ ಕಿಂಗ್‌ಪಿನ್ ಡ್ರೈವ್ ಬ್ರದರ್ ಎಂಬ ಫಲಕ ಪ್ರದರ್ಶಿಸಿ ಸುದ್ದಿಗೋಷ್ಠಿ ನಡೆಸಿದ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಪ್ರಕರಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರನ್ನು ತಳಕು ಹಾಕಿ ಸ್ಫೋಟಕ ಆರೋಪಗಳನ್ನು ಮಾಡಿದ್ದಾರೆ.

2026ರ ಆಗಸ್ಟ್ 27ರಂದು ಹೆಚ್.ಡಿ. ಕುಮಾರಸ್ವಾಮಿ ಮತ್ತು ನಿಖಿಲ್ ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದರು. ಈ ವೇಳೆ ಪ್ರಧಾನಿಗೆ ಸ್ಟಿಂಗ್ ವಿಡಿಯೋ ತೋರಿಸಿ, 'ಈ ಒಂದು ವಿಡಿಯೋ ಸಾಕು, ರಾಜ್ಯದಲ್ಲಿ ಕಾಂಗ್ರೆಸ್ ಸಂಹಾರ ಮಾಡಲು ಅನುಮತಿ ನೀಡಿ' ಎಂದು ಮನವೊಲಿಸಿದ್ದರು. ಇದಕ್ಕೆ ಪ್ರಧಾನಿ ಮೋದಿ ಅವರು 'ಗೋ ಅಹೆಡ್' ಎಂದಿದ್ದಾರೆ. ಈ ವಿಚಾರವನ್ನು ಸ್ವತಃ ಕುಮಾರಸ್ವಾಮಿ ಅವರೇ ತಮ್ಮ ಆಪ್ತರ ಬಳಿ ಹೇಳಿಕೊಂಡಿರುವ ಆಡಿಯೋ ಸಾಕ್ಷಿ ನಮ್ಮ ಬಳಿ ಇದೆ'' ಎಂದು ಬಾಂಬ್ ಸಿಡಿಸಿದರು..

ಶರದ್ ಪವಾರ್ ಆಸ್ಪತ್ರೆಗೆ ದಾಖಲು

• ಉದಯವಾಹಿನಿ, ಬೆಂಗಳೂರು

ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ಸಂಸ್ಥಾಪಕ ಶರದ್ ಪವಾರ್ ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಪುಣೆಯ ರೂಬಿ ಹಾಲ್ ಕ್ಲಿನಿಕ್ ಆಸ್ಪತ್ರೆಗೆ ದಾಖಲಾಗಿದ್ದಾರೆ. ಕೆಮ್ಮು ಮತ್ತು ಎದೆನೋವಿನ ಸಮಸ್ಯೆಯಿಂದ ಬಳಲುತ್ತಿದ್ದ 85 ವರ್ಷದ ಶರದ್ ಪವಾರ್ ಅವರನ್ನು ಸೋಮವಾರ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸದ್ಯ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಪುತ್ರಿ ಹಾಗೂ ಎನ್‌ಸಿಪಿ (ಎಸ್‌ಪಿ) ಸಂಸದೆ ಸುಪ್ರಿಯಾ ಸುಳೆ ತಿಳಿಸಿದ್ದಾರೆ.

ಶರದ್ ಪವಾರ್ ಅವರ ಆರೋಗ್ಯದ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಸುಪ್ರಿಯಾ ಸುಳೆ, ತಂದೆಗೆ ಕೆಮ್ಮು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ವೈದ್ಯಕೀಯ ಪರೀಕ್ಷೆಗಳು ನಡೆಯುತ್ತಿದ್ದು, ಅವರ ಆರೋಗ್ಯದ ಪ್ರಮುಖ ಮಾನದಂಡಗಳು ಸ್ಥಿರವಾಗಿವೆ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಶುಭ ಹಾರೈಸಿದ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದ್ದಾರೆ. ಶರದ್ ಪವಾರ್ ಅವರಿಗೆ ಉಸಿರಾಡುವಾಗ ಹೆಚ್ಚಾಗುವ ಎದೆನೋವು ಕಾಣಿಸಿಕೊಂಡಿದೆ. ಹೀಗಾಗಿ ಆರೋಗ್ಯ ತಪಾಸಣೆ ಮತ್ತು ವೈದ್ಯಕೀಯ ನಿಗಾದ ಉದ್ದೇಶದಿಂದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ಕೋಟ್ಯಾಂತರ ಮೌಲ್ಯದ ವಾಹನಗಳು ಧೂಳು ಪಾಲು

• ಉದಯವಾಹಿನಿ, ಬೆಂಗಳೂರು

ಅದು ಸಿಲಿಕಾನ್ ಸಿಟಿ ಬೆಂಗಳೂರಿನಿಂದ ಸ್ವಲ್ಪ ದೂರುದಲ್ಲಿರುವ ಬಿಡದಿ ಪುರಸಭೆ. ಇಡೀ ಪಟ್ಟಣವನ್ನು ಸ್ವಚ್ಛವಾಗಿಡಬೇಕಾದ ಪುರಸಭೆಯ ಮುಂಭಾಗದಲ್ಲೇ ರಾಶಿ ರಾಶಿ ಕಸ ಬಿದ್ದಿದ್ದರೂ ಕೇಳುವವರಿಲ್ಲ,ನೋಡುವವರಿಲ್ಲದ ಸ್ಥಿತಿ ನಿರ್ಮಾಣವಾಗಿದೆ.

ಮತ್ತೊಂದೆಡೆ ಸಾರ್ವಜನಿಕರ ತೆರಿಗೆ ಹಣದಿಂದ ಖರೀದಿಸಿದ ಕೋಟ್ಯಾಂತರ ರೂಪಾಯಿ ಮೌಲ್ಯದ ಸರ್ಕಾರಿ ವಾಹನಗಳು ಸಣ್ಣಪುಟ್ಟ ರಿಪೇರಿಯಿಲ್ಲದೆ ನಿಂತಲ್ಲಿಯೇ ಧೂಳು ತಿನ್ನುತ್ತಾ ಹಾಳಾಗುತ್ತಿವೆ. ಇಷ್ಟೆಲ್ಲಾ ಅವಾಂತರ ನಡೆಯುತ್ತಿರುವುದು ರಾಜ್ಯದ ಪೌರಾಡಳಿತ ಸಚಿವ ಹಾಗೂ ಶಾಸಕರಾದ ಹೆಚ್.ಸಿ. ಬಾಲಕೃಷ್ಣ ಅವರ ಸ್ವಕ್ಷೇತ್ರವಾದ ಮಾಗಡಿ, ರಾಮನಗರ ಗಡಿ ವ್ಯಾಪ್ತಿಯ ಬಿಡದಿ ಪುರಸಭೆಯಲ್ಲಿ ಅಧಿಕಾರಿಗಳ ಈ ತೀವ್ರ ನಿರ್ಲಕ್ಷ್ಯ ಹಾಗೂ ಅಕ್ರಮದ ವಿರುದ್ಧ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದೆಹಲಿಯಲ್ಲಿ ಸಿದ್ದರಾಮಯ್ಯ, ವೇಣುಗೋಪಾಲ್ ಭೇಟಿ


• ಉದಯವಾಹಿನಿ, ಬೆಂಗಳೂರು



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಪ್ರತ್ಯೇಕ ಮಾತುಕತೆ ನಡೆಸಿದ್ದಾರೆ. ಇಂಡಿ ಕೂಟದಿಂದ ದೆಹಲಿಯಲ್ಲಿ ನಡೆದ ಪ್ರತಿಭಟನೆಗೆ ತೆರಳಿದ್ದ ಸಿದ್ದರಾಮಯ್ಯ ಅವರು, ನಿನ್ನೆ ರಾಹುಲ್ ಗಾಂಧಿಯವರನ್ನು ಔಪಚಾರಿಕವಾಗಿ ಭೇಟಿ ಮಾಡಿದ್ದರು. ಅಧಿಕೃತವಾಗಿ ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ ಎಂದು ಹೇಳಲಾಗಿದೆ. ಬೆಳಗ್ಗೆ ಸಚಿವ ಡಾ.ಯತೀಂದ್ರ, ಶಾಸಕರಾದ ಎ.ಎಸ್.ಪೊನ್ನಣ್ಣ, ಕೆ.ವೆಂಕಟೇಶ್, ವಿಧಾನಪರಿಷತ್ ಸದಸ್ಯರಾದ ನಾಗರಾಜ್ ಯಾದವ್, ಶಿವಕುಮಾರ್ ಸೇರಿದಂತೆ ಹಲವರ ಜೊತೆ ವೇಣುಗೋಪಾಲ್ ಮಾತುಕತೆ ನಡೆಸಿದರು.ಕಾಂಗ್ರೆಸ್‌ನ ವರಿಷ್ಠ ನಾಯಕರ ಜೊತೆ ಭೇಟಿಯ ವೇಳೆ, ಸ್ಟಿಂಗ್ ಆಪರೇಷನ್ ಬಗ್ಗೆ ಹಾಗೂ ರಾಜ್ಯ ರಾಜಕಾರಣದ ಬಗ್ಗೆ ಇತರ ಮಹತ್ವದ ವಿಚಾರಗಳ ಕುರಿತು ಮಾತುಕತೆ ನಡೆಸಿದ್ದಾರೆ ಎನ್ನಲಾಗಿದೆ. ಸ್ಟಿಂಗ್ ಆಪರೇಷನ್‌ನ ತನಿಖೆ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ದೂರು ನೀಡಿರುವ ಸಿದ್ದರಾಮಯ್ಯ ಅವರು, ನ್ಯಾಯಸಮತ ಹಾಗೂ ನಿಷ್ಪಕ್ಷಪಾತ ತನಿಖೆಗೆ ಸೂಚನೆ ನೀಡಬೇಕು ಎಂದು ಮನವಿ ಮಾಡಿರುವುದಾಗಿ ತಿಳಿದು ಬಂದಿದೆ.ಪ್ರಕರಣದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿಯವರ ಪಾತ್ರವಿದೆ ಎಂದು ಸಾಬೀತಾಗಿದೆ. ಇದರ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಹಾಗೆಯೇ ಸ್ಟಿಂಗ್ ಆಪರೇಷನ್‌ನ ಪ್ರಮುಖ ಆರೋಪಿಯ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿರುವುದಾಗಿ ಮೂಲಗಳು ತಿಳಿಸಿವೆ.

ನಿಗಮ ಮಂಡಳಿಗಳ ನೇಮಕಾತಿಗೆ ಈ ಹಿಂದೆ ಸಿದ್ದಪಡಿಸಲಾದ ಪಟ್ಟಿಯನ್ನು ಅನುಸರಿಸಬೇಕು. ನಿಗಮ ಮಂಡಳಿಗಳ ನೇಮಕಾತಿಯನ್ನು ತ್ವರಿತಗೊಳಿಸಬೇಕು. ರಾಜಕೀಯ ವ್ಯವಹಾರಗಳ ಸಮಿತಿಯ ಶಿಫಾರಸುಗಳನ್ನು ಪ್ರಾಮಾಣಿಕವಾಗಿ ಜಾರಿಗೆ ತರಬೇಕು ಎಂದು ಒತ್ತಾಯಿಸಿದ್ದಾರೆ.

2027ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗೆ ಸಿದ್ಧತೆ ನಡೆಸಿರುವ ಬಿಜೆಪಿ, ದೀಪಾವಳಿ ಹಬ್ಬದ ನಂತರ ರಾಜ್ಯಾದ್ಯಂತ ಮೂರು ಹಂತದ ಬೃಹತ್ ಚುನಾವಣಾ ಪ್ರಚಾರ ಅಭಿಯಾನವನ್ನು ಪ್ರಾರಂಭಿಸಲು ಯೋಜಿಸಿದೆ.ನವೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರ ನೇತೃತ್ವದಲ್ಲಿ ಅಭಿಯಾನ ನಡೆಯಲಿದೆ. ವಿಭಾಗೀಯ, ಜಿಲ್ಲಾ ಹಾಗೂ ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗಿದ್ದು, ಚುನಾವಣೆಗೆ ಸಾಕಷ್ಟು ಮುಂಚಿತವಾಗಿಯೇ ರಾಜ್ಯಾದ್ಯಂತ ಭಾರಿ ರಾಜಕೀಯ ಅಲೆ ಸೃಷ್ಟಿಸುವುದು ಬಿಜೆಪಿಯ ತಂತ್ರಗಾರಿಕೆಯಾಗಿದೆ. ಪ್ರಧಾನಿ ಮೋದಿ ಅವರು 'ಮಿಷನ್ 2027' ಅಭಿಯಾನದ ಪ್ರಮುಖ ದಂಡನಾಯಕರಾಗಿದ್ದು, ಉತ್ತರ ಪ್ರದೇಶದ ಎಲ್ಲಾ 18 ಆಡಳಿತಾತ್ಮಕ ವಿಭಾಗಗಳಲ್ಲಿ ಬೃಹತ್ ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಲು ಹಾಗೂ ಸರ್ಕಾರದ ಸಾಧನೆಗಳನ್ನು ನೇರವಾಗಿ ತಲುಪಿಸಲು ಈ ರ‍್ಯಾಲಿಗಳನ್ನು ಆಯೋಜಿಸಲಾಗುತ್ತಿದೆ. ನ. 20 ರ ನಂತರ ಈ ಪ್ರಚಾರ ಅಭಿಯಾನವು ಮತ್ತಷ್ಟು ವೇಗ ಪಡೆದುಕೊಳ್ಳಲಿದ್ದು, ಇದರೊಂದಿಗೆ ಬೂತ್ ಮಟ್ಟದ ವ್ಯವಸ್ಥೆಯನ್ನು ಕ್ರಿಯಾಶೀಲಗೊಳಿಸಲಾಗುತ್ತದೆ. ಪ್ರತಿಯೊಬ್ಬ ಬೂತ್ ಕಾರ್ಯಕರ್ತ ಹಾಗೂ ಮೈಕ್ರೋ-ಟೀಮ್‌ಗಳಿಗೆ ಕನಿಷ್ಠ 50 ಕುಟುಂಬಗಳನ್ನು ನೇರವಾಗಿ ಸಂಪರ್ಕಿಸುವ ಜವಾಬ್ದಾರಿ ನೀಡಲಾಗುತ್ತದೆ. ಸರ್ಕಾರದ ಸಾಧನೆಗಳನ್ನು ಮನೆಮನೆಗೆ ತಲುಪಿಸುವುದು ಇದರ ಪ್ರಮುಖ ಉದ್ದೇಶವಾಗಿದೆ. ಇದಲ್ಲದೆ, ಯುವಕರು ಮತ್ತು ಮೊದಲ ಬಾರಿಗೆ ಮತದಾರರ ಮೇಲೆ ಹೆಚ್ಚಿನ ಗಮನ ಹರಿಸಲು ನಿರ್ಧರಿಸಲಾಗಿದ್ದು, ಬಿಜೆಪಿ ಸರ್ಕಾರದ ಯೋಜನೆಗಳು ಹಾಗೂ ಸಾಧನೆಗಳನ್ನು ಯುವ ಮತದಾರರಿಗೆ ತಲುಪಿಸಲು ಕಾರ್ಯಕರ್ತರಿಗೆ ಸೂಚಿಸಲಾಗಿದೆ.



ರಾಹುಲ್‌ಗೆ ಶಾ ಸವಾಲ್



ಬಿಜೆಪಿ ರಾಜೀ ಮಾಡಿಕೊಳ್ಳಲ್ಲ

ಚುನಾವಣಾ ಆಯೋಗ ಕೈಗೊಂಡ ವಿಶೇಷ ಸಮಗ್ರ ಮತದಾರರ ನೋಂದಣಿ ಪ್ರಕ್ರಿಯೆಯನ್ನು ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಉದ್ದೇಶಪೂರ್ವಕವಾಗಿ ಅಡ್ಡಿಪಡಿಸುತ್ತಿವೆ ಎಂದು ಕೇಂದ್ರ ಗೃಹ ಸಚಿವರು ಆರೋಪಿಸಿದ್ದಾರೆ. ಒಳನುಸುಳುವವರು ಕಾಂಗ್ರೆಸ್‌ನ ಪ್ರಮುಖ ಮತಬ್ಯಾಂಕ್ ಆಗಿದ್ದಾರೆ, ಅದಕ್ಕಾಗಿಯೇ ಅವರು ಸಮೀಕ್ಷೆಯನ್ನು ಬಲವಾಗಿ ವಿರೋಧಿಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಈ ವಿಷಯದಲ್ಲಿ ಬಿಜೆಪಿಗೆ ರಾಜಿ ಮಾಡಿಕೊಳ್ಳುವ ಉದ್ದೇಶವಿಲ್ಲ ಮತ್ತು ಕಾನೂನುಬದ್ಧವಾಗಿ ನಡೆಸಲಾಗುತ್ತಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ ಎಂದು ಅಮಿತ್ ಶಾ ಪುನರುಚ್ಚರಿಸಿದರು. ಭಾರತದ ನಿಜವಾದ ನಾಗರಿಕರಿಗೆ ಮಾತ್ರ ದೇಶದಲ್ಲಿ ಮತ ಚಲಾಯಿಸುವ ಹಕ್ಕಿದೆ ಮತ್ತು ನಕಲಿ ಮತದಾರರನ್ನು ಸಹಿಸಲಾಗುವುದಿಲ್ಲ ಎಂದು ಅವರು ಹೇಳಿದರು. ಹೈದರಾಬಾದ್‌ನ ಹೃದಯ ಭಾಗದಲ್ಲಿ ಸ್ವಯಂ ಪ್ರೇರಣೆಯಿಂದ ಜಮಾಯಿಸಿರುವ ಸಾವಿರಾರು ಜನರು ತಮ್ಮ ಉತ್ಸಾಹವನ್ನು ಪ್ರದರ್ಶಿಸುತ್ತಿರುವುದರಿಂದ ರಾಜ್ಯದಲ್ಲಿ ಬಿಜೆಪಿಯ ಬಲ ಹೆಚ್ಚುತ್ತಿದೆ ಎಂದು ಅವರು ಹೇಳಿದರು. ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ವಿರೋಧ ಪಕ್ಷಗಳು ಸೃಷ್ಟಿಸುತ್ತಿರುವ ಅರಾಜಕತೆಯನ್ನು ಕೊನೆಗೊಳಿಸಲು ಬಿಜೆಪಿ ಶ್ರೇಣಿಯು ಯಾವಾಗಲೂ ಜನರೊಂದಿಗೆ ನಿಲ್ಲುತ್ತದೆ ಎಂದು ಅವರು ಭರವಸೆ ನೀಡಿದರು.

• ಉದಯವಾಹಿನಿ, ದೆಹಲಿ

ಸಂಸತ್ತಿನ ವಿಶೇಷ ಅಧಿವೇಶನ ಕರೆಯಲು ಕೇಂದ್ರ ಸರ್ಕಾರ ಸಿದ್ಧವಿದೆ. ಎಸ್‌ಐಆರ್ ಕುರಿತು ಚರ್ಚೆಗೆ ಬನ್ನಿ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು, ರಾಹುಲ್‌ಗಾಂಧಿ ಅವರಿಗೆ ಸವಾಲ್ ಹಾಕಿದರು. ಹೈದರಾಬಾದ್‌ನಲ್ಲಿ ಹಮ್ಮಿಕೊಂಡಿದ್ದ 'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ತೊಲಗಿಸಿ ಮಹಾ ಪಾದಯಾತ್ರೆ ಕಾರ್ಯಕ್ರಮವನ್ನುದ್ದೇಶಿಸಿ ಅವರು ಮಾತನಾಡಿದರು. ಇದೇ ವೇಳೆ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಅಭಿಯಾನ ವಿರೋಧಿಸಿ ದೇಶಾದ್ಯಂತ ಪ್ರತಿಭಟನೆ ನಡೆಸುತ್ತಿರುವ ಕಾಂಗ್ರೆಸ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಎಸ್‌ಐಆರ್ ಕುರಿತು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಲು ಕೇಂದ್ರ ಸರ್ಕಾರ ಸಿದ್ಧವಾಗಿದೆ. ಆದರೆ ರಾಹುಲ್ ಗಾಂಧಿ ಅದರಲ್ಲಿ ಭಾಗವಹಿಸುವುದಿಲ್ಲ, ಏಕೆಂದರೆ ಅವರಿಗೆ ಸಂಸತ್ತು ಸುಗಮವಾಗಿ ನಡೆಯುವುದು ಇಷ್ಟವಿಲ್ಲ ಎಂದರಲ್ಲದೇ, ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಬಯಸುತ್ತಿದೆ. ಸಂಸತ್ತು ನಡೆದರೆ, ಚರ್ಚೆಯಲ್ಲಿ ವಿಪಕ್ಷ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರ ಮುಂದೆ ಸೋಲುತ್ತಾರೆ ಎಂದು ಪ್ರತಿಪಾದಿಸಿದರು. ಮುಂದುವರಿದು, ಕಾಂಗ್ರೆಸ್ ಪಕ್ಷವು 'ವೆಂಟಿಲೇಟರ್' ಮೇಲಿರುವ ರೋಗಿಯಂತಿದೆ. ಅಂತಹ ಪಕ್ಷವು ಪ್ರಧಾನಿ ಮೋದಿ ಅವರೊಂದಿಗೆ ಮ್ಯಾರಥಾನ್ ಓಟದಲ್ಲಿ ಸ್ಪರ್ಧಿಸಲು ಸಾಧ್ಯವೇ ಎಂದು ಪ್ರಶ್ನಿಸಿದ ಅಮಿತ್ ಶಾ, ಕಾಂಗ್ರೆಸ್‌ನ ನಾಯಕ ತೆಲಂಗಾಣದ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರ ಎದುರು ಸ್ಪರ್ಧೆ ಮಾಡಿದ್ರೂ ಕೂಡ ಸೋಲ್ತಾರೆ ಎಂದು ವ್ಯಂಗ್ಯವಾಡಿದರು.

ಇವಿಎಂನಲ್ಲಿ ದೋಷವಿದ್ದರೆ ರೇವಂತ್ ರೆಡ್ಡಿ ಸಿಎಂ ಆಗಿದ್ದು ಹೇಗೆ?: ರಾಹುಲ್ ಜೀ, ಒಂದು ವೇಳೆ ಇವಿಎಂ ಯಂತ್ರಗಳಲ್ಲಿ ದೋಷವಿದ್ದರೆ, ನಿಮ್ಮ ರೇವಂತ್ ರೆಡ್ಡಿ ಹೇಗೆ ಮುಖ್ಯಮಂತ್ರಿಯಾದರು? ಕೇರಳ, ತಮಿಳುನಾಡು ಮತ್ತು ಹಿಮಾಚಲ ಪ್ರದೇಶಗಳಲ್ಲಿ ನಿಮ್ಮ ಪಕ್ಷದ ಸರ್ಕಾರಗಳು ಹೇಗೆ ಅಧಿಕಾರಕ್ಕೆ ಬಂದವು? ಅಷ್ಟೊಂದು ಕೆಟ್ಟದಾಗಿದ್ದರೆ, ನೀವು ಅಧಿಕಾರ ಸ್ವೀಕಾರ, ಪ್ರಮಾಣವಚನವನ್ನೇ ತೆಗೆದುಕೊಳ್ಳಬಾರದಿತ್ತು. ನೀವು ಗೆದ್ದಾಗ ಅದರ ಶ್ರೇಯಸ್ಸು ಜನರಿಗೆ ಸಲ್ಲುತ್ತದೆ. ಸೋತಾಗ ಮಾತ್ರಗಳಲ್ಲಿ ದೋಷ ಕಾಣಿಸುತ್ತದೆ ಎಂದು ತಿವಿದರು.

ನುಸುಳುಕೋರರನ್ನು ರಕ್ಷಿಸುವ ಯತ್ನ

ಕಾಂಗ್ರೆಸ್‌ನ ರ‍್ಯಾಲಿಯು ನುಸುಳುಕೋರರನ್ನ ಉಳಿಸುವ ಕಾರ್ಯಕ್ರಮ. ಕಾಂಗ್ರೆಸ್ ಪಕ್ಷವು ಬಾಂಗ್ಲಾದೇಶಿ ಒಳನುಸುಳುಕೋರರನ್ನ ರಕ್ಷಿಸಲು ಬಯಸುತ್ತಿದೆ. ಆದ್ರೆ ಮತದಾರರ ಪಟ್ಟಿಯಿಂದ ಪ್ರತಿಯೊಬ್ಬ ಒಳನುಸುಳುಕೋರನ ಹೆಸರನ್ನ ತೆಗೆದುಹಾಕಲು ಬಿಜೆಪಿ ಬದ್ಧವಾಗಿದೆ. ಭಾರತದ ನಾಗರಿಕರಿಗೆ ಮಾತ್ರ ಚುನಾವಣೆಯಲ್ಲಿ ಮತ ಚಲಾಯಿಸಲು ಹಕ್ಕು, ಅವಕಾಶ ಇದೆ ಎಂದು ಸ್ಪಷ್ಟಪಡಿಸಿದರು. ಕಾಂಗ್ರೆಸ್ ಪಕ್ಷವು ನಕಲಿ ಮತದಾನದ ಮೂಲಕ ಚುನಾವಣೆಗಳನ್ನ ಗೆಲ್ಲಲು ಬಯಸುತ್ತಿದೆ. ಒಬ್ಬ ವ್ಯಕ್ತಿಗೆ ಎರಡು ಮತಗಳಿದ್ದರೆ, ಅವುಗಳಲ್ಲಿ ಒಂದನ್ನು ರದ್ದುಗೊಳಿಸಬೇಕಲ್ಲವೇ? ಈಗ 'ರಾಹುಲ್ ಬಾಬಾ' ಅವರ ಹೊಟ್ಟೆ ನೋವಿಗೆ ಕಾರಣವೇನು? ಎಂದು ನೋಡೋಣ. 3 ಕೋಟಿ ಮತಗಳು ಅಸ್ತಿತ್ವದಲ್ಲೇ ಇಲ್ಲದ ವ್ಯಕ್ತಿಗಳಿಗೆ ಸೇರಿವೆ. ಇವರೆಲ್ಲರೂ ಬಾಂಗ್ಲಾದೇಶಿ ಒಳನುಸುಳುಕೋರರು ಎಂದು ಹರಿಹಾಯ್ದರು.

ಎರಡು ಕೇಂದ್ರ ಸಚಿವ ಸ್ಥಾನಗಳ ಪ್ರಸ್ತಾಪ

NCPಯನ್ನು ಒಂದೇ ಘಟಕವಾಗಿ NDA ಮೈತ್ರಿಕೂಟಕ್ಕೆ ಸೇರಿಸಿಕೊಳ್ಳಲು ಬಿಜೆಪಿ ಉತ್ಸುಕವಾಗಿದೆ. ಎರಡೂ ಬಣಗಳ ನಡುವೆ ಅಧಿಕಾರ ಸಮತೋಲನ ಕಾಯ್ದುಕೊಳ್ಳುವ ಉದ್ದೇಶದಿಂದ ಕೇಂದ್ರ ಸಚಿವ ಸಂಪುಟದಲ್ಲಿ ಎರಡು ಸ್ಥಾನಗಳನ್ನು ನೀಡುವ ಪ್ರಸ್ತಾಪವನ್ನು ಬಿಜೆಪಿ ನಾಯಕತ್ವ ಮುಂದಿಟ್ಟಿದೆ ಎಂದು ಮೂಲಗಳು ತಿಳಿಸಿವೆ. ಎನ್‌ಸಿಪಿಯನ್ನು ಪ್ರತ್ಯೇಕ ಪಕ್ಷವಾಗಿ ಉಳಿಸಿಕೊಂಡರೆ ಮಹಾರಾಷ್ಟ್ರದಲ್ಲಿ ಬ್ರಾಹ್ಮಣೇತರ ಮತ್ತು ಮರಾಠ ಮತಗಳನ್ನು ಒಗ್ಗೂಡಿಸಲು ಮೈತ್ರಿಕೂಟಕ್ಕೆ ನೆರವಾಗಲಿದೆ ಎಂಬುದು ಬಿಜೆಪಿ ಮೂಲಗಳ ಲೆಕ್ಕಾಚಾರ ಎನ್ನಲಾಗಿದೆ.

ಅಧಿಕಾರ ಹಂಚಿಕೆಯ ಸಂದರ್ಭದಲ್ಲಿ ಪಕ್ಷದ ಮೂಲ ನಾಯಕರನ್ನು ನಾಯಕತ್ವ ಕಡೆಗಣಿಸುತ್ತಿದೆ ಎಂಬ ಆರೋಪ ಬಿಜೆಪಿಯಲ್ಲೂ ಕೇಳಿಬಂದಿದೆ. ಇದರಿಂದ ಪಕ್ಷದ ಕಾರ್ಯಕರ್ತರು ಮತ್ತು ಸಾಂಪ್ರದಾಯಿಕ ನಾಯಕರು ಅಸಮಾಧಾನಗೊಂಡಿದ್ದಾರೆ. ಮಿತ್ರಪಕ್ಷಗಳ ಬಲ ಕುಗ್ಗದಂತೆ ಎಚ್ಚರಿಕೆ ವಹಿಸಲು ಬಿಜೆಪಿ ವರಿಷ್ಠರು ಬಯಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪದವಿ, ಅಧಿಕಾರಕ್ಕಾಗಿ ನಾಯಕರ ಪೈಪೋಟಿ

NCP ವಿಲೀನದ ಪ್ರಯತ್ನಕ್ಕೆ ಕೆಲವು ನಾಯಕರ ವೈಯಕ್ತಿಕ ಮಹತ್ವಾಕಾಂಕ್ಷೆಗಳೇ ಅಡ್ಡಿಯಾಗಿವೆ ಎಂದು ಬಿಜೆಪಿ ಮೂಲಗಳು ಹೇಳಿವೆ.ರಾಜ್ಯಸಭಾ ಸದಸ್ಯ ಪಾರ್ಥ ಪವಾರ್ ಅವರು ತಮ್ಮತಾಯಿ ಸುನೇತ್ರಾ ಪವಾರ್ ಮಹಾರಾಷ್ಟ್ರ ಸರಕಾರದಲ್ಲಿ ಹಣಕಾಸು ಖಾತೆ ಹೊಂದಬೇಕೆಂದು ಬಯಸುತ್ತಿದ್ದಾರೆ. ಈ ಹಿಂದೆ ಅವರ ತಂದೆ, ದಿವಂಗತ ಅಜಿತ್ ಪವಾರ್ ಅವರು ದೇವೇಂದ್ರ ಫಡಣವೀಸ್ ನೇತೃತ್ವದ ಸರಕಾರದಲ್ಲಿ ಇದೇ ಖಾತೆಯನ್ನು ನಿರ್ವಹಿಸಿದ್ದರು. ಇದರ ಜತೆಗೆ, ಪಾರ್ಥ ಪವಾರ್ ರಾಷ್ಟ್ರೀಯ ಅಧ್ಯಕ್ಷರಾಗುವ ಇಂಗಿತವನ್ನೂ ವ್ಯಕ್ತಪಡಿಸಿದ್ದಾರೆ ಎಂದು ತಿಳಿದುಬಂದಿದೆ.

ಆದರೆ,NCP ರಾಜ್ಯ ಘಟಕದ ಅಧ್ಯಕ್ಷ ಸುನಿಲ್ ತಟ್ಕರೆ, ಕಾರ್ಯಾಧ್ಯಕ್ಷ ಪ್ರಫುಲ್ ಪಟೇಲ್ ಮತ್ತು ಭಗನ್ ಭುಜಬಲ್ ಅವರಂತಹ ಹಿರಿಯ ನಾಯಕರು ಅಧಿಕಾರ ಹಂಚಿಕೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಮತ್ತು ಸೂಕ್ತ ಪ್ರಾತಿನಿಧ್ಯ ಸಿಗಬೇಕು ಎಂದು ಬಯಸುತ್ತಿದ್ದಾರೆ ಎನ್ನಲಾಗಿದೆ.

1 ಸಂಸತ್ತಿನ ವಿಶೇಷ ಅಧಿವೇಶನಕ್ಕೆ ಸಿದ್ಧ

2 ಎಸ್ ಐ ಆರ್ ಕುರಿತು ಚರ್ಚೆಗೆ ಬನ್ನಿ

3 ಅಮಿತ್ ಶಾ ಭೇಟಿಯಾದ ಪವನ್ ಕಲ್ಯಾಣ್, ಚಿರಂಜೀವಿ, ರಾಮ್ ಚರಣ್ ಹೈದರಾಬಾದ್‌ನಲ್ಲಿ ಮಹತ್ವದ ಸಮಾಗಮ!



ಹೈದರಾಬಾದ್‌ನಲ್ಲಿ ಬಿಜೆಪಿ ಶಕ್ತಿ ಪ್ರದರ್ಶನ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆಯೋಜಿಸಿದ್ದ ಅಣಕು ಸಂಸತ್ ಕಾರ್ಯಕ್ರಮವನ್ನು ಉಲ್ಲೇಖಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋಮವಾರ ತೀವ್ರ ವಾಗ್ದಾಳಿ ನಡೆಸಿದರು. ಹೈದರಾಬಾದ್‌ನಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ 'ಲೋಕತಂತ್ರ ಬಚಾವೋ, ಅರಾಜಕತಾ ಹಟಾವೋ' ಪಾದಯಾತ್ರೆಯಲ್ಲಿ ಮಾತನಾಡಿದ ಅವರು, ರಾಹುಲ್ ಗಾಂಧಿ ಅಣಕು ಸಂಸತ್ತಿನಲ್ಲಿ ಪ್ರಧಾನಿಯ ಪಾತ್ರವಹಿಸಬೇಕಿತ್ತು ಎಂದು ವ್ಯಂಗ್ಯವಾಡಿದರು. ನೈಜ ಸಂಸತ್ತಿನಲ್ಲಿ ಅವರಿಗೆ ಪ್ರಧಾನಿ ಸ್ಥಾನದಲ್ಲಿ ಕೂರುವ ಅವಕಾಶ ಎಂದಿಗೂ ಸಿಗುವುದಿಲ್ಲ ಎಂದು ಟೀಕಿಸಿದರು.

ಕೆಪಿಎಸ್‌ಸಿ ಅಕ್ರಮ ನೇಮಕಾತಿ ಪ್ರಕರಣಗಳ ತನಿಖೆಗೆ ಎಸ್‌ಐಟಿ ರಚಿಸಿದ ರಾಜ್ಯ ಸರ್ಕಾರ

ಕರ್ನಾಟಕ ಹೈಕೋರ್ಟ್ ಸೆ.21ರಂದು ನೀಡಿದ್ದ ನಿರ್ದೇಶನದಂತೆ ಎಸ್‌ಐಟಿ ರಚನೆಗೆ ಸಂಬಂಧಿಸಿದ ಅಧಿಸೂಚನೆಯನ್ನು ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಸಲ್ಲಿಸಿದೆ.

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ನೇಮಕಾತಿಯಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದ ಎರಡು ಪ್ರಮುಖ ಪ್ರಕರಣಗಳ ತನಿಖೆಗಾಗಿ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಿದೆ. ಕರ್ನಾಟಕ ಹೈಕೋರ್ಟ್ ಸೆ.21ರಂದು ನೀಡಿದ್ದ ನಿರ್ದೇಶನದಂತೆ ಎಸ್‌ಐಟಿ ರಚನೆಗೆ ಸಂಬಂಧಿಸಿದ ಅಧಿಸೂಚನೆಯನ್ನು ರಾಜ್ಯ ಸರ್ಕಾರ ನ್ಯಾಯಾಲಯಕ್ಕೆ ಸಲ್ಲಿಸಿದೆ.

ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಪೀಠದ ಮುಂದೆ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರು ಎಸ್‌ಐಟಿ ರಚನೆಯ ಅಧಿಸೂಚನೆಯನ್ನು ಮಂಡಿಸಿದರು. ಇದೇ ವೇಳೆ ಎಸ್‌ಐಟಿಗೆ ಮುಖ್ಯಸ್ಥರು ಹಾಗೂ ಇತರ ಅಧಿಕಾರಿಗಳ ನೇಮಕಕ್ಕೆ ಸಂಬಂಧಿಸಿದ ವಿಚಾರವೂ ನ್ಯಾಯಾಲಯದಲ್ಲಿ ಚರ್ಚೆಗೆ ಬಂದಿತು.

ಎಸ್‌ಐಟಿ ಮುಖ್ಯಸ್ಥರಾಗಿ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಹಾಗೂ ತಂಡದ ಮತ್ತೊಬ್ಬ ಸದಸ್ಯರಾಗಿ ದಿವ್ಯ ಗೋಪಿನಾಥ್ ಅವರನ್ನು ನೇಮಿಸುವ ವಿಚಾರಕ್ಕೆ ರಾಜ್ಯ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಪರ್ಯಾಯವಾಗಿ ನಾಲ್ವರು ಎಡಿಜಿಪಿ ಶ್ರೇಣಿಯ ಅಧಿಕಾರಿಗಳ ಹೆಸರುಗಳನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಲಾಗಿದೆ.

ಹೀಗಾಗಿ ಎಸ್‌ಐಟಿಯ ಮುಖ್ಯಸ್ಥರು ಮತ್ತು ಸದಸ್ಯರ ಆಯ್ಕೆ ಕುರಿತ ಅಂತಿಮ ನಿರ್ಧಾರ ಇನ್ನಷ್ಟೇ ಹೊರಬೀಳಬೇಕಿದೆ. ಪ್ರಕರಣದ ಮುಂದಿನ ವಿಚಾರಣೆಯನ್ನು ನ್ಯಾಯಾಲಯ ಮುಂದೂಡಿದೆ. ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳ ತನಿಖೆಯನ್ನು ಎಸ್‌ಐಟಿಗೆ ವಹಿಸುವಂತೆ ಕರ್ನಾಟಕ ಹೈಕೋರ್ಟ್ ಸೆಪ್ಟೆಂಬರ್ 21ರಂದು ನೀಡಿದ್ದ



ಜನರಲ್ ನ್ಯಾಯಾಲಯಕ್ಕೆ ಮಾಹಿತಿ

ಆರ್. ಹಿತೇಂದ್ರ, ಬಿ.ಕೆ.ಸಿಂಗ್, ಎಸ್.ಮುರುಗನ್ ಹಾಗೂ ಸೌಮೇಂದು ಮುಖರ್ಜಿ ಅವರ ಹೆಸರುಗಳನ್ನು ಸರ್ಕಾರ ಪ್ರಸ್ತಾಪಿಸಿದೆ. ರಾಜ್ಯದಲ್ಲಿ ಒಟ್ಟು 16 ಎಡಿಜಿಪಿ ದರ್ಜೆಯ ಅಧಿಕಾರಿಗಳಿದ್ದಾರೆ ಎಂದು ಅಡ್ವೋಕೇಟ್ ಜನರಲ್ ನ್ಯಾಯಾಲಯಕ್ಕೆ ಮಾಹಿತಿ ನೀಡಿದರು. ಇತ್ತ, ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವಂತೆ ಅರ್ಜಿ ಸಲ್ಲಿಸಿರುವ ಬಿಜೆಪಿ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಪರ ವಕೀಲರು, ಸರ್ಕಾರ ಸೂಚಿಸಿರುವ ನಾಲ್ವರು ಅಧಿಕಾರಿಗಳ ಹೆಸರುಗಳ ಕುರಿತು ತಮ್ಮ ಆಕ್ಷೇಪಣೆಗಳನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಆದೇಶವನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ಈಗಾಗಲೇ ಸಿಐಡಿ ಮತ್ತು ವಿಧಾನಸೌಧ ಪೊಲೀಸರು ತನಿಖೆ ನಡೆಸುತ್ತಿದ್ದು, ಪ್ರಕರಣಗಳು ತನಿಖೆಯ ಅಂತಿಮ ಹಂತದಲ್ಲಿವೆ. ತನಿಖಾ ಸಂಸ್ಥೆಗಳ ವಿರುದ್ಧ ನಿರ್ದಿಷ್ಟ ಆರೋಪಗಳಿಲ್ಲದಿರುವಾಗ ಹೊಸ ತನಿಖೆಯ ಅಗತ್ಯವಿಲ್ಲ ಎಂಬುದು ಸರ್ಕಾರದ ವಾದವಾಗಿತ್ತು.

ಆದರೆ, ಪ್ರಕರಣಗಳ ಗಂಭೀರತೆ ಹಾಗೂ ಕೆಪಿಎಸ್‌ಸಿಯ ಉನ್ನತ ಅಧಿಕಾರಿಗಳೂ ಅಕ್ರಮಗಳಲ್ಲಿ ಭಾಗಿಯಾಗಿರುವ ಸಾಧ್ಯತೆಯನ್ನು ಪರಿಗಣಿಸಿ, ಉನ್ನತ ಶ್ರೇಣಿಯ ಅಧಿಕಾರಿಗಳನ್ನು ಒಳಗೊಂಡ ಎಸ್‌ಐಟಿಯಿಂದ ತನಿಖೆ ನಡೆಸುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿತ್ತು.

ಈ ಹಿನ್ನೆಲೆಯಲ್ಲಿ ಎಸ್‌ಐಟಿ ರಚಿಸುವ ಹೈಕೋರ್ಟ್‌ನ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ಸೂಕ್ತ ಕಾರಣಗಳಿಲ್ಲ ಎಂದು ಸ್ಪಷ್ಟಪಡಿಸಿತ್ತು. ಆದರೆ, ಪ್ರಕರಣಗಳ ಕುರಿತು ಸಂಪೂರ್ಣವಾಗಿ ಹೊಸದಾಗಿ ತನಿಖೆ ಆರಂಭಿಸುವ ಅಗತ್ಯವಿಲ್ಲ ಎಂದು ಹೇಳಿದ್ದ ಸುಪ್ರೀಂ ಕೋರ್ಟ್, ಈಗಾಗಲೇ ಸಿಐಡಿ ಮತ್ತು ವಿಧಾನಸೌಧ ಪೊಲೀಸರು ನಡೆಸಿರುವ ತನಿಖೆಯ ಮುಂದುವರಿದ ಭಾಗವಾಗಿ ಹೆಚ್ಚಿನ ತನಿಖೆ ನಡೆಸುವಂತೆ ಎಸ್‌ಐಟಿಗೆ ಸೂಚಿಸಿತ್ತು.


ಎಸ್‌ಐಟಿಯ ಮುಖ್ಯಸ್ಥರ ನೇಮಕ ಹಾಗೂ ರಾಜ್ಯ ವಿಧಿವಿಜ್ಞಾನ ಪ್ರಯೋಗಾಲಯದ ನಿರ್ದೇಶಕರನ್ನು ತಂಡದಲ್ಲಿ ಸೇರಿಸುವ ವಿಚಾರವಾಗಿಯೂ ಸರ್ಕಾರ ತನ್ನ ಆತಂಕವನ್ನು ವ್ಯಕ್ತಪಡಿಸಿತ್ತು. ತನಿಖೆಯ ಸಂದರ್ಭದಲ್ಲಿ ಸಂಗ್ರಹಿಸಲಾದ ಸಾಕ್ಷ್ಯಗಳು ವಿಧಿವಿಜ್ಞಾನ ವಿಶ್ಲೇಷಣೆಗೆ ಒಳಪಡಬೇಕಾಗಬಹುದು. ಅಂತಹ ಸಂದರ್ಭದಲ್ಲಿ ಹಿತಾಸಕ್ತಿ ಸಂಘರ್ಷ ಉಂಟಾಗುವ ಸಾಧ್ಯತೆಯಿದೆ ಎಂಬುದು ಸರ್ಕಾರದ ಆಕ್ಷೇಪವಾಗಿತ್ತು. ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳ ತನಿಖೆಯನ್ನು ಎಸ್‌ಐಟಿಗೆ ವಹಿಸುವಂತೆ ಕರ್ನಾಟಕ ಹೈಕೋರ್ಟ್ ಸೆಪ್ಟೆಂಬರ್ 21ರಂದು ನೀಡಿದ್ದ ಈ ಹಿನ್ನೆಲೆಯಲ್ಲಿ ಪರ್ಯಾಯ ಅಧಿಕಾರಿಗಳ ಹೆಸರುಗಳನ್ನು ಹೈಕೋರ್ಟ್‌ಗೆ ಸಲ್ಲಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ಒಟ್ಟಿನಲ್ಲಿ, ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳ ಎರಡು ಪ್ರಕರಣಗಳ ಹೆಚ್ಚಿನ ತನಿಖೆಗೆ ಎಸ್‌ಐಟಿ ರಚನೆಯ ಪ್ರಕ್ರಿಯೆ ಆರಂಭವಾಗಿದ್ದು, ತನಿಖಾ ತಂಡದ ನೇತೃತ್ವ ಮತ್ತು ಸದಸ್ಯರ ಆಯ್ಕೆ ಕುರಿತು ಇಂದಿನ ಹೈಕೋರ್ಟ್ ವಿಚಾರಣೆ ಮಹತ್ವ ಪಡೆದುಕೊಂಡಿದೆ.

ಈ ದಿನದ ದರ ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 13,937/Gram 24ct ₹ 12,775 /Gram 22ct ಬೆಳ್ಳಿ: ₹200.00/

ಐವರ ಮೃತದೇಹ ಕರ್ನಾಟಕಕ್ಕೆ ಆಗಮನ, ಸ್ವಗ್ರಾಮಗಳಲ್ಲಿ ಅಂತ್ಯಕ್ರಿಯೆ

• ಉದಯವಾಹಿನಿ, ಬೆಂಗಳೂರು

ಉತ್ತರಾಖಂಡದ ಜೋಶಿಮಠ ಸಮೀಪ ಸಂಭವಿಸಿದ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟ ಕರ್ನಾಟಕದ ಐವರ ಮೃತದೇಹಗಳನ್ನು ರಾಜ್ಯಕ್ಕೆ ತರಲಾಗಿದ್ದು, ಅವರವರ ಸ್ವಗ್ರಾಮಗಳಿಗೆ ತಲುಪಿಸಲಾಗಿದೆ. ಸೋಮವಾರ ಕುಟುಂಬಸ್ಥರು ಹಾಗೂ ಬಂಧುಗಳ ಸಮ್ಮುಖದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ದುರಂತದಲ್ಲಿ ಮೃತಪಟ್ಟವರನ್ನು ಹಾಸನದ ಉದ್ಯಮಿ ಪ್ರತಾಪ್, ಬೆಂಗಳೂರಿನ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸ್ ಇನ್ ಸ್ಪೆಕ್ಟರ್ ಅರುಣ್ ಸಾಲುಂಕೆ, ವಕೀಲರಾದ ಶಂಕರಗೌಡ ಮತ್ತು ಕೆ. ಸುಧೀರ್ ಹಾಗೂ ಕೋಳಿ ಉದ್ಯಮಿ ಎಚ್.ಎಸ್. ನಟರಾಜ್ ಎಂದು


ಉದಯವಾಹಿನಿ ಚಿತ್ರ

ಗುರುತಿಸಲಾಗಿದೆ. ಭಾನುವಾರ ತಡರಾತ್ರಿ, ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಐವರ ಮೃತದೇಹಗಳು ತಲುಪಿದ್ದವು. ಬಳಿಕ ಅಲ್ಲಿಂದ ಪ್ರತ್ಯೇಕ ವಾಹನಗಳ ಮೂಲಕ ಅವರವರ ಸ್ವಗ್ರಾಮಗಳಿಗೆ ಕೊಂಡೊಯ್ಯಲಾಯಿತು. ಹೆಲಿಕಾಪ್ಟರ್‌ನ ಪೈಲಟ್ ಕ್ಯಾಪ್ಟನ್ ಹಿಮಾಂಶು ಕೂಡ ಈ ದುರಂತದಲ್ಲಿ ಮೃತಪಟ್ಟಿದ್ದರು.

ನ್ಯಾಯಾಧೀಶನಾಗಬೇಕೆಂಬ ಕನಸು ಹೊತ್ತಿದ್ದ ದಾವಣಗೆರೆ ವಕೀಲ ಉತ್ತರಾಖಂಡ್ ಹೆಲಿಕಾಪ್ಟರ್ ದುರಂತದಲ್ಲಿ ಸಾವು! ಸ್ವಗ್ರಾಮದಲ್ಲಿ ಪೊಲೀಸ್ ಇನ್ಸ್ ಪೆಕ್ಟರ್ ಅಂತ್ಯಕ್ರಿಯೆ

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಅರಟಾಳ ಗ್ರಾಮಕ್ಕೆ ಪೊಲೀಸ್ ಇನ್ಸ್ ಪೆಕ್ಟರ್ ಅರುಣ್ ಸಾಲುಂಕೆ ಅವರ ಮೃತದೇಹ ತಲುಪಿದೆ.

ಸೋಮವಾರ ಸ್ವಗ್ರಾಮದಲ್ಲೇ ಅವರ ಅಂತ್ಯಕ್ರಿಯೆ ನೆರವೇರಲಿದೆ. ಬೆಂಗಳೂರಿನಲ್ಲಿ ಪತ್ನಿ ಹಾಗೂ ಇಬ್ಬರು ಮಕ್ಕಳೊಂದಿಗೆ ವಾಸವಾಗಿದ್ದ ಅವರು, ಕರ್ತವ್ಯದಲ್ಲಿದ್ದಾಗಲೇ ದುರಂತದಲ್ಲಿ ಮೃತಪಟ್ಟಿರುವುದು ಕುಟುಂಬಸ್ಥರನ್ನು ಶೋಕಸಾಗರದಲ್ಲಿ ಮುಳುಗಿಸಿದೆ.

ಪವರ್ ಟಿವಿ ಕಚೇರಿ, ರಾಕೇಶ್ ಶೆಟ್ಟಿ ನಿವಾಸದ ಮೇಲೆ ದಾಳಿ, ತೀವ್ರ ಶೋಧ..!

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಅಧಿಕಾರಿಗಳು, ಖಾಸಗಿ ಸುದ್ದಿ ವಾಹಿನಿ ಪವರ್ ಟಿವಿ ಕಚೇರಿ ಹಾಗೂ ಅದರ ಮಾಲೀಕ ರಾಕೇಶ್ ಶೆಟ್ಟಿ ಅವರ ಕೊಡಿಗೇಹಳ್ಳಿಯ ನಿವಾಸದ ಮೇಲೆ ದಾಳಿ ನಡೆಸಿದ್ದಾರೆ.ಸುಮಾರು 30 ಅಧಿಕಾರಿಗಳಿದ್ದ ಸಿಸಿಬಿ ತಂಡವು ಇಂದು ಏಕಕಾಲದಲ್ಲಿ ಎರಡೂ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ನಡೆಸಿದ್ದು, ಹಲವು ದಾಖಲೆಗಳು ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪರಿಶೀಲಿಸುತ್ತಿದೆ ಎಂದು ತಿಳಿದುಬಂದಿದೆ. ಸಿದ್ದರಾಮಯ್ಯ ವಿರುದ್ಧ ಹರಿಬಿಡಲಾಗಿದ್ದ ವಿಡಿಯೊವನ್ನು ತಾವೇ ಚಿತ್ರೀಕರಿಸಿರುವುದಾಗಿ ರಾಕೇಶ್ ಶೆಟ್ಟಿ ಈ ಹಿಂದೆ ಒಪ್ಪಿಕೊಂಡಿದ್ದರು ಎನ್ನಲಾಗಿದೆ. ಅಲ್ಲದೆ, ಪವರ್ ಟಿವಿ ಕಚೇರಿ ಮೇಲೆ ದಾಳಿ



ಉದಯವಾಹಿನಿ ಚಿತ್ರ

ನಡೆಸಿದರೆ ಇಂತಹ ಇನ್ನೂ ಹಲವು ವಿಡಿಯೊಗಳು ಪತ್ತೆಯಾಗಲಿವೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದರು.

ಈ ಹೇಳಿಕೆಗಳು ಹಾಗೂ ಪ್ರಕರಣದ ತನಿಖೆಯ ಬೆಳವಣಿಗೆಗಳ ಬೆನ್ನಲ್ಲೇ ಸಿಸಿಬಿ ಅಧಿಕಾರಿಗಳು ಪವರ್ ಟಿವಿ ಕಚೇರಿ ಮತ್ತು ರಾಕೇಶ್ ಶೆಟ್ಟಿ ಅವರ ನಿವಾಸದ ಮೇಲೆ ದಾಳಿ ನಡೆಸಿದ್ದಾರೆ. ಎರಡೂ ಸ್ಥಳಗಳಲ್ಲಿ ಅಧಿಕಾರಿಗಳ ಪರಿಶೀಲನೆ ಮುಂದುವರಿದಿದೆ.

ನನ್ನ ಮೇಲೆ ಇಡಿ, ಐಟಿ ಛೂ ಬಿಡಲು ಕೇಂದ್ರ ಸಚಿವರ ಒತ್ತಡ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕೆಪಿಎಸ್‌ಸಿ ತನಿಖೆಯನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಂಡು, ನನ್ನ ಹಾಗೂ ಸಂಪುಟ ಸಹೋದ್ಯೋಗಿಗಳ ವಿರುದ್ಧ ಐಟಿ ಇ.ಡಿ. ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುವಂತೆ ಕೇಂದ್ರ ಸಚಿವರೊಬ್ಬರು ಮೋದಿ ಸರ್ಕಾರದ ಮೇಲೆ ತೀವ್ರ ಒತ್ತಡ ಹೇರಲು ಪ್ರಯತ್ನ ನಡೆಸುತ್ತಿದ್ದಾರೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಅವರು, ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ಅಕ್ರಮ ಪ್ರಕರಣದ ತನಿಖೆಯನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಂಡು ದಾಳಿ ನಡೆಸಲು ಸಿದ್ಧತೆ ನಡೆಯುತ್ತಿರುವ ಬಗ್ಗೆ ದೆಹಲಿಯ ಅಧಿಕಾರದ ಕಾರಿಡಾರ್‌ನಲ್ಲಿ ಮಾತುಗಳು ಕೇಳಿಬರುತ್ತಿವೆ ಎಂದು ತಿಳಿಸಿದ್ದಾರೆ. ಆರ್‌ಎಸ್‌ಎಸ್‌ನ ಇತ್ತೀಚಿನ 'ಗ್ರೂಪ್-ಡಿ' ನೇಮಕಾತಿಯಂತಿರುವ ವ್ಯಕ್ತಿಯೊಬ್ಬರು ಈ ಹುನ್ನಾರದ ಹಿಂದೆ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.ಕೆಪಿಎಸ್‌ಸಿ ನೇಮಕಾತಿ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರ ಮತ್ತು ನನ್ನ ಹೆಸರನ್ನು ಸುಳ್ಳು ಆರೋಪಗಳ ಮೂಲಕ ಸಿಲುಕಿಸಲು, ಪ್ರಕರಣದ ಎಲ್ಲಾ ಆರೋಪಿಗಳ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಇ.ಡಿ.ಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ. 'ಅತ್ಯಂತ ಕಠಿಣ ಪರಿಶ್ರಮಿ ಎಂದು ಕರೆದೊಳ್ಳುವ ಸಚಿವರು, ಈ ಮಾನ್ಯ ಕೇಂದ್ರ ಸಚಿವರು ರಾಜಕೀಯವಾಗಿ ತಾವು ಒಬ್ಬರೇ ಮುಳುಗಲು ಸಿದ್ಧರಿಲ್ಲ. ತಮ್ಮ ಹತಾಶೆಯ ಪರಾಕಾಷ್ಠೆಯಲ್ಲಿ ಅವರು ತಮ್ಮ ಮೈತ್ರಿಕೂಟದ ಪಾಲುದಾರರನ್ನೂ ಜೊತೆಯಲ್ಲೇ ಮುಳುಗಿಸಲು ಹವಣಿಸುತ್ತಿದ್ದಾರೆ.

ಕನ್ನಡಿಗರೇ ಆಗಲಿ, ಮರಾಠಿಗರೇ ಆಗಲಿ ಕಾನೂನು ಕೈಗೆತ್ತಿಕೊಳ್ಳಬಾರದು

ನಮ್ಮ ನೆಲದಲ್ಲಿ ವಾಸಿಸಲು ಆಯ್ಕೆ ಮಾಡಿಕೊಂಡಿರುವವರು ಈ ನೆಲವನ್ನು ಗೌರವಿಸಬೇಕು. ಕಾನೂನು ಎಲ್ಲರಿಗೂ ಸಮಾನವಾಗಿದೆ

• ಉದಯವಾಹಿನಿ, ಬೆಂಗಳೂರು

ಕನ್ನಡಿಗರು ಮತ್ತು ಮರಾಠಿಗರು ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ಬೆಳಗಾವಿಯಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಕರಾಳ ದಿನ ಆಚರಿಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಕರ್ನಾಟಕದಲ್ಲಿ ವಾಸಿಸುವ ಪ್ರತಿಯೊಬ್ಬರೂ ತಮ್ಮ ಭಾಷೆ, ಸಮುದಾಯವನ್ನು ಮೀರಿ ಇಲ್ಲಿನ ಕಾನೂನನ್ನು ಗೌರವಿಸಬೇಕು ಎಂದು ಹೇಳಿದ್ದಾರೆ.

1 ಕಾನೂನು ಮತ್ತು ಭೂಮಿ ಗೌರವಿಸಬೇಕು
2 ನೆಲದ ಗೌರವ ಕಾಪಾಡುವ ಜವಾಬ್ದಾರಿ
3 ಆಕ್ರಮಣಕಾರಿ ಧೋರಣೆ ತಾಳಬಾರದು

ಈ ನೆಲದಲ್ಲಿ ವಾಸಿಸುವ ಪ್ರತಿಯೊಬ್ಬರೂ ಇಲ್ಲಿನ ಕಾನೂನು ಮತ್ತು ಭೂಮಿಯನ್ನು ಗೌರವಿಸಬೇಕು. ನಮ್ಮ ನೆಲದಲ್ಲಿ ವಾಸಿಸಲು ಆಯ್ಕೆ ಮಾಡಿಕೊಂಡಿರುವವರು ಈ ನೆಲವನ್ನು ಗೌರವಿಸಬೇಕು. ಕಾನೂನು ಎಲ್ಲರಿಗೂ ಸಮಾನವಾಗಿದೆ ಎಂದು ತಿಳಿಸಿದರು.

ಬೆಳಗಾವಿಯಲ್ಲಿ ಎಂಇಎಸ್ ಕರಾಳ ದಿನ ಆಚರಿಸುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕನ್ನಡಿಗರಾಗಲಿ, ಮರಾಠಿಗರಾಗಲಿ ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ರಾಜ್ಯದಲ್ಲಿ ನೆಲೆಸಿರುವ ಪ್ರತಿಯೊಬ್ಬರಿಗೂ ಈ ನೆಲದ ಗೌರವ ಕಾಪಾಡುವ ಜವಾಬ್ದಾರಿಯಿದೆ ಎಂದರು.

ಉದ್ಯೋಗ ವಿಚಾರವಾಗಿ ಐಟಿ ಕಂಪನಿಗಳ ಮೇಲೆ ದಾಳಿ ನಡೆಸುವುದು ಅಥವಾ ನೈತಿಕ ಪೊಲೀಸ್‌ಗಿರಿ ನಡೆಸುವುದನ್ನು ಕನ್ನಡಪರ ಸಂಘಟನೆಗಳು ಕೈಬಿಡಬೇಕು ಎಂದು ಸಿಎಂ ಎಚ್ಚರಿಕೆ ನೀಡಿದರು.

ತಮ್ಮ ಸಮಸ್ಯೆಗಳನ್ನು ಕಾನೂನುಬಾಹಿರ ಚಟುವಟಿಕೆಗಳ ಮೂಲಕ


ಉದಯವಾಹಿನಿ ಚಿತ್ರ

ವ್ಯಕ್ತಪಡಿಸುವ ಬದಲು ಸರ್ಕಾರದ ಗಮನಕ್ಕೆ ತರಬೇಕು ಎಂದು ಮನವಿ ಮಾಡಿದರು.ಕನ್ನಡ ಸಂಘಟನೆಗಳು ಆಕ್ರಮಣಕಾರಿ ಧೋರಣೆ ತಾಳಬಾರದು ಅಥವಾ ಐಟಿ ಕಂಪನಿಗಳ ಮೇಲೆ ದಾಳಿ ನಡೆಸಬಾರದು. ಕಾನೂನನ್ನು ಕೈಗೆತ್ತಿಕೊಳ್ಳುವುದು ಸರಿಯಲ್ಲ. ನೈತಿಕ ಪೊಲೀಸ್‌ಗಿರಿಯನ್ನು ಸಹಿಸುವುದಿಲ್ಲ. ಇಂತಹ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರ ಮತ್ತು ಪೊಲೀಸ್ ಇಲಾಖೆ ಇವೆ. ಯಾವುದೇ ದೂರು ಅಥವಾ ಸಮಸ್ಯೆಗಳಿದ್ದರೆ ಸರ್ಕಾರದ ಗಮನಕ್ಕೆ ತನ್ನಿ. ಪೊಲೀಸರು ಕಾನೂನು ಪ್ರಕಾರ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಿದರು. ಕನ್ನಡಪರ ಹೋರಾಟಗಾರರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ಹಿಂಪಡೆಯುವ ಪ್ರಕ್ರಿಯೆ ಆರಂಭಿಸುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಈ ಸಂಬಂಧ ಕಡತಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದು ತಿಳಿಸಿದರು.

ನಿಮ್ಮ ವಿರುದ್ಧ ದಾಖಲಾಗಿರುವ ಎಲ್ಲ ಪ್ರಕರಣಗಳನ್ನು ಹಿಂಪಡೆಯುವಂತೆ ಅಧಿಕಾರಿಗಳಿಗೆ ಈಗಾಗಲೇ ಸೂಚಿಸಿದ್ದೇನೆ. ಹೋರಾಟಗಾರರನ್ನು ಇಂತಹ ಪ್ರಕರಣಗಳಿಂದ ಮುಕ್ತಗೊಳಿಸಲು ಸರ್ಕಾರ ನಿರ್ಧರಿಸಿದೆ. ಆದರೆ, ಮತ್ತೆ ಇಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡರೆ ಪ್ರಕರಣಗಳನ್ನು ಹಿಂಪಡೆಯಲು ಪೊಲೀಸರು ಆಕ್ಷೇಪ ವ್ಯಕ್ತಪಡಿಸಬಹುದು. ಸರ್ಕಾರದೊಂದಿಗೆ ಸಹಕರಿಸಿ, ಕಾನೂನನ್ನು ಕೈಗೆತ್ತಿಕೊಳ್ಳದಂತೆ ಮನವಿ ಮಾಡುತ್ತೇನೆ ಎಂದರು.

ಇದೇ ವೇಳೆ ನವದೆಹಲಿಯಲ್ಲಿ ಕಾಂಗ್ರೆಸ್ ನೇತೃತ್ವದಲ್ಲಿ ನಡೆಯಲಿರುವ ಪ್ರತಿಭಟನೆ ಕುರಿತು ಮಾತನಾಡಿದ ಅವರು, ಮತದಾನದ ಹಕ್ಕು ಜೀವಿಸುವ ಹಕ್ಕಿನಷ್ಟೇ ಮಹತ್ವದ್ದಾಗಿದೆ ಎಂದರು.


ಲಕ್ಷಾಂತರ ಮತದಾರರ ಹೆಸರುಗಳನ್ನು ವ್ಯವಸ್ಥಿತವಾಗಿ ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿದೆ ಎಂದು ಆರೋಪಿಸಿದರು. ಗಡಿಯಲ್ಲಿ ಪರಿಸ್ಥಿತಿ ಉದ್ವಿಗ್ನವಾಗಿಯೇ ಮುಂದುವರಿದಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

> ಇದೇ ವೇಳೆ ಕನ್ನಡ ಮತ್ತು ಕನ್ನಡಿಗರ ಹಿತಾಸಕ್ತಿ ಕಾಪಾಡಲು ಸರ್ಕಾರ ಬದ್ಧವಾಗಿದೆ ಎಂದು ಪುನರುಚ್ಚರಿಸಿದ ಅವರು, ಅವರ ಹಿತಾಸಕ್ತಿ ರಕ್ಷಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ. ಕಾನೂನು ಉಲ್ಲಂಘಿಸುವ ಮೂಲಕ ಯಾರೂ ಸಮಸ್ಯೆ ಸೃಷ್ಟಿಸಬಾರದು ಎಂದು ಹೇಳಿದರು.
> -ಡಿ.ಕೆ. ಶಿವಕುಮಾರ್

ಮತದಾರನ ಹಕ್ಕುಗಳನ್ನು ಕಾಪಾಡಲು ಪಕ್ಷ ಬದ್ಧ

ಪ್ರತಿಯೊಬ್ಬ ನಾಗರಿಕನಿಗೂ ಮತದಾನದ ಹಕ್ಕು ದೊರೆಯುವಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿ. ಪ್ರಜಾಪ್ರಭುತ್ವವನ್ನು ರಕ್ಷಿಸಲು ಮತ್ತು ಪ್ರತಿಯೊಬ್ಬ ಮತದಾರನ ಹಕ್ಕುಗಳನ್ನು ಕಾಪಾಡಲು ಪಕ್ಷ ಬದ್ಧವಾಗಿದೆ. ದೆಹಲಿಯ ಪ್ರತಿಭಟನೆ ಯಶಸ್ವಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

2ನೇ ಹಂತದ ಅಭಿವೃದ್ಧಿ ಕಾಮಗಾರಿಗೆ ಸುರಂಗ ಮಾರ್ಗ ಕೆಲಸ ಅಡ್ಡಿ!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಹೆಬ್ಬಾಳ ಕೆರೆಯ ಎರಡನೇ ಹಂತದ ಅಭಿವೃದ್ಧಿಗಾಗಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕೆರೆಗಳ ವಿಭಾಗ ಟೆಂಡರ್‌ಗಳನ್ನು ಕರೆದಿದೆ.

ಆದರೆ, ಎಸ್ಟೀಮ್ ಮಾಲ್ ನಿಂದ ಬ್ಯಾಪ್ಟಿಸ್ಟ್ ಆಸ್ಪತ್ರೆಯವರೆಗೆ ಪ್ರಸ್ತಾಪಿಸಲಾದ 2.2 ಕಿ.ಮೀ ಉದ್ದದ ಸುರಂಗ ಮಾರ್ಗ ಕಾಮಗಾರಿಯಿಂದ ಕೆರೆ ಏರಿಯ ಕೆಲವು ಭಾಗಗಳು ಬಾಧಿತವಾಗಲಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವವರೆಗೂ ಈ ಭಾಗಗಳಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುವುದಿಲ್ಲ.

ಎರಡನೇ ಹಂತದ ಅಭಿವೃದ್ಧಿ ಕಾರ್ಯಗಳಲ್ಲಿ ಹೂಳು ತೆಗೆಯುವುದು ಮತ್ತು ಅದನ್ನು ವಿಲೇವಾರಿ ಮಾಡುವುದು, ಎಸ್ಕೇಪ್ ಗೇಟ್ (ನೀರು ಹೊರಹೋಗುವ ದ್ವಾರ) ನಿರ್ಮಾಣ, ಏರಿ ನಿರ್ಮಾಣ, ಕಲ್ಲುಹಾಸು ಹಾಗೂ ಇತರ ಸಂಬಂಧಿತ ಕೆಲಸಗಳು ಸೇರಿವೆ. ಟೆಂಡರ್ ಅಂತಿಮಗೊಂಡ ನಂತರ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಮತ್ತು ಇವು ಪೂರ್ಣಗೊಳ್ಳಲು ಸುಮಾರು 11 ತಿಂಗಳು ಬೇಕಾಗಬಹುದು ಎಂದು ಅಂದಾಜಿಸಲಾಗಿದೆ. ಈ ವಿಷಯದ ಬಗ್ಗೆ ಮಾಹಿತಿ ಇರುವ ಅಧಿಕಾರಿಯೊಬ್ಬರು, ಸುರಂಗ ಯೋಜನೆಯಿಂದ ಬಾಧಿತವಾಗುವ ಕೆರೆಯ ಏರಿಯ ಭಾಗವನ್ನು, ಆ ಪ್ರಾಧಿಕಾರವೇ ತನ್ನ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಅಭಿವೃದ್ಧಿಪಡಿಸಲಿದೆ. ಅಂದರೆ, ಸುರಂಗ ಕಾಮಗಾರಿ ನಡೆಯುವ ಸ್ಥಳದಲ್ಲಿ ಕೆರೆ ಅಭಿವೃದ್ಧಿ ಕಾರ್ಯಗಳು ತಾತ್ಕಾಲಿಕವಾಗಿ ಅಪೂರ್ಣವಾಗಿಯೇ ಉಳಿಯಲಿವೆ. ಈ ಸುರಂಗ ಯೋಜನೆಯು ಈಗಾಗಲೇ ಕಾನೂನು ತೊಡಕುಗಳನ್ನು ಎದುರಿಸುತ್ತಿದೆ. ಅಲ್ಲದೆ ಯೋಜನೆಯ ಅನುಷ್ಠಾನಕ್ಕಾಗಿ 1,128 ಮರಗಳನ್ನು ಕಡಿಯಲು ಪ್ರಸ್ತಾಪಿಸಿರುವುದರ ವಿರುದ್ಧವೂ ಆಕ್ಷೇಪಣೆಗಳು ವ್ಯಕ್ತವಾಗಿವೆ. ಇಂತಹ ಸವಾಲುಗಳ ನಡುವೆ, ಯೋಜನೆ ಯಾವ ವೇಗದಲ್ಲಿ ಮುಂದುವರಿಯುತ್ತದೆ ಎಂಬುದರ ಮೇಲೆ ಅದರ ಪೂರ್ಣಗೊಳ್ಳುವ ದಿನಾಂಕ ನಿರ್ಧಾರವಾಗಲಿದೆ ಎಂದು ತಿಳಿಸಿದರು.

'B28' ಟ್ರ್ಯಾಕ್ ರೆಡಿ; ಬೆಂಗಳೂರಿನಲ್ಲಿ 'ಸ್ಕ್ವೀಝ್ ಟೆಸ್ಟ್' ಯಶಸ್ವಿ!

• ಉದಯವಾಹಿನಿ, ಬೆಂಗಳೂರು

ದೇಶದ ರೈಲ್ವೆ ಇತಿಹಾಸದಲ್ಲೇ ಮಹತ್ವದ ಮೈಲಿಗಲ್ಲೊಂದು ದಾಖಲಾಗಿದೆ. ಭಾರತದ ಮೊದಲ ಸ್ವದೇಶಿ ನಿರ್ಮಿತ ಹೈ-ಸ್ಪೀಡ್ ಬುಲೆಟ್ ಟ್ರೈನ್ 'B28 (ಭಾರತ್ 28), ಬೆಂಗಳೂರಿನ ಬಿಇಎಂಎಲ್ ಘಟಕದಲ್ಲಿ ಅತ್ಯಂತ ನಿರ್ಣಾಯಕವಾದ ಸ್ಕ್ವೀಜ್ ಟೆಸ್ಟ್ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರ ನೇರ ಸಮ್ಮುಖದಲ್ಲಿ ಈ ಸುರಕ್ಷತಾ ಪರೀಕ್ಷೆ ನಡೆದಿದ್ದು, ರೈಲಿನ ಅಧಿಕೃತ ನಿರ್ಮಾಣ ಹಂತಕ್ಕೆ ಹಸಿರು ನಿಶಾನೆ ಸಿಕ್ಕಂತಾಗಿದೆ.

ಈ ಕುರಿತು ಮಾಹಿತಿ ಹಂಚಿಕೊಂಡ ರೈಲ್ವೆ ಸಚಿವಾಲಯ, ಭಾರತದಲ್ಲೇ ತಯಾರಾಗುತ್ತಿರುವ ಬುಲೆಟ್ ರೈಲಿನೊಂದಿಗೆ ದೇಶವು ಸ್ವದೇಶಿ ಅತಿವೇಗದ ರೈಲು ತಂತ್ರಜ್ಞಾನದತ್ತ ಮಹತ್ವದ ಹೆಜ್ಜೆ ಇಡುತ್ತಿದೆ. ಮುಂಬೈ-ಅಹಮದಾಬಾದ್ ಬುಲೆಟ್ ರೈಲು ಕಾರಿಡಾರ್‌ಗಾಗಿ ಈ ರೈಲನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದೆ. ಜಪಾನ್‌ನ ಶಿಂಕನ್ಸೆನ್ ರೈಲುಗಳಿಗಿಂತ ಭಾರತದ ಬುಲೆಟ್ ರೈಲಿನ ವೆಚ್ಚ ಕಡಿಮೆಯಾಗಿರಲಿದೆ ಎಂದು ಮೂಲಗಳು ತಿಳಿಸಿವೆ.

'ಕನ್ನಡಿಗ' ಹೆಸರಿನ ನಾಲ್ಕು ಹೊಸ ಮಾದರಿಯ 'ಎಚ್‌ಎಂಟಿವಾಚ್' ಬಿಡುಗಡೆ

• ಉದಯವಾಹಿನಿ, ಬೆಂಗಳೂರು

ಕನ್ನಡ ರಾಜ್ಯೋತ್ಸವದ ಅಂಗವಾಗಿ ಎಚ್‌ಎಂಟಿ ಲಿಮಿಟೆಡ್ 'ಎಚ್‌ಎಂಟಿ ಕನ್ನಡಿಗ' ಹೆಸರಿನ ನಾಲ್ಕು ಹೊಸ ಸರಣಿಯ ಕೈಗಡಿಯಾರಗಳನ್ನು ಬಿಡುಗಡೆ ಮಾಡಲಿದೆ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ. ಈ ಕೈಗಡಿಯಾರಗಳ ಬೆಲೆ 3,500 ರೂಪಾಯಿಯಿಂದ 4,500 ರೂಪಾಯಿಗಳವರೆಗೆ ಇರಲಿದೆ.

ಕನ್ನಡ ರಾಜ್ಯೋತ್ಸವದ ಸಂಭ್ರಮವನ್ನು ವಿಶೇಷವಾಗಿ ಪ್ರತಿಬಿಂಬಿಸುವ ಉದ್ದೇಶದಿಂದ ಈ ಹೊಸ ಸರಣಿಯ ವಾಚ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಶೀಘ್ರದಲ್ಲೇ ಎಚ್ ಎಂಟಿಯ ಎಲ್ಲಾ ವಾಚ್ ಶೋರೂಂಗಳಲ್ಲಿ ಇವು ಲಭ್ಯವಾಗಲಿವೆ ಎಂದು ತಿಳಿಸಿದರು. ಬೆಂಗಳೂರಿನ ಜಾಲಹಳ್ಳಿಯಲ್ಲಿರುವ ಹೆಚ್‌ಎಂಟಿ ಮೈದಾನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಹೊಸ ವಾಚ್ ಸರಣಿಗಳನ್ನು ಅನಾವರಣಗೊಳಿಸಲಾಗುತ್ತದೆ. ಕಾರ್ಯಕ್ರಮದ ಅಂಗವಾಗಿ ಖ್ಯಾತ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಅವರ ಸಂಗೀತ ಸಂಜೆ ಕೂಡ ಆಯೋಜಿಸಲಾಗಿದೆ. ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಕೈಗೆಟುಕುವ ಬೆಲೆಯಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಅತ್ಯುತ್ತಮ ಕೈಗಡಿಯಾರಗಳನ್ನು ಎಚ್‌ಎಂಟಿ ಪರಿಚಯಿಸುತ್ತಿದೆ ಎಂದು ಹೇಳಿದರು. ದೇಶೀಯ ವಾಚ್ ಬ್ರ್ಯಾಂಡ್ ಆಗಿರುವ ಎಚ್‌ಎಂಟಿಯ ಪರಂಪರೆಯನ್ನು ಸ್ಮರಿಸುವುದರ ಜೊತೆಗೆ ಕನ್ನಡದ ಅಸ್ಮಿತೆ ಮತ್ತು ಸಂಸ್ಕೃತಿಯನ್ನು ಗೌರವಿಸುವ ಉದ್ದೇಶದಿಂದ ಈ ಹೊಸ ಸರಣಿಯನ್ನು ಪರಿಚಯಿಸಲಾಗುತ್ತಿದೆ ಎಂದು ತಿಳಿದುಬಂದಿದೆ.

2ನೇ ವಂದೇ ಭಾರತ್ ಸ್ಲೀಪರ್ ಸಂಚಾರ: ರೈಲ್ವೆ ಇಲಾಖೆ ಗ್ರೀನ್ ಸಿಗ್ನಲ್..!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ರೈಲ್ವೆ ಪ್ರಯಾಣಿಕರಿಗೆ ಮತ್ತೊಂದು ಸಿಹಿ ಸುದ್ದಿ ಸಿಕ್ಕಿದೆ. ಬೆಂಗಳೂರು ಮತ್ತು ಮುಂಬೈ ನಡುವೆ ಹುಬ್ಬಳ್ಳಿ ಮಾರ್ಗವಾಗಿ ಎರಡನೇ ವಂದೇ ಭಾರತ್ ಸ್ಲೀಪರ್ ರೈಲು ಸಂಚರಿಸಲಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಘೋಷಿಸಿದ್ದಾರೆ.

ಬೆಂಗಳೂರಿನಿಂದ ಮುಂಬೈಗೆ ಸಂಪರ್ಕ ಕಲ್ಪಿಸುವ ದಕ್ಷಿಣ ಭಾರತದ ಮೊದಲ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ರೈಲಿನ ಉದ್ಘಾಟನಾ ಸಂದರ್ಭದಲ್ಲಿ ಅವರು ಈ ಘೋಷಣೆ ಮಾಡಿದ್ದಾರೆ. ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ಹೊರಟ ಉದ್ಘಾಟನಾ ವಿಶೇಷ ರೈಲು ಸೋಮವಾರ ಬೆಳಗ್ಗೆ 6.15ಕ್ಕೆ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್ ತಲುಪಲಿದೆ. ಪ್ರಸ್ತಾವಿತ ಎರಡನೇ ರೈಲು ಬೆಂಗಳೂರಿನಿಂದ ಹೊರಟು ಉತ್ತರ ಕರ್ನಾಟಕದ ಕೆಲವು ಭಾಗಗಳ ಮೂಲಕ ಹುಬ್ಬಳ್ಳಿ ತಲುಪಿ, ಅಲ್ಲಿಂದ ಪುಣೆ ಮಾರ್ಗವಾಗಿ ಮುಂಬೈಗೆ ಸಾಗಲಿದೆ ಎಂದು ಸಚಿವರು ವಿವರಿಸಿದ್ದಾರೆ.

ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ, ಪ್ರಹ್ಲಾದ್ ಜೋಶಿ, ವಿ. ಸೋಮಣ್ಣ ಹಾಗೂ ಬೆಂಗಳೂರಿನ ಸಂಸದರೊಂದಿಗೆ ಸಮಾಲೋಚನೆ ನಡೆಸಿ ಈ ಮಾರ್ಗವನ್ನು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಈ ರೈಲು ಆಂಧ್ರಪ್ರದೇಶದ ಕೆಲವು ಭಾಗಗಳ ಜತೆಗೆ ಉತ್ತರ ಕರ್ನಾಟಕದ ರಾಯಚೂರು, ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಿಗೂ ಸಂಪರ್ಕ ಕಲ್ಪಿಸಲಿದೆ ಎಂದರು. ಬೆಂಗಳೂರು ಮತ್ತು ಪುಣೆ ನಡುವಿನ ರೈಲು ಸಂಪರ್ಕ ಸುಧಾರಿಸಬೇಕೆಂಬ ಬೇಡಿಕೆಗಳ ಕುರಿತು ಮಾತನಾಡಿದ ಅವರು, ದೇಶದಲ್ಲಿ ಇನ್ನೂ 3,000 ಕಿ.ಮೀ. ಉದ್ದದ ಬುಲೆಟ್ ರೈಲು ಕಾರಿಡಾರ್‌ಗಳನ್ನು ಘೋಷಿಸಲಾಗುವುದು. ಇವುಗಳಲ್ಲಿ ಬೆಂಗಳೂರು-ಪುಣೆ ಮಾರ್ಗವೂ ಸೇರ್ಪಡೆಯಾಗುವ ಸಾಧ್ಯತೆಯಿದೆ ಎಂದು ಹೇಳಿದರು.

ನಂದಿನಿ ಹಾಲಿನ ಬೆಲೆ ಏರಿಕೆ ಇಂದಿನಿಂದ ಕಾಫಿ, ಟೀ ಬೆಲೆಯಲ್ಲೂ ರೂ.5 ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ನಂದಿನಿ ಹಾಲಿನ ದರ ಲೀಟರ್‌ಗೆ 8 ರಿಂದ 12 ರವರೆಗೆ ಭಾರಿ ಏರಿಕೆ ಕಂಡ ಬೆನ್ನಲ್ಲೇ, ಸಾರ್ವಜನಿಕರಿಗೆ ಮತ್ತೊಂದು ಬೆಲೆ ಏರಿಕೆಯ ಬಿಸಿ ತಟ್ಟಿದೆ. ಹೌದು, ನವೆಂಬರ್ 1ರಿಂದ ಹಾಲಿನ ಹೊಸ ದರ ಜಾರಿಗೆ ಬಂದಿದ್ದು, ಇದರ ನೇರ ಪರಿಣಾಮವಾಗಿ ಇಂದಿನಿಂದಲೇ ರಾಜ್ಯಾದ್ಯಂತ ಹೋಟೆಲ್‌ಗಳು ಮತ್ತು ಕೆಫೆಗಳಲ್ಲಿ ಕಾಫಿ ಹಾಗೂ ಟೀ ಬೆಲೆಯಲ್ಲಿ 5 ರವರೆಗೆ ಹೆಚ್ಚಳ ಮಾಡಲಾಗಿದೆ. ರಾಜ್ಯಾದ್ಯಂತ ಪ್ರತಿ ಕಪ್ ಕಾಫಿ ಮತ್ತು ಟೀ ಬೆಲೆಯಲ್ಲಿ 5 ರೂಪಾಯಿ ಏರಿಕೆಯಾಗಿದ್ದು, ಇಂದಿನಿಂದಲೇ ಹೊಸ ದರ ಜಾರಿಗೆ ಬಂದಿದೆ. ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಎಚ್ಚರಿಕೆಯ ಬೆನ್ನಲ್ಲೇ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಹಾಲಿನ ದರ ತೀವ್ರವಾಗಿ ಏರಿಕೆ ಆಗಿರುವುದರಿಂದ ಮೆನು ದರಗಳನ್ನು ಪರಿಷ್ಕರಿಸುವುದು ಅನಿವಾರ್ಯವಾಗಿದೆ ಎಂದು ಹೋಟೆಲ್ ಮಾಲೀಕರು ತಿಳಿಸಿದ್ದಾರೆ. ಏತನ್ಮಧ್ಯೆ, ಹಾಲಿನ ದರ ಏರಿಕೆ ಕೇವಲ ಕಾಫಿ, ಟೀಗೆ ಮಾತ್ರ ಸೀಮಿತವಾಗಿರದೆ, ಮುಂಬರುವ ದಿನಗಳಲ್ಲಿ ಹಾಲು ಆಧಾರಿತ ಸಿಹಿತಿಂಡಿಗಳು, ಇಡ್ಲಿ, ದೋಸೆ ಹಾಗೂ ಮಧ್ಯಾಹ್ನದ ಊಟದ ದರಗಳ ಮೇಲೂ ಪ್ರಭಾವ ಬೀರುವ ಸಾಧ್ಯತೆ ದಟ್ಟವಾಗಿದೆ. ಕೊನೆಯ ಬಾರಿಗೆ ಏಪ್ರಿಲ್ 1, 2025 ರಂದು ಸರ್ಕಾರವು ಹಾಲಿನ ಬೆಲೆಯನ್ನು ಲೀಟರ್‌ಗೆ 4 ಹೆಚ್ಚಿಸಿತ್ತು. ಅದಕ್ಕೂ ಮುನ್ನ, ಜೂನ್ 2024ರಲ್ಲಿ 500 ಮಿಲಿ ಪ್ಯಾಕೆಟ್‌ಗೆ ಹೆಚ್ಚುವರಿಯಾಗಿ 50 ಮಿಲಿ ಹಾಲು ನೀಡುವುದಕ್ಕೆ ಅನುಗುಣವಾಗಿ ಲೀಟರ್‌ಗೆ 2 ಹೆಚ್ಚಿಸಲಾಗಿತ್ತು.



ಉದಯವಾಹಿನಿ ಚಿತ್ರ

ನಂದಿನಿ ಹಾಲಿನ ಹೊಸ ದರ ಪಟ್ಟಿ

1 ಟೋನ್ಡ್ ಹಾಲು: 46 ರೂ. ಇದ್ದದ್ದು ಈಗ 54 ರೂ.
2 ಹೋಮೋಜಿನೈಸ್ಡ್ ಟೋನ್ಡ್ ಹಾಲು: 47 ರೂ. ಇದ್ದದ್ದು ಈಗ 56 ರೂ.
3 ಹೋಮೋಜಿನೈಸ್ಡ್ ಹಸುವಿನ ಹಾಲು: 50 ರೂ. ಇದ್ದದ್ದು ಈಗ 58 ರೂ.
4 ಸ್ಪೆಷಲ್ ಟೋನ್ಡ್ ಹಾಲು: 52 ರೂ. ಇದ್ದದ್ದು ಈಗ 64 ರೂ.
4 ಶುಭಂ ಹಾಲು: 52 ರೂ. ಇದ್ದದ್ದು ಈಗ 64 ರೂ. ಹೋಮೋಜಿನೈಸ್ಡ್ ಶುಭಂ ಹಾಲು: 53 ರೂ. ಇದ್ದದ್ದು ಈಗ 65 ರೂ.

ರಸ್ತೆ ನಿರ್ಮಾಣ ವಿಚಾರ : ಕುಟುಂಬದ ಮೇಲೆ ಗುಂಪಿನಿಂದ ಹಲ್ಲೆ

ಖಾಸಗಿ ಜಮೀನಿನಲ್ಲಿ ರಸ್ತೆ ನಿರ್ಮಾಣಕ್ಕೆ ಮುಂದಾಗುವ ಮೊದಲು ಯಾವುದೇ ನೋಟಿಸ್ ನೀಡಿಲ್ಲ.



• ಉದಯವಾಹಿನಿ, ಬೆಂಗಳೂರು

ಖಾಸಗಿ ಜಮೀನಿನಲ್ಲಿ ಲೇಔಟ್ ರಸ್ತೆ ನಿರ್ಮಿಸುವ ವಿಚಾರವಾಗಿ ಉಂಟಾದ ವಿವಾದ ಹಲ್ಲೆಗೆ ತಿರುಗಿರುವ ಘಟನೆ ಬೆಂಗಳೂರು ಉತ್ತರ ತಾಲ್ಲೂಕಿನ ಕಾಡಸೊಣ್ಣಪ್ಪನಹಳ್ಳಿ ಗ್ರಾಮದಲ್ಲಿ ನಡೆದಿದೆ.

ನಗರಗಿರಿ ಟೌನ್‌ಶಿಪ್‌ಗೆ ರಸ್ತೆ ನಿರ್ಮಿಸುವ ಉದ್ದೇಶದಿಂದ ಜೆಸಿಬಿ ಮೂಲಕ ಯಾವುದೇ ಮುನ್ಸೂಚನೆ ನೀಡದೆ, ಸಂಬಂಧಪಟ್ಟ ಅಧಿಕಾರಿಗಳನ್ನೂ ಕರೆತರದೆ ಕೆಲವರು ಏಕಾಏಕಿ ಜಮೀನಿಗೆ ಆಗಮಿಸಿ ರಸ್ತೆ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಈ ವೇಳೆ ಇದನೆಲ್ಲಾ ಪ್ರಶ್ನಿಸಿದ ಜಮೀನು ಮಾಲೀಕ ಮಾರುತಿ ಹಾಗೂ ಅವರ ಕುಟುಂಬಸ್ಥರ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ.

ಮಹಿಳೆಯರು, ವೃದ್ಧರು ಹಾಗೂ ಪುರುಷರ ಮೇಲೂ ಹಲ್ಲೆ ನಡೆಸಲಾಗಿದ್ದು, ಘಟನೆಯ ದೃಶ್ಯಗಳು ಮೊಬೈಲ್ ಫೋನ್‌ನಲ್ಲಿ ಸೆರೆಯಾಗಿವೆ. ಹಲ್ಲೆಯಿಂದ ಮಾರುತಿ ಕುಟುಂಬದ ಮೂವರಿಗೆ ಗಂಭೀರ ಗಾಯಗಳಾಗಿದ್ದು, ಗಾಯಾಳುಗಳನ್ನು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಖಾಸಗಿ ಜಮೀನಿನಲ್ಲಿ ರಸ್ತೆ ನಿರ್ಮಾಣಕ್ಕೆ ಮುಂದಾಗುವ ಮೊದಲು ಯಾವುದೇ ನೋಟಿಸ್ ನೀಡಿಲ್ಲ, ಅಲ್ಲದೆ, ಸಂಬಂಧಪಟ್ಟ ಅಧಿಕಾರಿಗಳ ಸಮ್ಮುಖದಲ್ಲಿಯೂ ಪ್ರಕ್ರಿಯೆ ನಡೆಸಿಲ್ಲ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ವೈದ್ಯಕೀಯ ಸಾಹಿತ್ಯ ಉಳಿಸುವ ಪ್ರಯತ್ನಕ್ಕೆ ಬೆಂಬಲ

• ಉದಯವಾಹಿನಿ, ಬೆಂಗಳೂರು

ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ ಪರಂಪರೆ ಉಳಿಸುವ ಪ್ರಯತ್ನಕ್ಕೆ ಸರ್ಕಾರದ ಬೆಂಬಲವಿದೆ'' ಎಂದು ಸಿಎಂ ಡಿ ಕೆ ಶಿವಕುಮಾರ್ ತಿಳಿಸಿದರು. ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಶಿವಕುಮಾರ್ ಅವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ 2ನೇ ಕನ್ನಡ ವೈದ್ಯಕೀಯ ಸಾಹಿತ್ಯ ಸಮ್ಮೇಳನ 2026ರ ಕಿರು ಹೊತ್ತಿಗೆ ಮತ್ತು ಲಾಂಛನವನ್ನು ಸೋಮವಾರ ಬಿಡುಗಡೆಗೊಳಿಸಿ ಮಾತನಾಡಿದರು. ''ಕನ್ನಡ ನಮ್ಮೆಲ್ಲರ ಬದುಕು. ಕನ್ನಡವನ್ನು ಉಳಿಸಲು ನಾಡಿನ ಜನ ಹೋರಾಡುತ್ತಿದ್ದಾರೆ. ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯಕ್ಕೆ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ನಮ್ಮ ನಾಡ ಭಾಷೆ, ಸಂಸ್ಕೃತಿ ಕಾಪಾಡಿ, ವೈದ್ಯರು, ದಾದಿಯರು ಕನ್ನಡವನ್ನು ಬಳಸುವ ಪ್ರಯತ್ನ ಮಾಡಬೇಕು ಎಂದರು.

ಆಂಧ್ರದ ಬಾಲಕಿಯ ಮೇಲೆ ಭೀಕರ ದಾಳಿ ಬೆಂಗಳೂರಿನಲ್ಲಿ ಚಿಕಿತ್ಸೆ

• ಉದಯವಾಹಿನಿ, ಬೆಂಗಳೂರು

ಆಂಧ್ರಪ್ರದೇಶದ ಶಾಲೆಯೊಂದರಲ್ಲಿ ಪ್ರೀತಿಯನ್ನು ನಿರಾಕರಿಸಿದ್ದಕ್ಕೆ ಮರ ಕತ್ತರಿಸುವ ಯಂತ್ರದಿಂದ ನಡೆದ ಭೀಕರ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿರುವ 14 ವರ್ಷದ ಬಾಲಕಿಗೆ ನಗರದ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ಬಾಲಕಿಯ ಆರೋಗ್ಯ ಸ್ಥಿತಿ ಇನ್ನೂ ಗಂಭೀರವಾಗಿದ್ದರೂ ಸ್ಥಿರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ. ದಾಳಿಯಲ್ಲಿ ಬಾಲಕಿಯ ಮುಖ ಹಾಗೂ ದೇಹದ ವಿವಿಧ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದು, ಹಲವು ಆಳವಾದ ಗಾಯಗಳಾಗಿವೆ. ತೀವ್ರ ರಕ್ತಸ್ರಾವದಿಂದಾಗಿ ಬಾಲಕಿಯ ಸ್ಥಿತಿ ಅತ್ಯಂತ ಗಂಭೀರವಾಗಿತ್ತು. ಈ ಹಿನ್ನೆಲೆಯಲ್ಲಿ ಬೆಂಗಳೂರಿನ ವೈದ್ಯರು ಸತತ ಸುಮಾರು 20 ಗಂಟೆಗಳ ಕಾಲ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ವಸೂಲಿ ಮಾಡ್ತಿರೋದು 12, ರೈತರಿಗೆ 7, ಉಳಿದ 5 ರೂ ನಿಮ್ಮ ಜೇಬಿಗಾ?

ಸರ್ಕಾರ ಘೋಷಣೆ ಮಾಡಿದ್ದ ದರಕ್ಕೂ ಮಾರುಕಟ್ಟೆ ದರಕ್ಕೂ ವ್ಯತ್ಯಾಸವಿದೆ ಎಂದು ಗ್ರಾಹಕರು ಆರೋಪಿಸುತ್ತಿದ್ದಾರೆ.

• ಉದಯವಾಹಿನಿ, ಬೆಂಗಳೂರು

ಹಾಲಿನ ದರ ಏರಿಕೆಗೆ ಸಾರ್ವಜನಿಕರು ಆಕ್ರೋಶಗೊಂಡಿರುವ ಬೆನ್ನಲ್ಲೇ ದರ ಏರಿಕೆ ವಿಷಯದಲ್ಲೂ ಸರ್ಕಾರ ತಪ್ಪು ಮಾಹಿತಿ ನೀಡಿದ್ದು, ಹೇಳಿದ್ದಕಿಂತಲೂ ಹೆಚ್ಚು ಏರಿಕೆ ಮಾಡಿದೆ ಎಂಬ ಆರೋಪ ಕೇಳಿಬರುತ್ತಿದೆ.

1 8 ಅಲ್ಲ 12 ರೂ ಏರಿಕೆ ಎಂದ ಗ್ರಾಹಕರು
2 ಹೊಸ ದರಗಳು ಗ್ರಾಹಕರಿಗೆ ಶಾಕ್ ನೀಡಿದ್ದು
3 ಅಲ್ಲಿಗೆ 8 ರೂ ಬದಲಿಗೆ 12 ರೂ ವಸೂಲಿ!

ಸರ್ಕಾರ ಘೋಷಣೆ ಮಾಡಿದ್ದ ದರಕ್ಕೂ ಮಾರುಕಟ್ಟೆ ದರಕ್ಕೂ ವ್ಯತ್ಯಾಸವಿದೆ ಎಂದು ಗ್ರಾಹಕರು ಆರೋಪಿಸುತ್ತಿದ್ದಾರೆ.

ಕೆಎಂಎಫ್ ನಂದಿನಿ ಹಾಲು ಮತ್ತು ಮೊಸರಿನ ಪರಿಷ್ಕೃತ ದರ ನವೆಂಬರ್ 1ರಿಂದ ಅಂದರೆ ಇಂದಿನಿಂದಲೇ ಜಾರಿಗೆ ಬಂದಿದ್ದು, ಸರ್ಕಾರದ ಘೋಷಣೆಯ ಪ್ರಕಾರ ಹಾಲಿನ ದರ ಪ್ರತಿ ಲೀಟರ್‌ಗೆ 8 ಹಾಗೂ ಮೊಸರಿನ ದರ 14 ರೂ ಹೆಚ್ಚಳವಾಗಿದೆ.

ಇನ್ನು ಇಂದು ಹೊಸ ದರಗಳು ಗ್ರಾಹಕರಿಗೆ ಶಾಕ್ ನೀಡಿದ್ದು, ಪ್ರತಿ ಲೀಟರ್ ಹಾಲಿಗೆ 8 ರೂ ಏರಿಕೆ ಎಂದು ಸರ್ಕಾರ ಹೇಳಿತ್ತು. ಆದರೆ ಪ್ರತೀ ಲೀಟರ್ ಹಾಲಿನ ದರ 12ರೂಗೆ ಏರಿಕೆಯಾಗಿದೆ ಎಂದು ಕೆಲ ಗ್ರಾಹಕರು ಆರೋಪಿಸಿದ್ದಾರೆ. ಇನ್ನು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರನ್ನು ಗುರಿಯಾಗಿಸಿಕೊಂಡು ಸರ್ಕಾರದ ನಡೆಯನ್ನು ತೀವ್ರವಾಗಿ ಆಕ್ಷೇಪಿಸಿರುವ ಮಾಜಿ ಸಂಸದರು, 8 ರೂಪಾಯಿಗಳಲ್ಲಿ 7 ರೂ


ಉದಯವಾಹಿನಿ ಚಿತ್ರ

ರೈತರಿಗೆ ಕೊಡುತ್ತೇವೆ ಎಂದಿದ್ದೀರಲ್ಲಾ ಆಪಿ ಯವರೇ, 12 ರೂ ವಸೂಲಿ ಮಾಡಿ ರೈತರಿಗೆ 7 ರೂ ಕೊಟ್ಟು 5 ರೂ.ಗಳನ್ನು ನೀವೂ ಮತ್ತು ನಿಮ್ಮ ಸಂಪುಟ ಸಹೋದ್ಯೋಗಿಗಳು ಹಂಚಿಕೊಳ್ಳುತ್ತೀರಾ ಸಾರ್ ಎಂದು ಪ್ರಶ್ನಿಸಿದ್ದಾರೆ.

ಕರ್ನಾಟಕದಲ್ಲಿ ನಂದಿನಿ ಹಾಲು ದರ ಏರಿಕೆ ವ್ಯಾಪಕ ಸುದ್ದಿಗೆ ಗ್ರಾಸವಾಗಿದ್ದು, ಸರ್ಕಾರ ಘೋಷಣೆ ಮಾಡಿದ್ದ ದರಕ್ಕೂ ಮಾರುಕಟ್ಟೆ ದರಕ್ಕೂ ವ್ಯತ್ಯಾಸವಿದೆ ಎಂದು ಗ್ರಾಹಕರು ಆರೋಪಿಸುತ್ತಿದ್ದಾರೆ.

ಕೆಎಂಎಫ್ ನಂದಿನಿ ಹಾಲು ಮತ್ತು ಮೊಸರಿನ ಪರಿಷ್ಕೃತ ದರ ನವೆಂಬರ್ 1ರಿಂದ ಅಂದರೆ ಇಂದಿನಿಂದಲೇ ಜಾರಿಗೆ ಬಂದಿದ್ದು, ಹಾಲಿನ ದರ ಪ್ರತಿ ಲೀಟರ್‌ಗೆ 8 ಹಾಗೂ ಮೊಸರಿನ ದರ 14 ರೂ ಹೆಚ್ಚಳವಾಗಿದೆ.ಸಾಮಾನ್ಯ ಟೋನ್ಡ್ ಹಾಲಿನ ಬೆಲೆ 54ಕ್ಕೆ ತಲುಪಿದ್ದು, ಹೆಚ್ಚಿಸಲಾದ 8 ರಲ್ಲಿ 7 ಮೊತ್ತವನ್ನು ನೇರವಾಗಿ ಹಾಲು ಉತ್ಪಾದಕರಿಗೆ ವರ್ಗಾಯಿಸಲಾಗುವುದು ಎಂದು ಸರ್ಕಾರ ಸ್ಪಷ್ಟಪಡಿಸಿದೆ.ಪ್ರತಿ ಲೀಟರ್ ಮೊಸರಿನ ಪ್ಯಾಕ್ ಗೆ 14 ರೂ.ವರೆಗೆ ಹೆಚ್ಚಳವಾಗಿದೆ. ಕೆಎಂಎಫ್ ನ.1 ರಿಂದ ಅನ್ವಯವಾಗುವಂತೆ ನಂದಿನಿಯ ಎಲ್ಲಾ ಮಾದರಿ ಹಾಲು ಹಾಗೂ ಮೊಸರಿನ ಪರಿಷ್ಕೃತ ದರವನ್ನು ಹೆಚ್ಚಳ ಮಾಡಿದೆ.ಇನ್ನು ಇಂದು ಹೊಸ ದರಗಳು ಗ್ರಾಹಕರಿಗೆ ಶಾಕ್ ನೀಡಿದ್ದು, ಸರ್ಕಾರ ಹೇಳಿದ್ದು 8 ರೂ ಏರಿಕೆ ಎಂದು.. ಆದರೆ ಪ್ರತೀ ಲೀಟರ್ ಹಾಲಿನ ದರ 12ರೂಗೆ ಏರಿಕೆಯಾಗಿದೆ ಎಂದು ಕೆಲ ಗ್ರಾಹಕರು ಆರೋಪಿಸಿದ್ದಾರೆ.

> ಸರ್ಕಾರವನ್ನು ಪ್ರಶ್ನಿಸಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ನಡೆಗೆ ಸಾಮಾಜಿಕ ಜಾಲತಾಣದಲ್ಲಿ ಬಳಕೆದಾರರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಇನ್ನೂ ಕೆಲವು ಬಳಕೆದಾರರು ಹಾಲಿನ ದರ ಏರಿಕೆ ವಿಷಯದಲ್ಲಿ ವಿಪಕ್ಷ ಬಿಜೆಪಿ ಧ್ವನಿ ಎತ್ತುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.-ಮಾಜಿ ಸಂಸದ ಪ್ರತಾಪ್ ಸಿಂಹ

ಮಾಜಿ ಸಂಸದ ಪ್ರತಾಪ್ ಸಿಂಹತೀವ್ರ ತರಾಟೆಗೆ

ಈ ವಿಷಯವಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ಧ್ವನಿ ಎತ್ತಿದ್ದು, ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದಾರೆ. ಹಾಲಿನ ಬೆಲೆ ಅರ್ಧ ಲೀಟರ್ ಗೆ ನಿನ್ನೆ 27 ರೂ. ಹಾಗೂ ಇಂದು 33 ರೂ ಅಲ್ಲಿಗೆ 8 ರೂ ಬದಲಿಗೆ 12 ರೂ ವಸೂಲಿ ಎಂದು ಬರೆದಿದ್ದಾರೆ.

ಸಮಸಮಾಜ ನಿರ್ಮಾಣಕ್ಕೆ ಲೋಹಿಯಾ ಚಿಂತನೆಗಳೇ ದಾರಿದೀಪ

ಪ್ರಾಥಮಿಕ ಶಾಲೆಯಿಂದ ಕಾಲೇಜಿನವರೆಗೂ ಅವರ ವಿಚಾರಗಳನ್ನು ಪರಿಚಯಿಸುವ ಅಗತ್ಯವಿದೆ.

• **ಉದಯವಾಹಿನಿ, ಮೈಸೂರು**

ಜಾತಿ ಅಸಮಾನತೆ, ಲಿಂಗಭೇದ, ಆರ್ಥಿಕ ಶೋಷಣೆ ಮತ್ತು ಸಾಮಾಜಿಕ ಅನ್ಯಾಯಗಳಿಂದ ಮುಕ್ತವಾದ ಸಮ ಸಮಾಜದ ನಿರ್ಮಾಣಕ್ಕೆ ಡಾ. ರಾಮ್ ಮನೋಹರ್ ಲೋಹಿಯಾ ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ.

ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಲೋಹಿಯಾ ಅವರ ವೈಚಾರಿಕ ಆಶಯಗಳನ್ನು ಸಮನ್ವಯಗೊಳಿಸುವ ಮೂಲಕ ಸಮಾನತೆಯ ಸಮಾಜವನ್ನು ಕಟ್ಟಲು ಸಾಧ್ಯ ಎಂದು ಕವಯಿತ್ರಿ ಚ.


ಉದಯವಾಹಿನಿ ಚಿತ್ರ

ಸರ್ವಮಂಗಳ ಅಭಿಪ್ರಾಯಪಟ್ಟರು. ಡಾ. ರಾಮ್ ಮನೋಹರ್ ಲೋಹಿಯಾ ಅವರ ಜೀವನ, ರಾಜಕೀಯ ಹೋರಾಟ, ತತ್ವಚಿಂತನೆ ಮತ್ತು ಸಮಕಾಲೀನ ಸಮಾಜದಲ್ಲಿ ಅವುಗಳ ಪ್ರಸ್ತುತತೆಯನ್ನು ಪರಿಚಯಿಸುವ ಡಾ. ನಟರಾಜ್ ಹುಳಿಯಾರ್ ಅವರ 'ಡಾಕ್ಟರ್ ಸಾಹೇಬ್' ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲೋಹಿಯಾ ಅವರ ಚಿಂತನೆಗಳು ಕೇವಲ ರಾಜಕೀಯ ಸಿದ್ಧಾಂತಗಳಾಗಿ ಉಳಿಯದೆ, ವಿದ್ಯಾರ್ಥಿಗಳ ಬದುಕಿನ ಭಾಗವಾಗಬೇಕು. ಪ್ರಾಥಮಿಕ ಶಾಲೆಯಿಂದ ಕಾಲೇಜಿನವರೆಗೂ ಅವರ ವಿಚಾರಗಳನ್ನು ಪರಿಚಯಿಸುವ ಅಗತ್ಯವಿದೆ. ಸರಳತೆ, ವೈಚಾರಿಕ ಸ್ಪಷ್ಟತೆ ಮತ್ತು ಸಾಮಾಜಿಕ ಬದ್ಧತೆಯ ಮೂಲಕ ಯುವಜನತೆಗೆ ಮಾದರಿಯಾಗಿರುವ ಲೋಹಿಯಾ ಅವರ ಜೀವನ ಮೌಲ್ಯಗಳನ್ನು ಮುಂದಿನ ತಲೆಮಾರಿಗೆ ತಲುಪಿಸಬೇಕು ಎಂದು ಹೇಳಿದರು. ಹೆಣ್ಣು-ಗಂಡಿನ ಸಮಾನತೆ, ಜಾತಿ ಮತ್ತು ವರ್ಣಭೇದ ನಿರ್ಮೂಲನೆ, ಆರ್ಥಿಕ ಸಮಾನತೆ, ಬಡತನ ನಿವಾರಣೆ ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ರಕ್ಷಣೆಯೂ ಸೇರಿದಂತೆ ಲೋಹಿಯಾ ಪ್ರತಿಪಾದಿಸಿದ ಸಪ್ತ ಕ್ರಾಂತಿಗಳ ಆಶಯಗಳನ್ನು ವಿವರಿಸಿದರು. ಜಾತಿ ವ್ಯವಸ್ಥೆಯ ಬೇರುಗಳನ್ನು ಕಿತ್ತೊಗೆಯಲು ಸಹಭೋಜನ ಮತ್ತು ಅಂತರ್ಜಾತಿ ವಿವಾಹದ ಮೂಲಕ ಸಾಮಾಜಿಕ ಬೆಸುಗೆಯನ್ನು ಬಲಪಡಿಸಬೇಕು. ಲೋಹಿಯಾ ಅವರ 'ರೊಟ್ಟಿ ಮತ್ತು ಬೇಟಿ' ಪರಿಕಲ್ಪನೆ ಇಂದಿನ ಸಮಾಜಕ್ಕೂ ಅತ್ಯಂತ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಎಚ್‌ಡಿಕೆ ಟ್ವೀಟ್, ಪತ್ರಿಕಾ ಹೇಳಿಕೆಗೆ ಸೀಮಿತ: ಸಚಿವ ಎನ್.ಚಲುವರಾಯಸ್ವಾಮಿ

ಒಂದು ಗಂಟೆಯೊಳಗೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ದಾರಿ ತಪ್ಪಿಸುತ್ತಿದ್ದಾರೆ ಎಂದು ಗೂಬೆ ಕೂರಿಸುವುದು ಅವರ ಹತಾಶೆ ತೋರಿಸುತ್ತದೆಸಲ್ಲಿಸಿದರು

• **ಉದಯವಾಹಿನಿ, ಮಂಡ್ಯ**

1 ತೊಡಕಿಲ್ಲದೆ ಕ್ಲಿಯರ್ ಮಾಡಲಾಗಿದೆ
2 ಭೂಸ್ವಾಧೀನ ಪ್ರಕ್ರಿಯೆ ಸಿದ್ಧರಿದ್ದೇವೆ
3 ಆರ್ಥಿಕ ಪ್ರಗತಿಗೆ ಸರ್ಕಾರ ಬದ್ಧವಾಗಿದೆ

ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವರಾಗಿ ಎರಡೂವರೆ ವರ್ಷವಾದರೂ ಮಂಡ್ಯಕ್ಕೆ ಹೆಮ್ಮೆಪಡುವಂತಹ ಯಾವ ಯೋಜನೆ ತಂದಿದ್ದಾರೆ. ಕೇವಲ ಟ್ವೀಟ್ ಮತ್ತು ಪತ್ರಿಕಾ ಹೇಳಿಕೆಗೆ ಸೀಮಿತವಾಗಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಟೀಕಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ಆಡಳಿತ ವ್ಯವಸ್ಥೆ ತಿಳಿದಿರುವ ಒಬ್ಬ ಮಾಜಿ ಮುಖ್ಯಮಂತ್ರಿ ಕಾಮನ್‌ಸೆನ್ಸ್ ಇಲ್ಲದೆ, ನಾನು ಭಾಷಣ ಮುಗಿಸಿದ ಒಂದು ತಾಸಿನೊಳಗೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ದಾರಿ ತಪ್ಪಿಸುತ್ತಿದ್ದಾರೆ' ಎಂದು ದೂರಿದರು.

ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎಆರ್‌ಎಐ) ಘಟಕ ಸ್ಥಾಪನೆಗೆ ಜಾಗ ನೀಡುತ್ತಿಲ್ಲ ಎಂದು ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ಸರ್ಕಾರದ ವಿರುದ್ಧ ಮಾಡಿರುವ ಆರೋಪ ಆಧಾರ ರಹಿತ. ಸಂಸ್ಥೆಯವರು ನೀಡಿದ್ದ ಚೆಕ್‌ಲಿಸ್ಟ್‌ನ ಎಲ್ಲಾ ಷರತ್ತುಗಳನ್ನು ಜಿಲ್ಲಾಡಳಿತ ಪೂರ್ಣಗೊಳಿಸಿದೆ. ಮೊದಲ ಹಂತದಲ್ಲಿ ಅವರು ಕೇಳಿದ 100 ಎಕರೆ ಜಾಗವನ್ನು ಯಾವುದೇ ತೊಡಕಿಲ್ಲದೆ ಕ್ಲಿಯರ್ ಮಾಡಲಾಗಿದೆ. ಇನ್ನೂ ಹೆಚ್ಚುವರಿ ಭೂಮಿ ಬೇಕಿದ್ದರೂ ಭೂಸ್ವಾಧೀನ ಪ್ರಕ್ರಿಯೆ ಮೂಲಕ ಒದಗಿಸಲು ಸಿದ್ಧರಿದ್ದೇವೆ ಎಂದರು.

ಜಿಲ್ಲೆಯ ಸಮಗ್ರ ಕೈಗಾರಿಕಾ ಹಾಗೂ ಆರ್ಥಿಕ ಪ್ರಗತಿಗೆ ರಾಜ್ಯ ಸರ್ಕಾರ


ಉದಯವಾಹಿನಿ ಚಿತ್ರ

ಬದ್ಧವಾಗಿದೆ. ಎಆರ್‌ಎಐ ಘಟಕ ಸ್ಥಾಪನೆಗೆ ಜಿಲ್ಲಾಡಳಿತ ಮೊದಲ ಹಂತದಲ್ಲಿ 100 ಎಕರೆ ಜಾಗವನ್ನು ವಿಳಂಬವಿಲ್ಲದೆ ಕ್ಲಿಯರ್ ಮಾಡಿದೆ. ಕಂದಾಯ ಇಲಾಖೆಯ ಕಾರ್ಯದರ್ಶಿಗೆ ಕಡತ ತಲುಪಿದ್ದು, ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದು ಅಧಿಕೃತವಾಗಿ ಸಂಸ್ಥೆಗೆ ಹಸ್ತಾಂತರಿಸಲಾಗುವುದು ಎಂದು ತಿಳಿಸಿದರು.

ನಾನು ಭಾಷಣ ಮುಗಿಸಿದ ಒಂದು ಗಂಟೆಯೊಳಗೆ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ದಾರಿ ತಪ್ಪಿಸುತ್ತಿದ್ದಾರೆ ಎಂದು ಗೂಬೆ ಕೂರಿಸುವುದು ಅವರ ಹತಾಶೆ ತೋರಿಸುತ್ತದೆ. ಕುಮಾರಸ್ವಾಮಿ ಅವರು 14 ತಿಂಗಳು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ಮಂಡ್ಯದ ಎಂಟೂ ವಿಧಾನಸಭಾ ಕ್ಷೇತ್ರಗಳಲ್ಲೂ ಅವರ ಪಕ್ಷದ ಶಾಸಕರೇ ಇದ್ದರು, ಮೂವರು ಎಂಎಲ್‌ಸಿಗಳಿದ್ದರು.

ಆ ಅವಧಿಯಲ್ಲಿ ಜಿಲ್ಲೆಗೆ ನೆನಪಿನಲ್ಲಿ ಉಳಿಯುವಂತಹ ಒಂದೇ ಒಂದು ಯೋಜನೆ ತಂದಿದ್ದಾರೆಯೇ ಎಂದು ಪ್ರಶ್ನಿಸಿದರು.

ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ ಸಂಸ್ಥೆಯಿಂದ ಕೈಗಾರಿಕೆ ಸ್ಥಾಪಿಸಲು 100 ಎಕರೆ ಜಮೀನು ಕೊಡಲಾಗಿದೆ ಎನ್ನುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಹೇಳಿಕೆ ಬಗ್ಗೆ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆಪ್ತ ಕಾರ್ಯದರ್ಶಿ, ರಾಜ್ಯದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದು ಸ್ಪಷ್ಟನೆ ಕೇಳಿದ್ದಾರೆ.

ಮಂಡ್ಯದಲ್ಲಿ ಕೇಂದ್ರದ ಬೃಹತ್ ಕೈಗಾರಿಕೆ ಸಚಿವಾಲಯದ ಅಧೀನದ ಎಆರ್‌ಎಐನಿಂದ ಸ್ಥಾಪಿಸಲು ಪ್ರಸ್ತಾಪಿಸಲಾಗಿರುವ ನಿರ್ಮಾಣ ಮತ್ತು ಮೂಲಸೌಕರ್ಯ ಉಪಕರಣಗಳ ಪರೀಕ್ಷಾ ಕೇಂದ್ರ, ಎಲೆಕ್ಟ್ರಿಕ್ ವಾಹನ ಪರೀಕ್ಷಾ ಕೇಂದ್ರ' ಸ್ಥಾಪನೆಗಾಗಿ ಭೂಮಿ ಮಂಜೂರು ಮಾಡಲಾಗಿದೆ ಎಂದು ಚಲುವರಾಯಸ್ವಾಮಿ ನೀಡಿರುವ ಹೇಳಿಕೆ ಸುಳ್ಳು ಎಂದು ಅವರು ತಿಳಿಸಿದ್ದಾರೆ.


5 ಸಾವಿರ ಹೆಕ್ಟೇರ್ ಪರ್ಯಾಯ ಅರಣ್ಯ ಭೂಮಿಯಲ್ಲಿ 2,500 ಹೆಕ್ಟೇರ್ ಸರ್ಟಿಫೈ ಆಗಿದೆ. ಕೇಂದ್ರ ಸಚಿವರಾದ ಪ್ರಲ್ಹಾದ್ ಜೋಶಿ ಮತ್ತು ಕುಮಾರಸ್ವಾಮಿ ಅವರು ಪ್ರಧಾನಿ ಬಳಿ ಸರ್ವಪಕ್ಷ ನಿಯೋಗಕ್ಕೆ ದಿನಾಂಕ ನಿಗದಿಪಡಿಸಲಿ, ನಾವು ದೆಹಲಿಗೆ ಬರುತ್ತೇವೆ' ಎಂದು ಹೇಳಿದರು.
-ಸಚಿವ ಎನ್.ಚಲುವರಾಯಸ್ವಾಮಿ

ಜಿಲ್ಲೆಗೆ ಮೆಡಿಕಲ್ ಕಾಲೇಜು ತಂದೆವು.

ಕೆಆರ್‌ಎಸ್ ಬಳಿ ಐಐಟಿ ತರಲು ಪ್ರಯತ್ನ ಮಾಡಿದೆ. ಧರ್ಮಸಿಂಗ್ ಸರ್ಕಾರವಿದ್ದಾಗ ಹೋರಾಟ ಮಾಡಿ ಜಿಲ್ಲೆಗೆ ಮೆಡಿಕಲ್ ಕಾಲೇಜು ತಂದೆವು. ಲೋಕೋಪಯೋಗಿ ಭವನ, ಹೆಚ್ಚುವರಿ ಆರ್‌ಟಿಒ ಕಚೇರಿ, ಕೆಎಸ್‌ಆರ್‌ಟಿಸಿ ಡಿಪೊ ಮಾಡಿದ್ದು ನಮ್ಮ ಅವಧಿಯಲ್ಲಿ ಎಂದರು.

ರಂಗನಾಥಪುರದಲ್ಲಿ ಬೋನಿಗೆ ಬಿದ್ದ ಚಿರತೆ: ನಿಟ್ಟುಸಿರು ಬಿಟ್ಟ ಗ್ರಾಮಸ್ಥರು

• **ಉದಯವಾಹಿನಿ, ಗುಂಡ್ಲುಪೇಟೆ**


ಉದಯವಾಹಿನಿ ಚಿತ್ರ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಗುಂಡ್ಲುಪೇಟೆ ಬಫರ್ ಜೋನ್ ವ್ಯಾಪ್ತಿಯ ರಂಗನಾಥಪುರ ಗ್ರಾಮದಲ್ಲಿ ಹಲವು ದಿನಗಳಿಂದ ರೈತರ ನಿದ್ದೆಗೆಡಿಸಿದ್ದ ಚಿರತೆ ಕೊನೆಗೂ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ. ಸೋಮವಾರ ಬೆಳಗಿನ ಜಾವ ಸುಮಾರು ಏಳು ವರ್ಷ ವಯಸ್ಸಿನ ಗಂಡು ಚಿರತೆ ಬೋನಿನಲ್ಲಿ ಸೆರೆಯಾಗಿದ್ದು, ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಚಿರತೆ ಬಂಧನದಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

ಗ್ರಾಮದ ಸುತ್ತಮುತ್ತಲಿನ ಜಾನುವಾರುಗಳ ಮೇಲೆ ದಾಳಿ ನಡೆಸಿ ರೈತರಲ್ಲಿ ಆತಂಕ ಮೂಡಿಸಿದ್ದ ಚಿರತೆಯನ್ನು ಸೆರೆಹಿಡಿಯಲು ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಾಚರಣೆ ನಡೆಸುತ್ತಿದ್ದರು. ಚಿರತೆಯನ್ನು ಸೆರೆಹಿಡಿಯುವ ಉದ್ದೇಶದಿಂದ ಬೋನಿನಲ್ಲಿ ಕರುವನ್ನು ಇರಿಸಿ ಇಲಾಖೆ ರೂಪಿಸಿದ್ದ ತಂತ್ರ ಯಶಸ್ವಿಯಾಗಿದ್ದು, ಚಾಲಾಕಿ ಚಿರತೆ ಕೊನೆಗೂ ಬೋನಿನಲ್ಲಿ ಸಿಕ್ಕಿಬಿದ್ದಿದೆ. ಚಿರತೆ ಸೆರೆ ಸಿಕ್ಕ ಸುದ್ದಿ ತಿಳಿಯುತ್ತಿದ್ದಂತೆ ಗ್ರಾಮಸ್ಥರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. ಸೆರೆಯಾದ ಚಿರತೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸುರಕ್ಷಿತವಾಗಿ ಮೂಲೆಹೊಳೆ ಅರಣ್ಯ ಪ್ರದೇಶಕ್ಕೆ ಸ್ಥಳಾಂತರಿಸಿದ್ದಾರೆ. ಹಲವು ದಿನಗಳಿಂದ ಗ್ರಾಮಸ್ಥರಲ್ಲಿ ಭೀತಿ ಹುಟ್ಟಿಸಿದ್ದ ಚಿರತೆ ಸೆರೆ ಕಾರ್ಯಾಚರಣೆ ಯಶಸ್ವಿಯಾಗಿರುವುದರಿಂದ ರಂಗನಾಥಪುರ ಗ್ರಾಮದ ರೈತರು ನಿರಾಳರಾಗಿದ್ದಾರೆ.

ಅರಮನೆ ಆವರಣದಲ್ಲಿ ಕನ್ನಡ ರಾಜ್ಯೋತ್ಸವದ ವೈಭವ

• **ಉದಯವಾಹಿನಿ, ಮೈಸೂರು**

ಕನ್ನಡ ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವರಾದ ಡಾ ಯತೀಂದ್ರ ಸಿದ್ದರಾಮಯ್ಯ ಅವರು ಮೈಸೂರು ನಗರದ ಐತಿಹಾಸಿಕ ಅರಮನೆ ಆವರಣದಲ್ಲಿ ಕನ್ನಡಾಂಬೆ ತಾಯಿ ಶ್ರೀ ಭುವನೇಶ್ವರಿಗೆ ಭಕ್ತಿಪೂರ್ವಕ ಪೂಜೆ ಸಲ್ಲಿಸಿ, ಕನ್ನಡಿಗರ ಹೆಮ್ಮೆಯ ಮೆರವಣಿಗೆಗೆ ಅತ್ಯಂತ ಸಂಭ್ರಮ,ಸಡಗರದಿಂದ ಚಾಲನೆ ನೀಡಿದರು. ಡಿಜಿಟಲ್ಪತ್ರಿಕೆ ಚಂದಾದಾರಿಕೆ

ಕನ್ನಡ ನುಡಿ, ನೆಲ, ಜಲ ಹಾಗೂ ನಮ್ಮ ಅತ್ಯಂತ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ತಲುಪಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಭಾಷೆಯ ಉಳಿವು ಮತ್ತು ನಾಡಿನ ಬೆಳವಣಿಗೆಗಾಗಿ ನಾವೆಲ್ಲರೂ ಒಂದಾಗಿ ಶ್ರಮಿಸಬೇಕು.

ನಮ್ಮ ಹೆಮ್ಮೆಯ ಕನ್ನಡದ ಅಸ್ಮಿತೆಯನ್ನು 'ಎತ್ತಿಹಿಡಿಯುವ ಮೂಲಕ ಈ ಪುಣ್ಯಭೂಮಿಯ ಕೀರ್ತಿ ಮತ್ತು ಹಿರಿಮೆಯನ್ನು ವಿಶ್ವದ ಮೂಲೆಮೂಲೆಗೂ ಪಸರಿಸೋಣ ಎಂದು ಈ ಸಂದರ್ಭದಲ್ಲಿ ಆಶಯ ವ್ಯಕ್ತಪಡಿಸಿದರು.

ಈ ವೈಭವೋಪೇತ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ನಗರ ಪೊಲೀಸ್ ಆಯುಕ್ತರಾದ ಶ್ರೀಮತಿ ಸೀಮಾ ಲಾಟ್ಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಯುಕೇಶ್ ಕುಮಾರ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕರಾದ ಶ್ರೀ ಟಿ.ಎಸ್ ಸುಬ್ರಮಣ್ಯ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಹಿರಿಯ ಅಧಿಕಾರಿಗಳು, ವಿವಿಧ ಕನ್ನಡಪರ ಸಂಘಟನೆಗಳ ಗಣ್ಯರು, ಪ್ರಮುಖರು ಹಾಗೂ ನಾಡಿನ ಹಿರಿಯರು ಪಾಲ್ಗೊಂಡು ಕಾರ್ಯಕ್ರಮದ ಸಂಭ್ರಮವನ್ನು ಇಮ್ಮಡಿಗೊಳಿಸಿದರು.


ಉದಯವಾಹಿನಿ ಚಿತ್ರ

ನರಿ ದಾಳಿ: ಮಹಿಳೆಯರು ಸೇರಿ ನಾಲ್ವರಿಗೆ ಗಾಯ

• **ಉದಯವಾಹಿನಿ, ಪಾವಗಡ**

ತಾಲ್ಲೂಕಿನ ವಳ್ಳೂರು ಗ್ರಾಮದ ಎಸ್.ಸಿ. ಕಾಲೋನಿ ವ್ಯಾಪ್ತಿಯಲ್ಲಿ ನರಿ ದಾಳಿ ನಡೆಸಿದ ಪರಿಣಾಮ ಇಬ್ಬರು ಮಹಿಳೆಯರು ಸೇರಿದಂತೆ ನಾಲ್ವರು ಗಾಯಗೊಂಡಿರುವ ಘಟನೆ ನಡೆದಿದೆ.

ಗ್ರಾಮದ ಹೊರವಲಯದಲ್ಲಿ ಬಹಿರ್ದೆಸೆಗೆ ತೆರಳಿದ್ದ ಮುತ್ಯಲಮ್ಮ (52) ಹಾಗೂ ಮುತ್ಯಾಲಕ್ಕೆ (48) ಎಂಬ ಮಹಿಳೆಯರ ಮೇಲೆ ನರಿ ಏಕಾಏಕಿ ದಾಳಿ ನಡೆಸಿದೆ ಎನ್ನಲಾಗಿದೆ. ಮಹಿಳೆಯರ ಮೇಲೆ ನರಿ ದಾಳಿ ನಡೆಸುತ್ತಿದ್ದುದನ್ನು ಗಮನಿಸಿ ಅವರನ್ನು ರಕ್ಷಿಸಲು ಮುಂದಾದ ರಾಮಣ್ಣ (56) ಹಾಗೂ ರಾಮಕ್ಕೆ (50) ಅವರ ಮೇಲೂ ನರಿ ದಾಳಿ ನಡೆಸಿ ಗಾಯಗೊಳಿಸಿದೆ ಎಂದು ತಿಳಿದುಬಂದಿದೆ.

ಘಟನೆಯನ್ನು ಗಮನಿಸಿದ ಸ್ಥಳೀಯರು ತಕ್ಷಣ ಗಾಯಾಳುಗಳನ್ನು ತಿರುಮಣಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ.

ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಪಾವಗಡ ಸರ್ಕಾರಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಗ್ರಾಮದ ಜನವಸತಿ ಪ್ರದೇಶದ ಸಮೀಪವೇ ನರಿ ದಾಳಿ ನಡೆದಿರುವುದು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದು, ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಜನರ ಸುರಕ್ಷತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಸಿಎಂ ಭೇಟಿ ನ.5 ಕ್ಕೆ ಮುಂದೂಡಿಕೆ

• **ಉದಯವಾಹಿನಿ, ರಾಮನಗರ**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ರಾಮನಗರ ಭೇಟಿ ಕಾರ್ಯಕ್ರಮವನ್ನು ನ.5 ಕ್ಕೆ ಮುಂದೂಡಲಾಗಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಹೇಳಿದರು. ನಗರಸಭೆ ಕಚೇರಿಯಲ್ಲಿ ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿರಿಯೂರು ವಿಧಾಸಭೆ ಉಪ ಚುನಾವಣೆ ಹಿನ್ನಲೆಯಲ್ಲಿ ಮುಖ್ಯಮಂತ್ರಿಗಳು ಹಲವು ತುರ್ತು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು ಈ ಹಿನ್ನಲೆಯಲ್ಲಿ ನ.3 ರಂದು ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮ ನ.5ಕ್ಕೆ ಬದಲಾವಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ನಗರಸಭೆ ಮೊದಲ ಮಹಡಿಯಲ್ಲಿ ನೂತನ ಸಭಾ ಭವನ, ನಗರಸಭೆ ಆವರಣದಲ್ಲಿ ಮಾಗಡಿ ಕೆಂಪೆಗೌಡ ಪ್ರತಿಮೆ ಅನಾವರಣ, ನಗರದ ಹೃದಯ ಭಾಗದಲ್ಲಿ ಕ್ಲಾಕ್ ಟವರ್ ಉದ್ಘಾಟನೆ, ಫುಡ್ ಕೋರ್ಟ್ ಸೇರಿದಂತೆ ಹಲವು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ನಂತರ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ 11 ಸಾವಿರ ಅಸಂಘಟಿತ ಕಾರ್ಮಿಕರಿಗೆ ವಿಮಾ ಬಾಂಡ್ ವಿತರಣೆ, ಕುಶಲ ಕರ್ಮಿಗಳಿಗೆ ಕಿಟ್, ಟೀ


ಉದಯವಾಹಿನಿ ಚಿತ್ರ

ಅಂಗಡಿಗಳಿಗೆ ಸ್ಟೀಮರ್ ಗಳು, 2400 ಬೀದಿ ಬದಿ ವ್ಯಾಪಾರಿಗಳಿಗೆ ನೀರಿನ ಫ್ಲಾಸ್ಕ್, 670 ಜನ ಆಟೋ ಚಾಲಕರಿಗೆ ಸಮವಸ್ತ್ರ, ವಿಶ್ವಕರ್ಮ ಜನಾಂಗ ಸೇರಿದಂತೆ ಹಲವು ಕುಶಲಕರ್ಮಿಗಳಿಗೆ ಕೌಶಲ್ಯ ಕಿಟ್ ವಿತರಣೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಇದೆ ಸಂಧರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ ಜಗದೀಶ್ ಅವರು ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಮುಖ್ಯಮಂತ್ರಿಗಳ ಕಾರ್ಯಕ್ರಮದ ವೇದಿಕೆ, ಕಾರ್ಯಕ್ರಮ ಉದ್ಘಾಟನೆ ಸ್ಥಳ ಪರಿಶೀಲನೆ ನಡೆಸಿ ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಅವರೊಂದಿಗೆ ಚರ್ಚೆ ನಡೆಸಿದರು.

ವಿಗ್ರಹಗಳ ಧ್ವಂಸ ಪ್ರಕರಣ ಕಠಿಣ ಕ್ರಮಕ್ಕೆ ಬಿಜೆಪಿ, ಜೆಡಿಎಸ್ ಎಸ್ಪಿಗೆ ಒತ್ತಾಯ

• **ಉದಯವಾಹಿನಿ, ರಾಮನಗರ**

ನಗರದ ಲಕ್ಷ್ಮಿ ವೆಂಕಟೇಶ್ವರ ದೇವಾಲಯದಲ್ಲಿನ ನವಗ್ರಹಗಳನ್ನು ಕಿಡಿಗೇಡಿಯೊಬ್ಬ ಧ್ವಂಸಗೊಳಿಸಿರುವುದನ್ನು ಖಂಡಿಸಿ ಬಿಜೆಪಿ, ಜೆಡಿಎಸ್ ಹಾಗೂ ಹಿಂದೂಪರ ಸಂಘಟನೆಗಳು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದಾರೆ.

ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೋಮವಾರ ಮನವಿ ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಬಿಜೆಪಿ ತಾಲ್ಲೂಕು ಅಧ್ಯಕ್ಷ ಗೌತಂಗೌಡ ಮಾತನಾಡಿ, ದೇವಾಲಯ ವಿಚಾರದಲ್ಲಿ ತಪ್ಪಿತಸ್ಥರು ಯಾರೇ ಆಗಿದ್ದರೂ ಕಠಿಣ ಕಾನೂನು ಕ್ರಮ ಜರುಗಿಸಬೇಕು.

ಇಲ್ಲದಿದ್ದರೆ ಹಿಂದೂ ಕಾರ್ಯಕರ್ತರು ಬೀದಿಗಿಳಿಯಬೇಕಾಗುತ್ತದೆ ಎಂದು ಎಚ್ಚರಿಸಿದರು. ಹಿಂದುಗಳ ಮೇಲೆ ಅಥವಾ ದೇವಾಲಯಗಳ ಮೇಲೆ ಹಲ್ಲೆ ನಡೆದಾಗಲೆಲ್ಲಾ ಗೃಹ ಇಲಾಖೆ ಘಟನೆಗಳ


ಉದಯವಾಹಿನಿ ಚಿತ್ರ

ಬಗ್ಗೆ ಬಾಲೀಷ ಹೇಳಿಕೆ ದಾಖಲು ಮಾಡಿ ತನಿಖೆ ನಡೆಸಿ ಕ್ರಮ ಕೈಗೊಳ್ಳುವಲ್ಲಿ ಹಿಂದೇಟುಹಾಕುತ್ತಿದೆ. ಆರ್.ಎಸ್.ಎಸ್. ಬಗ್ಗೆ ದಿನನಿತ್ಯ ಹೇಳಿಕೆ ನೀಡುವ ಗೃಹ ಸಚಿವರು ಇಲ್ಲಿನ ಘಟನೆ ಬಗ್ಗೆ ಕೂಡಲೆ ಪ್ರತಿಕ್ರಿಯಸಬೇಕೆಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಪ್ರಮುಖರಾದ ಚಿಕ್ಕಶಂಕರಯ್ಯ, ಎಸ್.ಆರ್.ನಾಗರಾಜ್, ಪ್ರಸಾದ್ ಗೌಡ, ಸುಗ್ಗನಹಳ್ಳಿ ರಾಮಕೃಷ್ಣಯ್ಯ, ನಗರಸಭೆ ಮಾಜಿ ಸದಸ್ಯ ರವಿ, ಪ್ರಸನ್ನ, ಬೋರೇಗೌಡ ಮತ್ತಿತರರಿದ್ದರು.

ಕನ್ನಡ ತಂತ್ರಜ್ಞಾನ ಭಾಷೆಯಾಗಿ ಬೆಳೆಯಲಿ: ಸಚಿವ ಚಲುವರಾಯಸ್ವಾಮಿ

ಕನ್ನಡ ಕೇವಲ ಮನೆಯ ಭಾಷೆಯಾಗಿ ಉಳಿಯದೆ, ಜ್ಞಾನದ, ತಂತ್ರಜ್ಞಾನದ, ಉದ್ಯೋಗ, ಶಿಕ್ಷಣ, ಸಂಶೋಧನೆ ಮತ್ತು ಆಡಳಿತದ ಭಾಷೆಯಾಗಿ ಬೆಳೆಯಬೇಕು

• **ಉದಯವಾಹಿನಿ, ಮಂಡ್ಯ**

ಜಗತ್ತು ತಂತ್ರಜ್ಞಾನದ ವೇಗದಲ್ಲಿ ಮುನ್ನಡೆಯುತ್ತಿದೆ. ಕೃತಕ ಬುದ್ಧಿಮತ್ತೆ, ಡಿಜಿಟಲ್ ತಂತ್ರಜ್ಞಾನ, ವಿಜ್ಞಾನ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಹೊಸ ಬದಲಾವಣೆಗಳು ನಡೆಯುತ್ತಿವೆ. ಈ ಬದಲಾವಣೆ ನಡುವೆ ಕನ್ನಡವು ಜ್ಞಾನದ ತಂತ್ರಜ್ಞಾನ ಭಾಷೆಯಾಗಿ ಬೆಳೆಯಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

1 ಪ್ರಶಸ್ತಿಗಳು ಭಾಷೆಯ ಶ್ರೀಮಂತಿಕೆಗೆ ಸಾಕ್ಷಿಯಾಗಿವೆ
2 ಕೀರ್ತನೆ ಕಾವ್ಯಗಳು ನಾಡಿನ ಪರಂಪರೆ ಎತ್ತಿಹಿಡಿದಿವೆ
3 ಕರ್ನಾಟಕ ಎಂದು ಮರುನಾಮಕರಣ ಮಾಡಿದರು

ನಗರದ ಸರ್‌ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ ರಾಜ್ಯೋತ್ಸವದಲ್ಲಿ ಮಾತನಾಡಿದರು.

ಕನ್ನಡ ಸಾಹಿತ್ಯಕ್ಕೆ ದೊರೆತಿರುವ ಎಂಟು ಜ್ಞಾನಪೀಠ ಪ್ರಶಸ್ತಿಗಳು ಭಾಷೆಯ ಶ್ರೀಮಂತಿಕೆಗೆ ಸಾಕ್ಷಿಯಾಗಿವೆ. ಬಸವಣ್ಣನವರ ವಚನಗಳು, ದಾಸರ ಕೀರ್ತನೆಗಳು ಹಾಗೂ ಕಾವ್ಯಗಳು ನಾಡಿನ ಪರಂಪರೆ ಎತ್ತಿಹಿಡಿದಿವೆ. ಕರ್ನಾಟಕ ಏಕೀಕರಣದ ಕನಸು ನನಸಾಗಿಸುವಲ್ಲಿ ಹಲವು ಮಹನೀಯರ ಕೊಡುಗೆ ಅಪಾರವಾಗಿದೆ. ಜಿಲ್ಲೆಯು


ಉದಯವಾಹಿನಿ ಚಿತ್ರ

ಬಿ.ಎಂ.ಶ್ರೀಕಂಠಯ್ಯ, ಪು.ತಿ.ನ, ಕೆ.ಎಸ್.ನರಸಿಂಹಸ್ವಾಮಿ, ಜಿ.ವೆಂಕಟಸುಬ್ಬಯ್ಯ, ಕೆ.ಎಸ್.ನಿಸಾರ್ ಅಹಮದ್, ಬೆಸಗರಹಳ್ಳಿ ರಾಮಣ್ಣ ಹಾಗೂ ಎಚ್.ಎಲ್.ನಾಗೇಗೌಡ ಸೇರಿದಂತೆ ಅನೇಕ ಸಾಹಿತಿಗಳು ಮತ್ತು ಸಾಂಸ್ಕೃತಿಕ ಗಣ್ಯರನ್ನು ನಾಡಿಗೆ ನೀಡಿದ್ದು ಇವರ ಕನ್ನಡಪರ ಸೇವೆ ಸದಾ ಸ್ಮರಣೀಯ ಎಂದರು.

ಕೆ.ಆರ್.ಪೇಟೆ, ನಾಗಮಂಗಲ ಮತ್ತು ಪಾಂಡವಪುರ ವ್ಯಾಪ್ತಿಯ ಕೆರೆಗಳನ್ನು ತುಂಬಿಸುವುದು, ರಸ್ತೆ, ವಿತರಣಾ ನಾಲೆ ಹಾಗೂ ಕಾಲುವೆಗಳ ದುರಸ್ತಿ ಸೇರಿದಂತೆ ಕಾವೇರಿ ನೀರಾವರಿ ನಿಗಮ ಮತ್ತು ಹೇಮಾವತಿ ಎಡದಂಡೆ ನಾಲಾ ವಿಭಾಗದ ಕಾಮಗಾರಿಗಳಿಗೆ 806 ಕೋಟಿ ವೆಚ್ಚದಲ್ಲಿ ಯೋಜನೆ ರೂಪಿಸಲಾಗಿದೆ. ಮಂಡ್ಯ ಮತ್ತು ಶ್ರೀರಂಗಪಟ್ಟಣ ವ್ಯಾಪ್ತಿಯ ಕಾವೇರಿ, ಕೆರಗೋಡು, ಶಿಂಷಾ, ಲೋಕಸರ ಹಾಗೂ ಮದ್ದೂರು ಶಾಖಾ ನಾಲೆಗಳ ಅಭಿವೃದ್ಧಿಗೆ 224 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಮೈಷುಗರ್ ಕಾರ್ಖಾನೆಯ ಬಾಯಿಂಗ್ ಹೌಸ್ ಆಧುನೀಕರಣಕ್ಕೆ 60 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಮಂಡ್ಯ ತಾಲ್ಲೂಕಿನ ಹಂಪಾಪುರದಲ್ಲಿ 400 ಕೆ.ವಿ.ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ 402.92 ಕೋಟಿ, ನಾಗಮಂಗಲ ತಾಲ್ಲೂಕಿನ ಇರುಬ್ಬನಹಳ್ಳಿಯಲ್ಲಿ 66/11 ಕೆ.ವಿ.ವಿದ್ಯುತ್ ಉಪಕೇಂದ್ರ ಮತ್ತು ವಿದ್ಯುತ್ ಮಾರ್ಗ ನಿರ್ಮಾಣಕ್ಕೆ 17.91 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಜಿಲ್ಲೆಯ ಗ್ರಾಮ ಪಂಚಾಯಿತಿ ಹಾಗೂ ನಗರ ವಾರ್ಡ್‌ಗಳಲ್ಲಿ 283 ಭಾರತ್ ಜೋಡೋ ಯುವ ಸಂಘಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಸರ್‌ಎಂ.ವಿ. ಜಿಲ್ಲಾ ಕ್ರೀಡಾಂಗಣದಲ್ಲಿ ಬ್ಯಾಸ್ಕೆಟ್‌ಬಾಲ್ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ 3.50 ಕೋಟಿ ಹಾಗೂ ಶ್ರೀರಂಗಪಟ್ಟಣ ತಾಲ್ಲೂಕು ಕ್ರೀಡಾಂಗಣದ ಅಭಿವೃದ್ಧಿಗೆ 1 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದರು. ಶಾಸಕ ಪಿ.ರವಿಕುಮಾರ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಜಿಲ್ಲಾಧಿಕಾರಿ ಕುಮಾರ, ಜಿಲ್ಲಾ ಪಂಚಾಯಿತಿ ಸಿಇಒ ಕೆ.ಆರ್.ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ.ಶೋಭಾರಾಣಿ, ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ, ಡಿವೈಎಸ್ಪಿ ಲಕ್ಷ್ಮೀನಾರಾಯಣ ಪ್ರಸಾದ್ ಭಾಗವಹಿಸಿದ್ದರು.

ಕನ್ನಡ ಕೇವಲ ಮನೆಯ ಭಾಷೆಯಾಗಿ ಉಳಿಯದೆ, ಜ್ಞಾನದ, ತಂತ್ರಜ್ಞಾನದ, ಉದ್ಯೋಗ, ಶಿಕ್ಷಣ, ಸಂಶೋಧನೆ ಮತ್ತು ಆಡಳಿತದ ಭಾಷೆಯಾಗಿ ಬೆಳೆಯಬೇಕು. ಮಕ್ಕಳು ಕನ್ನಡದಲ್ಲಿ ಕನಸು ಕಾಣುವ, ಚಿಂತಿಸುವ ಹಾಗೂ ಜಗತ್ತಿನ ಜ್ಞಾನವನ್ನು ಕನ್ನಡದ ಮೂಲಕವೂ ಅರಿಯುವ ವಾತಾವರಣ ನಿರ್ಮಾಣವಾಗಬೇಕು ಎಂದರು.
-ಎನ್.ಚಲುವರಾಯಸ್ವಾಮಿ

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ

1956 ನವೆಂಬರ್ 1 ರಂದು ಕನ್ನಡ ಮಾತನಾಡುವ ಪ್ರದೇಶಗಳನ್ನು ಒಗ್ಗೂಡಿಸಿ ವಿಶಾಲ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು. 1973 ನವೆಂಬರ್ 1ರಂದು ಅಂದಿನ ಮುಖ್ಯಮಂತ್ರಿ ದಿವಂಗತ ಡಿ. ದೇವರಾಜ ಅರಸು ಅವರು ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ಮರುನಾಮಕರಣ ಮಾಡಿದರು ಎಂದು ಸ್ಮರಿಸಿದರು.

ಮಿನಿ ನ್ಯೂಸ್

ಸರ್ಕಾರಿ ಶಾಲೆಗಳ ಸೌಲಭ್ಯ ಸದುಪಯೋಗಕ್ಕೆ ಕರೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಗುಬ್ಬಿ**

ಸರ್ಕಾರಿ ಶಾಲೆಗಳಲ್ಲಿ ದೊರೆಯುವ ಗುಣಮಟ್ಟದ ಶಿಕ್ಷಣ ಮತ್ತು ಸೌಲಭ್ಯಗಳು ಖಾಸಗಿ ಶಾಲೆಗಳಲ್ಲಿಯೂ ಸಿಗುವುದು ಕಷ್ಟ. ಸರ್ಕಾರಿ ಶಾಲೆಗಳಲ್ಲಿ ಅಗತ್ಯ ಮೂಲಸೌಕರ್ಯ ಹಾಗೂ ಉತ್ತಮ ಶಿಕ್ಷಣ ವ್ಯವಸ್ಥೆಯಿದ್ದು, ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಂಡು ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಡಿಡಿಪಿಐ ರಘುಚಂದ್ರ ಹೇಳಿದರು. ತಾಲ್ಲೂಕಿನ ಕಡಬ ಕರ್ನಾಟಕ ಪಬ್ಲಿಕ್ ಶಾಲೆಯ ಪ್ರೌಢಶಾಲಾ ವಿಭಾಗದಲ್ಲಿ ಒಸಾಟ್ ಶೈಕ್ಷಣಿಕ ಧರ್ಮದತ್ತಿ ಸಂಸ್ಥೆಯ ವತಿಯಿಂದ ನಿರ್ಮಿಸಲಾದ ಆರು ನೂತನ ಶಾಲಾ ಕೊಠಡಿಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳು ಜೀವನದಲ್ಲಿ ದೊಡ್ಡ ಕನಸುಗಳನ್ನು ಕಾಣಬೇಕು. ಆ ಕನಸುಗಳನ್ನು ನನಸಾಗಿಸಿಕೊಳ್ಳಲು ನಿರಂತರ ಪರಿಶ್ರಮ ಪಟ್ಟು ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು. ಮೊಬೈಲ್ ಗೀಳಿನಿಂದ ಹೊರಬಂದು ಓದಿನ ಕಡೆ ಹೆಚ್ಚಿನ ಗಮನಹರಿಸಬೇಕು. ಗ್ರಂಥಾಲಯಗಳಿಗೆ ನಿರಂತರ ಭೇಟಿ ನೀಡಿ ಜ್ಞಾನವನ್ನು ವೃದ್ಧಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.ಪ್ರಾಂಶುಪಾಲ ಎಚ್.ಎಂ. ಸದಾಶಿವಯ್ಯ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣದ ಜೊತೆಗೆ ಅಗತ್ಯ ಮೂಲಭೂತ ಸೌಲಭ್ಯಗಳು ದೊರೆಯುತ್ತಿವೆ. ಒಸಾಟ್ ಸಂಸ್ಥೆಯು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿ ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸಿಕೊಟ್ಟಿರುವುದು ಶ್ಲಾಘನೀಯ. ವಿದ್ಯಾರ್ಥಿಗಳು ಉತ್ತಮವಾಗಿ ಅಭ್ಯಾಸ ಮಾಡಿ ಶೇಕಡಾ ನೂರರಷ್ಟು ಫಲಿತಾಂಶ ಪಡೆಯುವ ಮೂಲಕ ಸಂಸ್ಥೆಯ ಸೇವೆಗೆ ಕೃತಜ್ಞತೆ ಸಲ್ಲಿಸಬೇಕು ಎಂದರು.

ಐಟಿ-ಬಿಟಿ ಕ್ಷೇತ್ರದಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ತುಮಕೂರು**

ರಾಜ್ಯದ ಐಟಿ-ಬಿಟಿ ಕ್ಷೇತ್ರದಲ್ಲಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶಗಳು ದೊರೆಯಬೇಕು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಕೃಷ್ಣಬೈರೇಗೌಡ ತಿಳಿಸಿದರು. ನಗರದ ಮಹಾತ್ಮಗಾಂಧಿ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ 71ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಐಟಿ-ಬಿಟಿ ಹಾಗೂ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡ ಭಾಷಿಕರಿಗೆ ಉದ್ಯೋಗದಲ್ಲಿ ಆದ್ಯತೆ ದೊರಕಿಸಿಕೊಡುವ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನ ಸಾಗಿದೆ ಎಂದು ತಿಳಿಸಿದರು.ಕೇಂದ್ರ ಸರ್ಕಾರವು ಜಿಎಸ್‌ಟಿ ವ್ಯವಸ್ಥೆಯಲ್ಲಿ ಬದಲಾವಣೆ ತಂದ ನಂತರ ರಾಜ್ಯದ ಆದಾಯ ಕಡಿತಗೊಂಡಿದೆ. ದೇಶದಲ್ಲೇ ಕರ್ನಾಟಕ ರಾಜ್ಯವು ಹೆಚ್ಚಿನ ಪ್ರಮಾಣದಲ್ಲಿ ಜಿಎಸ್‌ಟಿ ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಒಂದಾಗಿದೆ. ಬೆಂಗಳೂರು ನಗರವು ಅತಿ ಹೆಚ್ಚು ಆದಾಯ ತೆರಿಗೆ ಸಂಗ್ರಹವಾಗುವ ನಗರಗಳಲ್ಲಿ ಎರಡನೇ ಸ್ಥಾನದಲ್ಲಿದ್ದರೂ, ರಾಜ್ಯಕ್ಕೆ ದೊರೆಯುವ ತೆರಿಗೆಯ ಪಾಲು ನಿರೀಕ್ಷಿತ ಮಟ್ಟದಲ್ಲಿಲ್ಲ ಎಂದು ಅಭಿಪ್ರಾಯಪಟ್ಟರು. ಕೇಂದ್ರವು ಅಭಿವೃದ್ಧಿಯಲ್ಲಿ ಹಿಂದುಳಿದಿರುವ ರಾಜ್ಯಗಳಿಗೂ ಅಗತ್ಯ ನೆರವು ನೀಡಬೇಕು ಎಂದರು.

ರಿಂಗ್ ರಸ್ತೆ ಸ್ವಚ್ಛತಾ ಕಾರ್ಯಾಚರಣೆ: ಘನತ್ಯಾಜ್ಯ ತೆರವು

• **ಉದಯವಾಹಿನಿ, ಮೈಸೂರು**

ಆಯುಕ್ತರು ದಸರಾ ಸಂದರ್ಭದಲ್ಲಿ ರಿಂಗ್ ರೋಡ್ ಸ್ವಚ್ಛತಾ ಹಿ ಸೇವಾ ಕೈಗೊಳ್ಳಲು ನೀಡಿದ ನಿರ್ದೇಶನದ ಮೇರೆಗೆ ವಲಯ 9 ರ ವ್ಯಾಪ್ತಿಯ ಅಭಿವೃದ್ಧಿ ಅಧಿಕಾರಿ ಅರ್ಶಿಯ ಮತ್ತು ಅಧಿಕಾರಿ ಸಿಬ್ಬಂದಿಗಳ ತಂಡ ಸುಮಾರು ಒಂದು ವಾರ ಕಾರ್ಯಾಚರಣೆ ನಡೆಸಿ ಘನತ್ಯಾಜ್ಯಕ್ಕೆ ಮುಕ್ತಿ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ 35ರ ವ್ಯಾಪ್ತಿಯ ಸಾತಗಳ್ಳಿ ರಿಂಗ್ ರಸ್ತೆಯ ಬದಿಯಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮತ್ತು ನೆಲಸಮ ಕಾಮಗಾರಿಗಳ ಅವಶೇಷಗಳು, ಮಣ್ಣು, ಕಲ್ಲು, ಇಟ್ಟಿಗೆ ತುಂಡುಗಳು ಹಾಗೂ ಇತರೆ ಘನತ್ಯಾಜ್ಯಗಳನ್ನು ಸುರಿಯಲಾಗುತ್ತಿತ್ತು. ಇದರಿಂದ ರಸ್ತೆಯ ಸುತ್ತಮುತ್ತಲಿನ ಪರಿಸರದಲ್ಲಿ ಅಶುಚಿತ್ವ ಉಂಟಾಗಿ, ಸಾರ್ವಜನಿಕರಿಗೆ ತೊಂದರೆಯಾಗುವುದರ ಜೊತೆಗೆ ನಗರದ ಸೌಂದರ್ಯಕ್ಕೂ ಧಕ್ಕೆಯಾಗುತ್ತಿತ್ತು.

ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶದಲ್ಲಿ ಸಂಗ್ರಹವಾಗಿದ್ದ ಕಟ್ಟಡ ತ್ಯಾಜ್ಯ ಮತ್ತು ಕಸವನ್ನು ತೆರವುಗೊಳಿಸಿ, ಸ್ಥಳವನ್ನು ಸ್ವಚ್ಛಗೊಳಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಸದರಿ ಸ್ಥಳದಲ್ಲಿ ಸಂಗ್ರಹವಾಗಿದ್ದ ಕಟ್ಟಡ ತ್ಯಾಜ್ಯ, ಮಣ್ಣು, ಕಲ್ಲು, ಅವಶೇಷಗಳು ಹಾಗೂ ಇತರೆ ಸುಮಾರು 1250 ಮೆಟ್ರಿಕ್ ಟನ್ ಕಸವನ್ನು ಟಿಪ್ಪರ್ ವಾಹನಗಳ ಮೂಲಕ ಸಾಗಿಸಿ ತೆರವುಗೊಳಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

ತ್ಯಾಜ್ಯ ತೆರವುಗೊಳಿಸಿದ ನಂತರ, ಸದರಿ ಪ್ರದೇಶದಲ್ಲಿ ಪುನಃ ಅನಧಿಕೃತವಾಗಿ ಕಟ್ಟಡ ತ್ಯಾಜ್ಯ ಹಾಗೂ ಕಸವನ್ನು ಸುರಿಯುವುದನ್ನು ತಡೆಗಟ್ಟುವ ಉದ್ದೇಶದಿಂದ ರಸ್ತೆಯ ಬದಿಯಲ್ಲಿ ಹಸಿರು ಬಣ್ಣದ ಮೆಶ್ ಬ್ಯಾರಿಕೇಡಿಂಗ್ ಅಳವಡಿಸಲಾಗಿದೆ.

ಪಠ್ಯ ಪುಸ್ತಕಕ್ಕಷ್ಟೇ ಸೀಮಿತವಾಗದಿರಿ, ವಿಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಳ್ಳಿ

• **ಉದಯವಾಹಿನಿ, ಮೈಸೂರು**

ವಿದ್ಯಾರ್ಥಿಗಳಲ್ಲಿ ನಾವೀನ್ಯತೆ ಹಾಗೂ ಸೃಜನಶೀಲತೆ ಬೆಳೆಯಬೇಕಾದರೆ ಅವರು ಕೇವಲ ಪಠ್ಯಪುಸ್ತಕದ ಜ್ಞಾನಕ್ಕಷ್ಟೇ ಸೀಮಿತವಾಗದೆ, ವೈಜ್ಞಾನಿಕ ಪರಿಕಲ್ಪನೆಗಳನ್ನು ಪ್ರಾಯೋಗಿಕವಾಗಿ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಲು ಮುಂದಾಗಬೇಕು ಎಂದು ಮೈಸೂರಿನ ಬಾಬಾ ಪರಮಾಣು ಸಂಶೋಧನಾ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಯೋಜನೆ ನಿರ್ದೇಶಕ ಶರದ್ ಸಿ. ಶ್ರೀವಾಸ್ತವ ತಿಳಿಸಿದರು. ಇಲ್ಲಿನ ವಿಜಯನಗರದ ಸಂತ ಜೋಸೆಫರ ಕೇಂದ್ರೀಯ ಶಾಲೆಯಲ್ಲಿ ಆಯೋಜಿಸಲಾಗಿದ್ದ 'ಅಂತರ ಶಾಲಾ ವಿಜ್ಞಾನ ಹಬ್ಬ 2026 ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯ ಬೆಳೆಸಲು ಪ್ರಾಯೋಗಿಕ ಕಲಿಕೆ ಅತ್ಯಂತ ಅಗತ್ಯ.

ಓದಿ ಕಲಿಯುವುದಕ್ಕಿಂತ ಮಾಡಿ ಕಲಿಯುವುದರಲ್ಲಿ ಹೆಚ್ಚಿನ ಅರ್ಥವಿದೆ. ಹೊಸ ಪ್ರಯೋಗಗಳನ್ನು ಕೈಗೊಳ್ಳುವುದರಿಂದ ಮಕ್ಕಳು ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ಭಿನ್ನವಾಗಿ ಚಿಂತಿಸಲು ಸಾಧ್ಯವಾಗುತ್ತದೆ. ಸಮಾಜದಲ್ಲಿ ಎಲ್ಲರೂ ಸಾಗುವ ಹಾದಿಯಲ್ಲೇ ಸಾಗದೆ 'ಔಟ್ ಆಫ್ ದಿ ಬಾಕ್ಸ್' (ವಿಭಿನ್ನ) ಮನೋಭಾವ ಬೆಳೆಸಿಕೊಂಡಾಗ ಮಾತ್ರ ನೂತನ ಸಂಶೋಧನೆಗಳು ಸಾಧ್ಯ ಎಂದು ಪ್ರತಿಪಾದಿಸಿದ ಅವರು, ಯುವ ಮನಸ್ಸುಗಳಿಗೆ ವೇದಿಕೆ ಕಲ್ಪಿಸಿದ ಶಾಲಾ ಆಡಳಿತ ಮಂಡಳಿಯನ್ನು ಶ್ಲಾಘಿಸಿದರು.

ಈ ವಿಜ್ಞಾನ ಹಬ್ಬದ ರಸಪ್ರಶ್ನೆ ಹಾಗೂ ಕ್ರಿಯಾತ್ಮಕ ಮಾದರಿ (ವರ್ಕಿಂಗ್ ಮಾಡೆಲ್) ಸ್ಪರ್ಧೆಗಳಲ್ಲಿ ಒಟ್ಟು 22 ಶಾಲೆಗಳ 298 ವಿದ್ಯಾರ್ಥಿಗಳು ಕಿರಿಯ ಮತ್ತು ಹಿರಿಯ ವಿಭಾಗಗಳಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ಅಂತರಾಳದಿಂದ... EDITORIAL

ಕಡು ಬಡತನ ಪ್ರಮಾಣ ಇಳಿಕೆ: ಕೇಂದ್ರ ಮೈಮರೆಯದಿರಲಿ



ದೇಶದಲ್ಲಿ ಕಡುಬಡತನದ ಪ್ರಮಾಣ ಶೇ.2.6ಕ್ಕೆ ಇಳಿಕೆಯಾಗಿದ್ದು, ಅಂದಾಜು 49.6 ಕೋಟಿ ಜನರು ಬಡತನದಿಂದ ಮುಕ್ತರಾಗಿದ್ದಾರೆ ಎಂದು ವಿಶ್ವಬ್ಯಾಂಕ್ ಬಿಡುಗಡೆ ಮಾಡಿರುವ ತನ್ನ ಇತ್ತೀಚಿನ ವರದಿಯಲ್ಲಿ ತಿಳಿಸಿದೆ. ಅಲ್ಲದೆ, ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲಿ ಅತ್ಯಂತ ವೇಗದಲ್ಲಿ ಬಡತನ ಪ್ರಮಾಣ ಇಳಿಕೆ ಕಾಣುತ್ತಿದ್ದು, ವಿಶ್ವದಲ್ಲಿಯೇ ಮುಂಚೂಣಿಯಲ್ಲಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದೆ. ವಿಶ್ವಬ್ಯಾಂಕ್‌ನ ಈ ವರದಿ ದೇಶದ ಪಾಲಿಗೆ ಸಂತಸದ ವಿಷಯ. ಸ್ವಾತಂತ್ರ್ಯಾನಂತರದಲ್ಲಿ ಆಡಳಿತಾರೂಢ ಸರಕಾರಗಳಿಗೆ ಬಲುದೊಡ್ಡ ಸವಾಲಾಗಿದ್ದ ಬಡತನದ ಸಮಸ್ಯೆಯಿಂದ ದೇಶ ನಿಧಾನವಾಗಿಯಾದರೂ ಹೊರಬರುತ್ತಿರುವುದು ನಿಜಕ್ಕೂ ಆಶಾದಾಯಕ ಬೆಳವಣಿಗೆ. 2011ರ ವೇಳೆಗೆ ಭಾರತದಲ್ಲಿನ ಕಡುಬಡತನದ ಪ್ರಮಾಣ ಶೇ.27.1ರಷ್ಟಿದ್ದರೆ, 2023ರ ವೇಳೆಗೆ ಅಂದರೆ 12 ವರ್ಷಗಳ ಅವಧಿಯಲ್ಲಿ ಶೇ.2.6ಕ್ಕೆ ಇಳಿಕೆ ಕಂಡಿರುವುದು ಒಂದು ಸಾಧನೆಯೇ. ಈ ಸಾಧನೆಯ ಹಿಂದೆ ಕಳೆದ 12 ವರ್ಷಗಳಿಂದ ದೇಶದ ಆಡಳಿತ ಚುಕ್ಕಾಣಿ ಹಿಡಿದಿರುವ ಸರಕಾರದ ಜನಪರ ಯೋಜನೆಗಳ ಕೊಡುಗೆ ಇದೆ ಎಂಬುದನ್ನು ನಿರಾಕರಿಸಲಾಗದು.

ಸಹಜವಾಗಿಯೇ ವಿಶ್ವಬ್ಯಾಂಕ್‌ನ ವರದಿ ಬಿಡುಗಡೆಯಾಗುತ್ತಿದ್ದಂತೆಯೇ ಪ್ರಧಾನಿ, ಹಣಕಾಸು ಸಚಿವರು ಹರ್ಷ ವ್ಯಕ್ತಪಡಿಸಿರುವುದರ ಜತೆಯಲ್ಲಿ ತಮ್ಮ ಸರಕಾರದ ಪ್ರಾಮಾಣಿಕ ಪ್ರಯತ್ನಗಳಿಗೆ ಸಂದ ಫಲ ಇದಾಗಿದೆ ಎಂದು ಬಣ್ಣಿಸಿರುವುದರಲ್ಲಿ ಅಚ್ಚರಿ ಏನಿಲ್ಲ.

ಆದರೆ, ಈ ಎಲ್ಲಾ ಪ್ರಯತ್ನಗಳು ನಿರೀಕ್ಷಿತ ಫಲಿತಾಂಶವನ್ನು ತಂದುಕೊಡದಿದ್ದರೂ ಬಡತನ ನಿವಾರಣೆಯ ಸಂಕಲ್ಪದ ಈಡೇರಿಕೆಯ ಹಾದಿಯಲ್ಲಿ ಮಹತ್ವದ ಮೈಲಿಗಲ್ಲುಗಳಾಗಿದ್ದುದನ್ನು ಮರೆಯುವಂತಿಲ್ಲ. ರಾಜಕೀಯ ಹಿತಾಸಕ್ತಿಗಳೇನೇ ಇದ್ದರೂ ಸರಕಾರಗಳು ಈ ನಿಟ್ಟಿನಲ್ಲಿ ಹಂತಹಂತವಾಗಿ ಕೈಗೊಂಡ ಕ್ರಮಗಳು ಈಗ ಫಲ ನೀಡಲಾರಂಭಿಸಿವೆ ಎಂದರೆ ತಪ್ಪಾಗಲಾರದು. ಹಾಗೆಂದು ವಿಶ್ವಬ್ಯಾಂಕ್‌ನ ಈ ವರದಿಯಿಂದ ಸರಕಾರವಾಗಲಿ ಜನತೆಯಾಗಲೀ ಮೈಮರೆಯಬಾರದು. ಬರೋಬ್ಬರಿ 148 ಕೋಟಿಗೂ ಅಧಿಕ ಜನಸಂಖ್ಯೆಯನ್ನು ಹೊಂದಿರುವ ಭಾರತದಂತಹ ವಿಶಾಲ ದೇಶದಲ್ಲಿ ಬಡತನವನ್ನು ಯಾವುದೋ ಒಂದು ಸಂಸ್ಥೆ ನೀಡುವ ವರದಿ, ಅಂಕಿಅಂಶಗಳನ್ನು ಆಧರಿಸಿ ಅಂದಾಜಿಸಲಾಗದು. ಹಾಗೆಯೇ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಬಡತನವನ್ನು ಒಂದೇ ಮಾನದಂಡದಲ್ಲಿ ಅಳೆಯಲಾಗದು. ಬದಲಾದ ಕಾಲಘಟ್ಟಕ್ಕೆ ಅನುಸಾರವಾಗಿ ಜನರ ಜೀವನಮಟ್ಟವನ್ನು ಅಳೆಯುವ ಕಾರ್ಯವಾಗಬೇಕು. ದೇಶದ ಪ್ರತಿಯೊಂದು ಕುಟುಂಬ ಸ್ವಾವಲಂಬಿ ಜೀವನ ನಡೆಸಲು ಸಾಧ್ಯವಾದಾಗ ಮಾತ್ರ ಬಡತನ ನಿರ್ಮೂಲನೆಯ ಗುರಿ ತಲುಪಲು ಸಾಧ್ಯವಿದೆ. ದುಡಿಯುವ ಕೈಗಳಿಗೆ ಕೆಲಸ, ವಿದ್ಯಾವಂತ ಯುವ ಸಮುದಾಯಕ್ಕೆ ಅರ್ಹತೆಗೆ ತಕ್ಕ ಉದ್ಯೋಗ, ಕುಟುಂಬಕ್ಕೊಂದು ಸೂರು, ಆಹಾರ ಭದ್ರತೆ, ಸುಸ್ಥಿರ ಆರೋಗ್ಯ ಇವೆಲ್ಲವೂ ಸಾಕಾರಗೊಂಡಾಗಲಷ್ಟೇ ಬಡತನಮುಕ್ತ ಭಾರತದ ಕನಸು ಸಾಕಾರಗೊಳ್ಳಲು ಸಾಧ್ಯ. ಹೀಗಾಗಿ ದೇಶವಿನ್ನೂ ಸಾಗಬೇಕಾದ ಹಾದಿ ಬಲುದೂರವಿದೆ ಎಂಬುದನ್ನು ಆಡಳಿತಾರೂಢರು ಮತ್ತು ಸಮಾಜ ಮರೆಯಬಾರದು.

ವಿಶ್ವಬ್ಯಾಂಕ್‌ನ ಈ ವರದಿಯ ಪ್ರಕಾರ ದೇಶ ಉದ್ಯೋಗ ಸೃಷ್ಟಿಯಲ್ಲೂ ಹೆಚ್ಚಳ ಸಾಧಿಸಿದೆ. ಅದರಲ್ಲೂ ಮಹಿಳೆಯರು ಮತ್ತು ಗ್ರಾಮೀಣ ಪ್ರದೇಶಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಕ್ಷೇತ್ರದತ್ತ ಹೊರಳಿರುವುದು ಆಶಾದಾಯಕ ಬೆಳವಣಿಗೆ ಎಂದು ವಿಶ್ಲೇಷಿಸಿದೆ. ಅಷ್ಟು ಮಾತ್ರವಲ್ಲದೆ ಮುಂದಿನ ಕೆಲವೇ ವರ್ಷಗಳಲ್ಲಿ ಭಾರತದ ಒಟ್ಟಾರೆ ಬಡತನ ಪ್ರಮಾಣ ಇನ್ನಷ್ಟು ಇಳಿಕೆ ಕಾಣಲಿದೆ ಎಂದು ಅಂದಾಜಿಸಿರುವುದು ಭಾರತೀಯರೆಲ್ಲರ ಪಾಲಿಗೆ ಆಶಾದಾಯಕ ಸಂಗತಿಯೇ. ಬಡತನಮುಕ್ತ ಭಾರತ ನಿರ್ಮಾಣ ಸರಕಾರಗಳ ಇಂದು-ನಿನ್ನೆಯ ಸಂಕಲ್ಪವಲ್ಲ. 1970ರ ದಶಕದಿಂದಲೇ ಇಂತಹ ಒಂದು ಘೋಷಣೆ ಮೊಳಗಿತ್ತು. ಇದಕ್ಕಾಗಿ ಹತ್ತು ಹಲವು ಅಭಿಯಾನ, ಯೋಜನೆಗಳನ್ನು ಸರಕಾರಗಳು ಅನುಷ್ಠಾನಗೊಳಿಸುತ್ತಲೇ ಬಂದಿವೆ.

ದಾಸಸಾಹಿತ್ಯಕ್ಕೆ ಭರತನಾಟ್ಯದ ನೃತ್ಯನಮನ

ದಾಸ ನೃತ್ಯಾರ್ಚನೆಯಲ್ಲಿ ಗಮನ ಸೆಳೆದ ಬಾಲಪ್ರತಿಭೆ ಪೂರ್ವಿ ಎಂ.ಎಸ್. ಕಲಾಪ್ರದರ್ಶನ

• **ಉದಯವಾಹಿನಿ, ಬೆಂಗಳೂರು**

ಹರಿದಾಸರ ಭಕ್ತಿಸಾಹಿತ್ಯದ ತಾತ್ತ್ವಿಕ ಸಂದೇಶ, ಭಕ್ತಿಭಾವ ಮತ್ತು ಸಂಗೀತಮಾಧುರ್ಯವನ್ನು ಭರತನಾಟ್ಯದ ಮೂಲಕ ಅಭಿವ್ಯಕ್ತಿಸಿದ 'ದಾಸ ನೃತ್ಯಾರ್ಚನೆ' ಕಾರ್ಯಕ್ರಮ ಪ್ರೇಕ್ಷಕರ ಗಮನ ಸೆಳೆಯಿತು.

ಬಾಲನೃತ್ಯಪ್ರತಿಭೆ ಪೂರ್ವಿ ಎಂ.ಎಸ್. ಅವರ ಭರತನಾಟ್ಯ ರಂಗಪ್ರವೇಶದ ಅಂಗವಾಗಿ ಅ. 31ರಂದು ಶನಿವಾರ ಸಂಜೆ ನಗರದ ದೊಡ್ಡಕಲ್ಲಸಂದ್ರದ ಕನಕಪುರ ಮುಖ್ಯ ರಸ್ತೆಯ ಮೀನಾಕ್ಷಿ ರಂಗಮಂಚದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಸಂಗೀತ ವಿದ್ವಾಂಸ ವಿದ್ವಾನ್ ಪಟ್ಟಾಭಿರಾಮ ಪಂಡಿತ್ ಟಿ.ಎಸ್. ಮತ್ತು ಭರತನಾಟ್ಯ ಕಲಾವಿದೆ, ನೃತ್ಯ ಸಂಯೋಜಕಿ ವಿದುಷಿ ಅಪರ್ಣಾ ಕೆ. ಶರ್ಮಾ ಅವರು, ಭಾರತೀಯ ಶಾಸ್ತ್ರೀಯ ಕಲೆಗಳು ಕೇವಲ ಮನರಂಜನೆಯ ಮಾಧ್ಯಮಗಳಲ್ಲ ಅವು ನಮ್ಮ ಸಂಸ್ಕೃತಿ, ಪರಂಪರೆ ಮತ್ತು ಜೀವನಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಪ್ರಬಲ ಸಾಧನಗಳಾಗಿವೆ.

ಬಾಲ್ಯದಲ್ಲಿಯೇ ಇಂತಹ ಕಲಾಸಾಧನೆಗೆ ತೊಡಗಿಸಿಕೊಳ್ಳುವುದು ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು. ಗೌರವಾನ್ವಿತ ಅತಿಥಿಗಳಾಗಿದ್ದ ಖ್ಯಾತ ನೃತ್ಯಗುರು ಹಾಗೂ ದೂರದರ್ಶನ ಕಲಾವಿದೆ ವಿದುಷಿ ಡಾ. ಪ್ರಿಯಾ ಗಣೇಶ್ ಅವರು, ರಂಗಪ್ರವೇಶ ಎನ್ನುವುದು ಕಲಿಕೆಯ ಅಂತಿಮ ಹಂತವಲ್ಲ, ಬದಲಾಗಿ ಕಲಾವಿದೆಯ ಮುಂದಿನ ಕಲಾಪಯಣಕ್ಕೆ ನಾಂದಿ. ನಿರಂತರ ಅಭ್ಯಾಸ, ಶಿಸ್ತು, ಗುರುಭಕ್ತಿ ಮತ್ತು ಕಲೆಯ ಬಗೆಗಿನ ಬದ್ಧತೆಯಿಂದ ಮಾತ್ರ ಉತ್ತಮ ಕಲಾವಿದೆಯಾಗಿ ರೂಪುಗೊಳ್ಳಲು ಸಾಧ್ಯ ಎಂದು ತಿಳಿಸಿದರು.

ದಾಸಸಾಹಿತ್ಯದ ನೃತ್ಯವೈಭವ: ಕಾರ್ಯಕ್ರಮದಲ್ಲಿ ಪುಷ್ಪಾಂಜಲಿಯೊಂದಿಗೆ ಕನಕದಾಸರ 'ನಮ್ಮಮ್ಮ ಶಾರದೆ', ಶ್ರೀಪಾದರಾಜರ 'ಭೂಷಣಕೆ ಭೂಷಣ', ಪುರಂದರದಾಸರ 'ಆಡಪೋದಲ್ಲೆ ಮಕ್ಕಳು', ವಿಜಯದಾಸರ 'ಕುನಿಕುನಿಯುತ ಬಾರೋ', ಜಗನ್ನಾಥದಾಸರ 'ಆವ ರೂಪವ ನೋಡಿ' ನಿಂದಾಸ್ತುತಿ ಮತ್ತು ಉಗಾಭೋಗ, ಗೋಪಾಲದಾಸರ ಸಾಹಿತ್ಯವಿರುವ ತಿಲ್ಲಾನ ಹಾಗೂ ಹರಪನಹಳ್ಳಿ ಭೀಮವ್ವ ಅವರ ಮಂಗಳ ಸೇರಿದಂತೆ ಎಂಟು ಕೃತಿಗಳನ್ನು ಪೂರ್ವಿ ನೃತ್ಯರೂಪದಲ್ಲಿ ಪ್ರಸ್ತುತಪಡಿಸಿದರು. ಹರಿದಾಸರ ಕೃತಿಗಳ ಭಾವಾರ್ಥಕ್ಕೆ ತಕ್ಕ ಅಭಿನಯ, ಮುದ್ರೆಗಳು ಮತ್ತು ಲಯಬದ್ಧ ಹೆಜ್ಜೆಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾದವು.

ಆರನೇ ವಯಸ್ಸಿನಲ್ಲಿ ಭರತನಾಟ್ಯ ಕಲಿಕೆ ಆರಂಭಿಸಿದ ಪೂರ್ವಿ, ವಿದುಷಿ ಪದ್ಮಗಂಧಿನಿ ರಾವ್ ಹುಲಿಕಲ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆದಿದ್ದಾರೆ. ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಜೂನಿಯರ್ ಭರತನಾಟ್ಯ ಪರೀಕ್ಷೆಯಲ್ಲಿ ಶೇ. 91 ಅಂಕ ಗಳಿಸಿರುವುದು ಅವರ ಕಲಾಸಕ್ತಿಗೆ ಸಾಕ್ಷಿಯಾಗಿದೆ. ವಿದುಷಿ ಹರ್ಷಿತಾ ವಿದ್ಯಾ ಗಾಯನ, ಪದ್ಮಗಂಧಿನಿ ರಾವ್ ಹುಲಿಕಲ್ ನಟುವಾಂಗ, ವಿದ್ವಾನ್ ಶ್ರೀಹರಿ ರಂಗಸ್ವಾಮಿ ಮೃದಂಗ, ವಿದ್ವಾನ್ ತುಮಕೂರು ಬಿ. ಶಶಿಶಂಕರ್ ಘಟಂ ಹಾಗೂ ವಿದ್ವಾನ್ ನರಸಿಂಹ ಮೂರ್ತಿ ಕೊಳಲಿನಲ್ಲಿ ಸಹಕರಿಸಿದರು. ಶ್ರೀಮತಿ ಸುಷ್ಮಾ ಡಿ.ಎಸ್. ಕಾರ್ಯಕ್ರಮ ನಿರೂಪಿಸಿದರು.

ಮಾನಸ ಸಂದೀಪ್ ಮತ್ತು ಸಂದೀಪ್ ಎಂ.ಆರ್. ದಂಪತಿಯ ಪುತ್ರಿಯಾದ ಪೂರ್ವಿಯ ಕಲಾಸಾಧನೆಗೆ ಪೋಷಕರು ಹಾಗೂ ಗುರುಗಳ ಪ್ರೋತ್ಸಾಹ ಮತ್ತು ಮಾರ್ಗದರ್ಶನ ಬೆನ್ನೆಲುಬಾಗಿದೆ.

ಶಾಸ್ತ್ರೀಯ ನೃತ್ಯದ ಸೌಂದರ್ಯದೊಂದಿಗೆ ಕನ್ನಡ ದಾಸಸಾಹಿತ್ಯದ ಭಕ್ತಿವೈಭವವನ್ನು ಪರಿಚಯಿಸಿದ ಈ ರಂಗಪ್ರವೇಶವು ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಯಿತು.



☛ ಉದಯವಾಹಿನಿ ಚಿತ್ರ



ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

27

ಬಾಯಿ ಒಣಗಿದಾಗ ತಕ್ಷಣದ ಪರಿಹಾರ



ಪ್ರಶ್ನೆ ಪತ್ರಿಕೆ ಕಣ್ಣಿಗೆ ಬಿದ್ದ ಕ್ಷಣದಲ್ಲೇ ಹಲವರ ನಾಲಿಗೆ ಅಂಟಿದಂತೆ, ತುಟಿ ಬಿರಿದಂತೆ ಭಾಸವಾಗುತ್ತದೆ. ನುಂಗುವಿಕೆ ಸ್ತಬ್ಧವಾಗುತ್ತದೆ, ಗಂಟಲಲ್ಲಿ ಕಟ್ಟುವಿಕೆ, ಧ್ವನಿ ಕ್ಷೀಣತೆ ಕಾಣುತ್ತದೆ.

ಇದು ಸಿದ್ಧತೆಯ ವೈಫಲ್ಯವಲ್ಲ, ಸಹಾನುಭೂತಿ ನರಮಂಡಲದ ಜಾಗೃತಿಯ ದ್ಯೋತಕ. ಆತಂಕ ಉಲ್ಬಣಿಸಿದಾಗ ಲಾಲಾಗ್ರಂಥಿಗಳು ಮಂದಗತಿಗೆ ಜಾರುತ್ತವೆ. ಒಣಬಾಯಿ ಇದ್ದರೆ ಸ್ಮೃತಿ ಪಟಲದಲ್ಲಿ ಮಂಜು ಆವರಿಸುತ್ತದೆ, ಅಕ್ಷರಗಳು ತೇಲಾಡಿದಂತೆ ಕಾಣುತ್ತವೆ, ಏಕಾಗ್ರತೆಯ ನಾರು ಹರಿದುಹೋಗುತ್ತದೆ.

ಹೀಗಾಗಿ ಪರೀಕ್ಷಾ ಕೊಠಡಿಯಲ್ಲೇ ತತ್ ಕ್ಷಣದ ಜಲೋಪಚಾರ ಅತ್ಯಗತ್ಯವಾಗುತ್ತದೆ.

ಭೀತಿ ಬೇಡ, ಸರಳ ಮಾರ್ಗಗಳು ಹತ್ತಿರದಲ್ಲೇ ಇವೆ. ಗುಟುಕು ಗುಟುಕಾಗಿ ಉಷ್ಣರಹಿತ ಜಲವನ್ನು ಆಸ್ವಾದಿಸಿ, ಒಮ್ಮೆಲೇ ಗಟಗಟನೆ ಕುಡಿಯುವುದು ತರವಲ್ಲ.

ಜಿಹ್ವೆಯ ಮೇಲೆ ಒಂದು ಲವಂಗ, ಏಲಕ್ಕಿ ಅಥವಾ ಕಲ್ಲುಸಕ್ಕರೆ ಇರಿಸಿದರೆ ರಸೋತ್ಪತ್ತಿ ಜಾಗೃತಗೊಳ್ಳುತ್ತದೆ. ನಾಲಿಗೆ ತುದಿಯನ್ನು ಅಂಗುಳಕ್ಕೆ ಸ್ಪರ್ಶಿಸಿ ಹತ್ತು ಕ್ಷಣ ಧ್ಯಾನಿಸಿ, ನಾಸಿಕದಿಂದ ಗಾಳಿಯನ್ನು ಎಳೆದು ಮಂದಗತಿಯಲ್ಲಿ ಬಿಡಿ. ಜಲಧಾರೆ ಸದಾ ಜೋಳಿಗೆಯಲ್ಲಿ ಇರಲಿ.

ಮರೆತಿಲ್ಲ, ತೇವವೇ ಚೈತನ್ಯದ ಸಂಕೇತ.

ಗಂಟಲು ಹಸಿರಾಗಿದ್ದರೆ ಆಲೋಚನೆ ಹಸುರಾಗುತ್ತದೆ, ಉತ್ತರ ಪತ್ರಿಕೆಯಲ್ಲಿ ಪದಗಳು ಸ್ರವಿಸುತ್ತವೆ. ಮೊದಲು ನೀರು, ನಂತರ ಲೇಖನಿ.



ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಕಲಾದೀಪ್ತಿ - 2026ರ ವಾರ್ಷಿಕ ನೃತ್ಯ ಸಂಭ್ರಮ



ಅಂತರರಾಷ್ಟ್ರೀಯ ನೃತ್ಯ ಕಲಾವಿದೆ ಮತ್ತು ಗುರುವಾಗಿ ಖ್ಯಾತರಾಗಿರುವ ನಾಟ್ಯ ರಾಣಿ ಶಾಂತಲಾ ಪ್ರಶಸ್ತಿ ಪುರಸ್ಕೃತೆ ಡಾ. ವಸುಂಧರಾ ದೊರಸ್ವಾಮಿ ಅವರ ನುರಿತ ಗರಡಿಯಲ್ಲಿ ರೂಪುಗೊಂಡಿರುವ ನೃತ್ಯಶಿಲ್ಪವಿದುಷಿ. ದೀಪ್ತಿ ಆದಿಶೇಷ್.

ಇವರು ಇಂದು ಉತ್ತಮ ನೃತ್ಯಗಾರ್ತಿಯಾಗಿ ಗುರುತಿಸಿಕೊಂಡಿರುವುದಲ್ಲದೆ, ಅಷ್ಟೇ ಉತ್ತಮ ನೃತ್ಯ ಶಿಕ್ಷಕಿಯಾಗಿಯೂ ಬದ್ಧತೆಯಿಂದ ಕಾರ್ಯೋನ್ಮುಖರಾಗಿದ್ದು, ತಮ್ಮದೇ ಆದ 'ಕಲಾದೀಪ್ತಿ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್' ನೃತ್ಯಸಂಸ್ಥೆಯಲ್ಲಿ ನೂರಾರು ಮಂದಿ ನೃತ್ಯಾಕಾಂಕ್ಷಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದಾರೆ. ಜೊತೆಗೆ ಶ್ರದ್ಧೆ, ಶಿಸ್ತು ಹಾಗೂ ಸಮರ್ಪಣಾ ಮನೋಭಾವದ ಇವರು, ಇಂದಿಗೂ ಮೈಸೂರಿನ 'ವಸುಂಧರಾ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್'ನಲ್ಲಿ ತಮ್ಮ ಗುರುಗಳ ದಕ್ಷ ಮಾರ್ಗದರ್ಶನದಲ್ಲಿ ಕಠಿಣ ನೃತ್ಯಾಭ್ಯಾಸವನ್ನು ಮುಂದುವರಿಸಿದ್ದು, ಭರತನಾಟ್ಯದ ವಸುಂಧರಾ ಶೈಲಿಯಲ್ಲಿ ಪರಿಣತಿ ಹೊಂದಿದ್ದಾರೆ.

ಮೂಲತಃ ಮೈಸೂರಿನಲ್ಲಿ ಮೊದಲು ಆರಂಭವಾದ ನೃತ್ಯಶಾಲೆಯು ಇದೀಗ ಕಳೆದ ಮೂರುವರ್ಷಗಳಿಂದ ತನ್ನ ಕಾರ್ಯಚಟುವಟಿಕೆಗಳನ್ನು ಬೆಂಗಳೂರಿಗೂ ವಿಸ್ತರಿಸಿದೆ. ಕಳೆದ ಹಲವು ವರ್ಷಗಳಿಂದ ಕಲಾದೀಪ್ತಿಯ ವಿದ್ಯಾರ್ಥಿಗಳು ಅನೇಕ ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ಕಲಾಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಕಲಾದೀಪ್ತಿಯಲ್ಲಿ ಭರತನಾಟ್ಯ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತ ತರಬೇತಿಯನ್ನು ನೀಡಲಾಗುತ್ತಿದ್ದು, ಕರ್ನಾಟಕ ಸರ್ಕಾರದ ವಿವಿಧ ನೃತ್ಯ- ಸಂಗೀತ ಪರೀಕ್ಷೆಗಳಲ್ಲಿ ನಿರಂತರವಾಗಿ ಡಿಸ್ಟಿಂಕ್ಷನ್ ಗಳಿಸುತ್ತಿರುವುದು ಅದರ ವಿಶೇಷ.

ಶಾಸ್ತ್ರೀಯ ಕಲೆಗಳಲ್ಲಿ ಆಸಕ್ತಿ ಹೊಂದಿರುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಉತ್ತಮ ಹಾಗೂ ಗಟ್ಟಿಯಾದ ಕಲಾ ಅಡಿಪಾಯವನ್ನು ಒದಗಿಸುವುದರ ಜೊತೆಗೆ, ಅವರಲ್ಲಿ ಶಿಸ್ತು, ಆತ್ಮವಿಶ್ವಾಸ ಮತ್ತು ಕಲೆಯ ಬಗೆಗಿನ ನೈಜ ಅಭಿರುಚಿಯನ್ನು ಬೆಳೆಸುವುದು 'ಕಲಾದೀಪ್ತಿ'ಯ ಮುಖ್ಯ ಧ್ಯೇಯವಾಗಿದೆ. ಇದೀಗ 'ಕಲಾದೀಪ್ತಿ'ಯ ವಿದ್ಯಾರ್ಥಿಗಳ ನೃತ್ಯಪ್ರತಿಭೆಯನ್ನು ಅನಾವರಣಗೊಳಿಸುವ ವಾರ್ಷಿಕ ನೃತ್ಯ ಸಂಭ್ರಮ 'ಕಲಾಕೃತಿ -2026' ರ ಕಾರ್ಯಕ್ರಮವನ್ನು ಈ ತಿಂಗಳ 4 ನೇ ತಾ. ಬುಧವಾರದಂದು ಸಂಜೆ 5ಗಂಟೆಗೆ ಬೆಂಗಳೂರಿನ ದೊಡ್ಡಕಲ್ಲಸಂದ್ರದ ಕುಮಾರನ್ಸ್ ಶಾಲೆಯ 'ಮೀನಾಕ್ಷಿ ರಂಗಮಂಚ ' ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ. ಸಂಪ್ರದಾಯವನ್ನು ಪೋಷಿಸುತ್ತಾ, ಗಟ್ಟಿಯಾದ ಅಡಿಪಾಯವನ್ನು ನಿರ್ಮಿಸುವ, ಹೊಸ ಅವಕಾಶಗಳನ್ನು ಸೃಜಿಸುವ ಆಶಯವುಳ್ಳ ಈ ಸುಮನೋಹರ ಕಾರ್ಯಕ್ರಮವನ್ನು ವೀಕ್ಷಿಸಲು ಎಲ್ಲರಿಗೂ ಸುಸ್ವಾಗತ.

ಇತಿಹಾಸದ ವೈಭವಕ್ಕೆ ನೃತ್ಯದ ಮೆರುಗು; ಯಶಸ್ವಿಯಾಗಿ ಮೂಡಿಬಂದ 'ಪುನರ್ನವ'



☛ ಉದಯವಾಹಿನಿ ಚಿತ್ರ


• **ಉದಯವಾಹಿನಿ, ಬೆಂಗಳೂರು**

ಭಾರತದ ಐತಿಹಾಸಿಕ ಚಕ್ರವರ್ತಿಗಳಾದ ರಾಜಾ ರಾಣಾ ಕುಂಭ ಮತ್ತು ರಾಜರಾಜ ಚೋಳರ ಜೀವನಗಾಥೆಯನ್ನು ನೃತ್ಯ ಮತ್ತು ಸಂಗೀತದ ಮೂಲಕ ಪರಿಚಯಿಸುವ 'ಪುನರ್ನವ' ವಿಶೇಷ ಕಲಾ ಪ್ರದರ್ಶನವು ಅಕ್ಟೋಬರ್ 31ರಂದು ನಗರದ ಕಲಾ ಸಂಭ್ರಮದಲ್ಲಿ ಯಶಸ್ವಿಯಾಗಿ ನಡೆಯಿತು.

ನವೀನ್ ಆರ್. ಹೆಗಡೆ ಅವರು ಕಥಕ್ ಮತ್ತು ರಂಗಭೂಮಿಯ ಮೂಲಕ ರಾಜಾ ರಾಣಾ ಕುಂಭ ಅವರ ಜೀವನಗಾಥೆಯನ್ನು ಪ್ರಸ್ತುತಪಡಿಸಿದರೆ, ಸಮುಧ್ಯತಾ ಭಟ್ ಅವರು ಭರತನಾಟ್ಯದ ಮೂಲಕ ರಾಜರಾಜ ಚೋಳರ ಆಡಳಿತ ಮತ್ತು ಸಾಧನೆಗಳನ್ನು ವೇದಿಕೆಯಲ್ಲಿ ಅನಾವರಣಗೊಳಿಸಿದರು. ಪಂಡಿತ್ ಸಮೀರ್ ರಾವ್ ಅವರ ಮೂಲ ಸಂಗೀತ ಸಂಯೋಜನೆ ಪ್ರದರ್ಶನಕ್ಕೆ ವಿಶೇಷ ಮೆರುಗು ನೀಡಿತು. ಇತಿಹಾಸಕಾರರಾದ ಡಾ. ಅನುರಾಧಾ ವಿ. ಅವರು ಸಂವಾದ ನಿರ್ವಹಿಸಿದರು.

ಪರಮ್ ಫೌಂಡೇಶನ್‌ನ ಪರಮ್ ಕಲ್ಚರ್ ವತಿಯಿಂದ ಆಯೋಜಿಸಲಾದ ಈ ಉಪಕ್ರಮದಡಿ ಆಯ್ಕೆಯಾದ ಕಲಾವಿದರಿಗೆ 2 ಲಕ್ಷ ಪ್ರೋತ್ಸಾಹಧನದ ಜೊತೆಗೆ ವೇದಿಕೆ, ತಾಲೀಮು ಸ್ಥಳ, ಬೆಳಕು ಮತ್ತು ಧ್ವನಿ ಸೇರಿದಂತೆ ಅಗತ್ಯ ತಾಂತ್ರಿಕ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಇತಿಹಾಸ, ನೃತ್ಯ ಮತ್ತು ಸಂಗೀತದ ಸಮ್ಮಿಲನದೊಂದಿಗೆ ಮೂಡಿಬಂದ 'ಪುನರ್ನವ' ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಜನರಿಗೆ ತಲುಪಿಸುವ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸುವ ಪರಮ್ ಕಲ್ಚರ್‌ನ ಪ್ರಯತ್ನಕ್ಕೆ ಈ ಕಾರ್ಯಕ್ರಮ ಮತ್ತಷ್ಟು ಬಲ ತುಂಬಿತು.

ರಾಮಾಯಣ



17. ಹಿಂದೆ ದೇವಾಸುರರು ಸೆಣಸಿದಂತೆ ಕಪಿಗಳೂ ರಕ್ಕಸರೂ ಬದ್ಧವೈರದಿಂದ ಹೋರಾಡಿದುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಆಗ ಅವನು ಕ್ರೋಧಪರವಶತೆಯಿಂದ ಶಸ್ತ್ರಾಸ್ತ್ರಗಳ ಮಳೆಗರೆದು ಬೊಬ್ಬಿರಿದ. ನೀಲನು ಸಾಮಾನ್ಯನಲ್ಲ, ಒಮ್ಮೆ ನುಗ್ಗಿ ಮಾಣಪ್ರಯೋಗಮಾಡಿದರೆ, ಮತ್ತೊಮ್ಮೆ ಚಿಗಿಯುತ್ತ ಶಸ್ತ್ರಗಳನ್ನು ಸುರಿಸುತ್ತಿದ್ದ, ಮಗುಳೊಮ್ಮೆ ಎದುರಾಳಿಯ ಬಾಣಗಳಿಂದ ತಪ್ಪಿಸಿಕೊಳ್ಳುತ್ತ ಯುದ್ಧ ಮಾಡುತ್ತಿದ್ದ ಅಂತಹ ಮೇಲನನ್ನು ಹಿಡಿಯುವುದು ರಾವಣನಿಗೆ ಅಸಾಧ್ಯವಾಯಿತು. ತನ್ನ ಶಸ್ತ್ರಸಮೂಹಕ್ಕೂ ಮಾಕ್ಕದಾದ. ಮುಂದೆ ಹೋಗಿ ಕತ್ತಿಯಿಂದ ಹೊಡೆಯಲು ಅವನು ಇದ್ದ ಕಡೆ ಇದ್ದರೆ ತಾನೇ! ಅವನ ಕಾಲುಗಳ ಚಟುಲತೆಗೆ ಹೋಲಿಕೆಯೇ ಇಲ್ಲ ಎಂಬಂತೆ ಅವನ ಚಲನವಲನವಿತ್ತು. ಯಾವ ರೀತಿಯ ಹೊಡೆತಕ್ಕೂ ಸಿಕ್ಕದ ಇವನನ್ನು ಏನು ಮಾಡಲಿ ಎಂದು ರಕ್ಕಸನಾಥನು ಅವನ ಸಾಹಸದಿಂದ ವಿಸ್ಮಿತನಾಗಿ ಆಲೋಚಿಸುತ್ತ ಅವನ ಮೇಲೆ ಬಾಣಾಹತಿಯನ್ನು ಮುಂದುವರಿಸಿದ. ತನ್ನ ಮೇಲೆ ಬಂದು ಎರಗುತ್ತಿರುವ ಶಸ್ತ್ರತತಿಯನ್ನು ಲೆಕ್ಕಕ್ಕೇ ತಂದುಕೊಳ್ಳದೆ ಅಪರಿಮಿತ ಕೈಚಳಕದಿಂದ ದಾನವನ ಕಿರೀಟ ಕೋದಂಡ ರಥದ ಕಳಶ ಮುಂತಾದವುಗಳಲ್ಲಿ ತನ್ನ ಬಾಣಗಳನ್ನು ನೆಡುತ್ತಿದ್ದ ನೀಲನನ್ನು ನೋಡಿ ರಾಘವ ಮರುತ್ಸುತ ಸೌಮಿತ್ರಿ ಜಾಂಬವ ಮುಂತಾದವರು ಆಶ್ಚರ್ಯ-ಮೆಚ್ಚುಗೆಗಳಿಂದ ತಲೆದೂಗಿದರು. ನೆಲದ ಮೇಲೆ ಪಾದರಸದಂತೆ ಚಟುಲತೆಯಿಂದ ನಡೆದಾಡುತ್ತ ಹೋರಾಡುವ ಅವನ ಕಾರ್ಯಪರಿಣತಿಯ ಪರಿಯನ್ನು ನೋಡಿ ದೈತ್ಯಪತಿಯೂ ಬೆರಗಾಗಿ ನಾಲ್ಕೂ ದಿಕ್ಕುಗಳನ್ನು ನೋಡುವಂತಾಯಿತು. ಹೊಡೆಯಲು ಅವನು ಎಲ್ಲಿದ್ದಾನೆಂದು ಕಾಣಿಸುವುದೇ ಇಲ್ಲ; ಇತ್ತ ಕಡೆಯಿರುವನೆಂದು ಹೊಡೆದರೆ ಅವನತ್ತಲೋ ಇರುತ್ತಾನೆ. ಹೀಗಾಗಿ ಬಿಟ್ಟ ಬಾಣಗಳು ಅವನನ್ನು ತಾಕದೆಯೇ ಇದ್ದರೆ ಏನೆಂದು ಹೋರಾಡುವುದು! ಗಾಳಿಯನ್ನು ಗುದ್ದಿ ಮೈನೋಯಿಸಿಕೊಂಡ ಪರಿಯಿದು ಎಂದು ಯೋಚಿಸುತ್ತಿರಲು. ನೀಲನು ತೇರಿನ ತುದಿಯಲ್ಲಿ ನಿಂತಿರುವುದು ಕಾಣಿಸಿ ಅತ್ತ ಬಾಣವನ್ನು ಬಿಡಲು ತನ್ನ ಬತ್ತಳಿಕೆಗೆ ಕೈಹಾಕಿದ. ರಾವಣನು ಬಿಟ್ಟ ಬಾಣಗಳು ಕಿಡಿಗಳನ್ನು ಸೂಸುತ್ತ ಬರಲು ನೀಲನು ತುಂತುರ್ವನಿಗಳಿಂದ ಅದನ್ನು ಕೆಡಿಸುತ್ತ ಸಾಗುವಂತೆ ಅಸ್ತ್ರಗಳನ್ನು ಸುರಿಸಿದ. ಅಸುರರಾಜನು ಕೈಯಲ್ಲಿ ಶರವನ್ನು ಹಿಡಿದುಕೊಂಡು ಕಪೀಶ್ವರನ ಕಡೆಗೆ ನೋಡುತ್ತ, ನೀಲನೇ, ನೀನು ರಣವಿಜಯ, ರಥದ ಮೇಲೆ ನಿಂತು ಸಾಹಸವನ್ನು ಮಾಡುತ್ತೀಯೆ, ನೀನು ಶತ್ರುವಿನ ಭಾಗಕ್ಕೆ ಯಮ' ಎಂದೆಲ್ಲ ನಿನ್ನ ಕೀರ್ತಿಕೌಶಲಗಳನ್ನು ಕುರಿತು ಅನೇಕರು ನಾನಾ ವಿಧವಾಗಿ ಹೊಗಳುತ್ತಾರೆ. ಆದರೆ, ಇಗೋ ನೋಡು, ಆಗ್ನೇಯಾಸ್ತ್ರವು ನಿನ್ನ ಕಡೆಗೆ ಬರುತ್ತಿದೆ. ನೀನದನ್ನು ಎಂತಹ ಕೌಶಲದಿಂದ ಎದುರಿಸುತ್ತೀಯೋ ನೋಡುತ್ತೇನೆ. ನಿನ್ನ ಜೀವವುಳಿದರೆ ಬಳಿಕ ಭೂಮಿ ಮುಂತಾದ ಸಂಪತ್ತನ್ನು ಪಡೆಯಬಹುದು, ಆದರೆ ಅದು ಉಳಿಯುವುದು ಕಷ್ಟ. ಹೊಗಳುವರಲ್ಲ, ನನಾವಸನ ಉಳಿದರೆ ಕಾಗ ನಿನ್ನ ಕುರಿತು ಜಯಡಂಗುರವನ್ನು ಹೊಡೆಸುತ್ತೇನೆ. ಇಗೋ. ತಗೋ, ತಡೆ'' ಎಂದು ಬೆಂಕಿಬಾಣವನ್ನೆ ಸೆದ. ಥಾತವಾಗ್ರಣಿಯು ಬಿಟ್ಟ ವೈಶ್ವಾನರಾಸ್ತ್ರದಿಂದ ಏನಾಗಿಬಿಡುತ್ತದೆಯೋ, ಹಾತ್ ಸೂರ್ಯರುಗಳ ಪಾಡೇನೋ, ಬೆಟ್ಟಭೂಮಿಗಳೇನು ಗತಿಯನ್ನು ಕಾಣುವುವೋ ಎಂಬುದು ಯಾರಿಗೂ ತಿಳಿಯದಾಯಿತು. ನಿಮಿಷಾ0ತರದಲ್ಲಿ ಆ ಬಾಣದ ದಳ್ಳುರಿಯಿಂದ ಸೂರ್ಯಚಂದ್ರರ ತೇಜಸ್ಸು ಮಸುಳಿಸಿತು, ಸಮಸ್ತ ಪ್ರಾಣಿನಿವಹವು ಗಾಬರಿಯಿಂದ ತುಂಬಿಹೋಯಿತು. ತೇರಿನ ಮೇಲಿದ್ದ ಕಪಿವರನನ್ನು ಗುರಿಯಾಗಿರಿಸಿಕೊಂಡು ಬಿಟ್ಟ ಆ ಬಾಣವು ಉರಿಯನ್ನು ಸೂಸುತ್ತ. ದೊಡ್ಡ ದೊಡ್ಡ ಕೆಂಡಗಳನ್ನುಗುಳುತ್ತ ಭೋರ್ಗರೆಯುತ್ತ ಸರ್‍ರೆಂದು ಹೋಗಿ ಆ ಕಪಿವರನ ಎದೆಗೆ ಬಿತ್ತು. ಅದರ ತಾಪವನ್ನು ತಾಳಲಾರದ ನೀಲನು ನೆಲದ ಮೇಲೆ ಬಿದ್ದುಬಿಟ್ಟ ಆದರೆ ತಂದೆಯಾದ ಅಗ್ನಿದೇವನ ಮಹಿಮೆಯೇ ರಾವಣನು ಬಿಟ್ಟ ಅಸ್ತ್ರದಲ್ಲಿ ಅಡಗಿದ್ದುದರಿಂದಲೂ, ಸ್ವತಃ ಆ ತೇಜಸ್ವಿಯಾದುದರಿಂದಲೂ ನೀಲನು ಮೆನೆಳಕಾಲೂರಿಕೊಂಡು ವೀರಾಸನದಲ್ಲಿ ಬಿದ್ದನೇ ಹೊರತು ಮೃತನಾಗಲಿಲ್ಲ. ನೀಲನು ಬಿದ್ದುದನ್ನು ನೋಡಿ ರಾವಣನು ಸಂತಸದಿಂದ ತನ್ನ ರಥವನ್ನು ಲಕ್ಷ್ಮಣನ ಕಡೆಗೆ ತಿರುಗಿಸಿ ಭೋರ್ಗರೆಸುತ್ತ ಓಡಿಸಿದನು. ''ತರಳ, ನಿನಗೆ ಯುದ್ಧವೇತಕ್ಕೆ, ಹಿಂದಿರುಗು'' ಎಂದು ಅವನ ಮೇಲೆ ಶರವೃಷ್ಟಿಯನ್ನು ಕರೆಯಲು ಲಕ್ಷ್ಮಣನು ಆ ಬಾಣದ ಸ್ವರೂಪವನ್ನರಿತು ಅವುಗಳನ್ನು ಮಧ್ಯದಲ್ಲಿಯೇ ಖಂಡಿಸಿದನಲ್ಲದೆ ರಾಕ್ಷಸೇಶ್ವರನ ಮೇಲೆ ತಾನೂ ಬಾಣದ ಮಳೆಗರೆದ. ವ್ಯರ್ಥವಾಗದ ಮಹಾ ಸರ್ಪಗಳಂತಿದ್ದ ತನ್ನ ಬಾಣಗಳನ್ನು ಲಕ್ಷ್ಮಣನು ಕತ್ತರಿಸಿ ಹಾಕಿದುದನ್ನು ಕಂಡ ಲಂಕೇಶ್ವರನು ಕ್ರೋಧೋನತ್ತನಾಗಿ ಅನೇಕ ಹರಿತವಾದ ಬಾಣಗಳನ್ನು ಸೌಮಿತ್ರಿಯ ಮೇಲೆ ಪ್ರಯೋಗಿಸಿದ.


ಮುಂದುವರೆಯುವುದು

ಗೋ ರಕ್ಷಣೆ ಗೋ ಸಮ್ಮಾನಕ್ಕಾಗಿ ರಾಜ್ಯಾದ್ಯಂತ 3 ಕೋಟಿ ಸಹಿ ಸಂಗ್ರಹ



ದೇಶಾದ್ಯಂತ ನಡೆಯುತ್ತಿರುವ ಗೋ ಸಮ್ಮಾನ ಆಹ್ವಾನ ಅಭಿಯಾನ ಅಂಗವಾಗಿ ರಾಜ್ಯದಲ್ಲಿ 3 ಕೋಟಿ ಸಹಿ ಸಂಗ್ರಹಿಸುವ ಗುರಿ ಹೊಂದಲಾಗಿದೆ ಎಂದು ಅಭಿಯಾನದ ರಾಜ್ಯ ಮುಖ್ಯಸ್ಥ ನಂದಬಾಬಾ ಶ್ರೀ ರವೀಂದ್ರಾನಂದ ಸರಸ್ವತಿ ಸ್ವಾಮೀಜಿ ಹಾಗೂ ಅಭಿಯಾನದ ವಕ್ತಾರ ಡಾ. ಆರೂಢಭಾರತೀ ಸ್ವಾಮೀಜಿ ತಿಳಿಸಿದ್ದಾರೆ. ಅವರಿಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ತಾಯಿಯ ಹಾಲಿನ ನಂತರ ಜೀವಮಾನ ಕುಡಿಯುವುದು ಹಸುವಿನ ಹಾಲನ್ನು. ಬದುಕಿನ ಶುದ್ಧ ಆಹಾರದ ಸಾವಯವ ಕೃಷಿಗೆ ಹಸು ಜೀವಾಳ. ಭೂಮಿಯ ಫಲವತ್ತತೆ ಹೆಚ್ಚುವುದು ಗೋ ಗಂಜಲ ಗೋ ಗೊಬ್ಬರದಿಂದ. ಉದಾಹರಣೆಗೆ ಗೋಕೃಪಾಮೃತ. ಗೋ ಅರ್ಕ ಅನೇಕ ಕಾಯಿಲೆಗಳಿಗೆ ಮದ್ದು. ಅನೇಕ ವಿಧ ಗೋ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಪೈಪೋಟಿ ನೀಡಿವೆ. ಈಚೆಗೆ ಕೇಂದ್ರ ಸರ್ಕಾರ ಗೋ ಗ್ಯಾಸ್ ಗೆ ಉತ್ತೇಜನ ಘೋಷಿಸಿದೆ. ಆಯುರ್ವೇ ಘೃತಂ ತುಪ್ಪವೇ ಆಯುಷ್ಯ. ದೇವರ ಪೂಜೆಗೆ ಬಳಕೆಯಾಗುವುದು ಗೋ ಕ್ಷೀರ ಘೃತಾದಿಗಳು. ಗೋವು ಬದುಕಿದಾಗಿನಂತೆ ಸತ್ತ ಬಳಿಕವೂ ಅದು ಅತ್ಯುತ್ತಮ ಗೊಬ್ಬರವಾಗಿ ಭೂಮಿಯ ಸತ್ತ್ವ ಹೆಚ್ಚಿಸುವುದು. ಎಲ್ಲಾ ಜೀವರಾಶಿಗಳಿಗೆ ಪೃಥ್ವಿ ಆಧಾರವಾದರೆ ಪೃಥ್ವಿಗೆ ಗೋವು ಆಧಾರ. ಧಾರ್ಮಿಕ ಆಧ್ಯಾತ್ಮಿಕ ಆರ್ಥಿಕ ಸಾಮಾಜಿಕ ಎಲ್ಲಾ ಆಯಾಮಗಳಿಂದಲೂ ಗೋವು ಅತ್ಯುಪಯುಕ್ತ. ಸುಖ ಶಾಂತಿ ಸಮೃದ್ಧಿಯ ಮೂಲ ಗೋವು. ದೇಶ ಭಾಷೆ ಧರ್ಮಗಳ ಎಲ್ಲೆ ಮೀರಿ ಎಲ್ಲರಿಗೂ ಮಾನ್ಯ ಗೋವು. ಆದ್ದರಿಂದಲೇ ಗಾವೋ ವಿಶ್ವಸ್ಯ ಮಾತರ ಗೋವುಗಳು ಜಗದ ಮಾತೆಯರು ಎಂದಿದ್ದಾರೆ. ದೇಶದ ಸ್ವಾತಂತ್ರ್ಯದ ಸಂದರ್ಭದಲ್ಲಿ 90 ಕೋಟಿ ಇದ್ದ ಗೋವುಗಳ ಸಂಖ್ಯೆ ಈಗ ಎಂಟು ಕೋಟಿಗೆ ಕುಸಿದಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಮುಂದೊಂದು ದಿನ ಗೋ ಸಂತತಿ ಕಣ್ಮರೆಯಾಗಬಹುದು. ಅದರ ರಕ್ಷಣೆ ಹಾಗೂ ಸಂವರ್ಧನೆ ದೇಶದ ನಮ್ಮೆಲ್ಲರ ಹೊಣೆ. ಗೋವು ಪ್ರಾಣಿಮಾತ್ರವಲ್ಲ, ಅದು ನಮ್ಮೆಲ್ಲರ ಮಾತೆ. ರಾಷ್ಟ್ರ ಪಿತಾ, ರಾಷ್ಟ್ರ ಪಕ್ಷಿ, ರಾಷ್ಟ್ರ ಪ್ರಾಣಿ ಇದ್ದಂತೆ ಗೋವು ನಮ್ಮ ರಾಷ್ಟ್ರಮಾತೆಯಾಗಬೇಕು, ದೇಶಾದ್ಯಂತ ಗೋ ಹತ್ಯೆ ನಿಷೇಧ ಕಾಯ್ದೆಯನ್ನು ಜಾರಿಗೆ ತರಬೇಕು, ಹಾಲು ಕೊಡದ ಅಶಕ್ತ ಕಾಯಿಲೆಗೊಳಗಾದ ಗೋವುಗಳ ಸಂರಕ್ಷಣೆ ಹಾಗೂ ಗೋ ಸಂತತಿಯ ಸಂವರ್ಧನೆಗಾಗಿ ಗೋ ಸಚಿವಾಲಯವನ್ನು ತೆರೆಯಬೇಕು, ಗೋಮಾಳವನ್ನು ಗೋವುಗಳಿಗಾಗಿಯೇ ಮೀಸಲಿರಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಕೋರಲು ದೇಶಾದ್ಯಂತ ಸಾಧು ಸಂತ ಮಠಾಧೀಶರ ನೇತೃತ್ವದಲ್ಲಿ ಗೋ ಸಮ್ಮಾನ ಆಹ್ವಾನ ಅಭಿಯಾನ ನಡೆಯುತ್ತಿದೆ. 1966 ರಲ್ಲಿ ಕರಪಾತ್ರಿ ಮಹಾರಾಜರ ನೇತೃತ್ವದಲ್ಲಿ ದೇಶವ್ಯಾಪಿ ನಡೆದ ಗೋ ಆಂದೋಲನದ ನಂತರದ ಅತಿ ದೊಡ್ಡ ಗೋ ಅಭಿಯಾನ ಇದಾಗಿದೆ. ಕಳೆದ ನವೆಂಬರ್‌ನಲ್ಲಿ ಬೃಂದಾವನದಲ್ಲಿ ನಡೆದ ಸಂತರ ಸಭೆಯ ನಿರ್ಣಯದಂತೆ ಪ್ರಾರಂಭವಾದ ನಾಲ್ಕು ಹಂತಗಳ ಈ ಅಭಿಯಾನ ಎರಡು ಹಂತಗಳನ್ನು ಪೂರೈಸಿದೆ. ಮೊದಲ ಹಂತದಲ್ಲಿ ಐದು ಕೋಟಿ ಸಹಿ ಸಂಗ್ರಹದೊಂದಿಗೆ ದೇಶದ ಪ್ರತಿ ತಹಶೀಲ್ದಾರರ ಮೂಲಕ, ಎರಡನೇ ಹಂತದಲ್ಲಿ ಹದಿನೈದು ಕೋಟಿ ಸಹಿ ಸಂಗ್ರಹದೊಂದಿಗೆ ಪ್ರತಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿ ವಿಶ್ವದಾಖಲೆ ನಿರ್ಮಿಸಿದೆ. ದೇಶದಲ್ಲಿ ಈ ಅಭಿಯಾನಕ್ಕೆ ಮುಸ್ಲಿಂ ಸಂಘಟನೆಗಳನ್ನೂ ಒಳಗೊಂಡಂತೆ ವ್ಯಾಪಕವಾದ ಬೆಂಬಲ ವ್ಯಕ್ತವಾಗಿದೆ. ಇದೀಗ ಮೂರನೇ ಹಂತದ ಅಭಿಯಾನ ನಡೆಯುತ್ತಿದ್ದು ದೇಶಾದ್ಯಂತ ಮೂವತ್ತೊಂದು ಕೋಟಿ ಸಹಿ ಸಂಗ್ರಹಿಸಲು ಸಂಕಲ್ಪಿಸಿದ್ದು ಅದರಲ್ಲಿ ಕರ್ನಾಟಕದ ಭಾಗ ಮೂರು ಕೋಟಿ. ಬರುವ ಡಿಸೆಂಬರ್ 17 ರಂದು ಬೆಂಗಳೂರಿನಲ್ಲಿ ಲಕ್ಷ ಜನ ಸೇರಿ ಸಂತರ ನೇತೃತ್ವದಲ್ಲಿ ಮಾನ್ಯ ಮುಖ್ಯಮಂತ್ರಿ ಹಾಗೂ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು. ನಗರ ಹಾಗೂ ಪಟ್ಟಣ ಪ್ರದೇಶದಲ್ಲಿ ವಾರ್ಡ್ ಹಂತಗಳಲ್ಲಿ, ಗ್ರಾಮೀಣ ಭಾಗದಲ್ಲಿ ಪಂಚಾಯಿತಿ ಮಟ್ಟದಲ್ಲಿ ಸಹಿ ಸಂಗ್ರಹಿಸಲಾಗುವುದು. ನಾಡಿನಾದ್ಯಂತ ಸಂತರು ಹಾಗೂ ಮಠಾಧೀಶರು ಲಕ್ಷ ಲಕ್ಷ ಸಹಿ ಸಂಗ್ರಹಿಸಲು ಮುಂದಾಗಿದ್ದು ಸಂತರ ನೇತೃತ್ವದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗುವುದು. ನಾಡಿನ ಜನತೆ ಈ ಅಭಿಯಾನದಲ್ಲಿ ಸ್ವಯಂ ಪ್ರೇರಣೆಯಿಂದ ಭಾಗವಹಿಸಿ ಸಹಿ ನೀಡಬೇಕಲ್ಲದೇ ಗೋ ಭಕ್ತರಾಗಿ ಕಾರ್ಯಕರ್ತರಾಗಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳ ಸಿಬ್ಬಂದಿಯ, ಸಾರ್ವಜನಿಕ ಕಾರ್ಯಕ್ರಮದಲ್ಲಿ ನೆರೆದ ಭಕ್ತಾದಿಗಳ, ಮನೆ ಮನೆಗೆ ತೆರಳುವ ಮೂಲಕ ಜನರ ಸಹಿ ಸಂಗ್ರಹಿಸಬೇಕು. ನವೆಂಬರ್ 25 ರೊಳಗೆ ಸಹಿ ಪತ್ರಗಳನ್ನು ಬೆಂಗಳೂರಿನ ಕಾರ್ಯಾಲಯಕ್ಕೆ ತಲುಪಿಸಬೇಕು. ಅಭಿಯಾನಕ್ಕೆ ಸೇರಲು 9067777323 ಸಂಖ್ಯೆಗೆ ಮಿಸ್ ಕಾಲ್ ಮಾಡಿ. ಈ ಅಭಿಯಾನ ಯಾವುದೇ ಒಬ್ಬ ವ್ಯಕ್ತಿಯ ಒಂದು ಸಂಸ್ಥೆಯ ಹೆಸರಿನಲ್ಲಿ ನಡೆಯುತ್ತಿಲ್ಲ, ಮಾತ್ರವಲ್ಲ ಈ ಅಭಿಯಾನದ ಹೆಸರಿನಲ್ಲಿ ವಂತಿಗೆ ಸಂಗ್ರಹಿಸುಂತಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 7899923838, 8296751923.

ಚಳಿಗಾಲದಲ್ಲಿ ಫಿಟ್ ಆ್ಯಕ್ಟಿವ್ ಆಗಿರಬೇಕೇ? ತಜ್ಞರು ಸೂಚಿಸುವ ಸಿಂಪಲ್ ಯೋಗಾಸನಗಳನ್ನು ಮಾಡಿ



ಚಳಿಗಾಲ ಶುರುವಾಗಿರುವುದರಿಂದ ಜನರು ಸಾಮಾನ್ಯವಾಗಿ ಆಲಸ್ಯ ಅನುಭವಿಸುತ್ತಾರೆ. ಚಳಿಯಿಂದ ಬೆಳಿಗ್ಗೆ ಹಾಸಿಗೆಯಿಂದ ಎದ್ದು ವ್ಯಾಯಾಮ ಮಾಡುವ ಬಯಕೆ ಕಡಿಮೆಯಾಗುತ್ತದೆ. ಹಾಗಾಗಿ, ನಿಮ್ಮ ದಿನಚರಿಯಲ್ಲಿ ತಜ್ಞರು ಸೂಚಿಸುವ ಯೋಗಾಸನಗಳನ್ನು ಸೇರಿಸುವುದು ನೀವು ಫಿಟ್ ಆಗಿರುವುದರೊಂದಿಗೆ ಸಕ್ರಿಯವಾಗಿರಿಸಿಕೊಳ್ಳಲು ಒಳ್ಳೆಯ ಆಯ್ಕೆಯಾಗಲಿದೆ. ನಿಯಮಿತ ಯೋಗಾಭ್ಯಾಸವು ದೇಹದ ನಮ್ಯತೆ ಕಾಪಾಡಿಕೊಳ್ಳಲು ಹೆಚ್ಚು ನೆರವಾಗುತ್ತದೆ. ಇವು ಸ್ನಾಯುಗಳನ್ನು ಸಕ್ರಿಯವಾಗಿರಿಸುತ್ತದೆ ಹಾಗು ಮಾನಸಿಕ ಒತ್ತಡ ಕಡಿಮೆ ಮಾಡುತ್ತದೆ. ಯೋಗ ಮಾಡಲು ಜಿಮ್‌ಗೆ ಹೋಗಬೇಕಾಗಿಲ್ಲ, ದುಬಾರಿ ಉಪಕರಣಗಳನ್ನು ಖರೀದಿಸಬೇಕಾಗಿಲ್ಲ, ಮನೆಯಲ್ಲಿಯೇ ಕೆಲವು ಸುಲಭದ ಯೋಗಾಸನಗಳನ್ನು ಮಾಡುವ ಮೂಲಕ ಫಿಟ್ನೆಸ್ ಕಾಯ್ದುಕೊಳ್ಳಲು ಹೆಚ್ಚು ಅನುಕೂಲವಾಗುತ್ತದೆ. ಶೀತ ಋತುವಿನಲ್ಲಿ ಮಾಡಬೇಕಾದ ಪ್ರಯೋಜನಕಾರಿ ಯೋಗಾಸನಗಳು ಯಾವುವು? ಈ ಆಸನಗಳನ್ನು ಮಾಡುವ ಸರಿಯಾದ ವಿಧಾನಗಳ ಕುರಿತು ಅರಿತುಕೊಳ್ಳೋಣ. ಸೂರ್ಯ ನಮಸ್ಕಾರವು ಚಳಿಗಾಲದಲ್ಲಿ ದೇಹವನ್ನು ಕ್ರಿಯಾಶೀಲವಾಗಿಡಲು ಉತ್ತಮ ಅಭ್ಯಾಸ. ಇದರಲ್ಲಿ ಒಟ್ಟು 12 ಯೋಗ ಭಂಗಿಗಳಿವೆ.

ಹೀಗೆ ಮಾಡುವುದರಿಂದ ದೇಹದ ವಿವಿಧ ಭಾಗಗಳು ಹಿಗ್ಗುತ್ತವೆ ಹಾಗೂ ಸ್ನಾಯುಗಳು ಕ್ರಿಯಾಶೀಲವಾಗುತ್ತವೆ. ಸೂರ್ಯ ನಮಸ್ಕಾರ ಮಾಡಲು ಮೊದಲು ಯೋಗ ಮ್ಯಾಟ್ ಮೇಲೆ ನೇರವಾಗಿ ನಿಂತುಕೊಳ್ಳಿ. ಎರಡೂ ಕೈಗಳನ್ನು ಜೋಡಿಸಿ ಪ್ರಾರ್ಥನೆಯ ಭಂಗಿಯನ್ನು ಮಾಡಬೇಕು. ಇದೀಗ 12 ಭಂಗಿಗಳನ್ನು ನಿಧಾನವಾಗಿ ಉಸಿರಾಡುವ ಮೂಲಕ ಅಭ್ಯಾಸ ಮಾಡಬೇಕು. ಆರಂಭದಲ್ಲಿ 2ರಿಂದ 3 ಸುತ್ತುಗಳನ್ನು ಮಾಡಿ, ಕ್ರಮೇಣ ಅಭ್ಯಾಸ ಹೆಚ್ಚಿಸಿದರೆ ಉತ್ತಮ.

ಸಮಾಜವನ್ನು ಮುಖ್ಯವಾಹಿನಿಗೆ ತರಲು ಅಭಿವೃದ್ಧಿ ನಿಗಮ ಸ್ಥಾಪನೆ

ಮುಂದಿನ ಪೀಳಿಗೆಗಳೂ ಸಹ ಅವರ ವಿಚಾರಗಳನ್ನು ಅಳವಡಿಸಿಕೊಳ್ಳಲು ಪೋಷಕರು ಪ್ರೋತ್ಸಾಹಿಸಬೇಕು ಎಂದು ಹೇಳಿದರು

• **ಉದಯವಾಹಿನಿ, ಕಲಬುರಗಿ,:**

ಕೋಲಿ, ಕಬ್ಬಲಿಗ, ಬೆಸ್ತ ಸೇರಿದಂತೆ 38 ಪರ್ಯಾಯ ಹೆಸರುಗಳನ್ನು ಹೊಂದಿರುವ ಸಮುದಾಯವನ್ನು ಒಗ್ಗೂಡಿಸುವಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಕೊಡುಗೆ ಮಹತ್ವದ್ದಾಗಿದೆ.

ಕೋಲಿ ಸಮಾಜವನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಅಂಬಿಗರ ಚೌಡಯ್ಯನವರ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದೆ

1 : ಕೋಲಿ,ಕಬ್ಬಲಿಗ ನೌಕರರ ಕ್ಷೇಮಾಭಿವೃದ್ಧಿ
2 : ನಿಗಮ ಸ್ಥಾಪನೆಗಾಗಿ ಹೋರಾಟಗಳು ನಡೆದಿವೆ
3 : ವರದಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು

ಎಂದು ಗೃಹ, ಐಟಿ-ಬಿಟಿ, ಇ-ಆಡಳಿತ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು. ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಜಿಲ್ಲಾ ಕೋಲಿ,ಕಬ್ಬಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಸಮಾವೇಶ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ಅಂಬಿಗರ ಚೌಡಯ್ಯನವರ ಅಭಿವೃದ್ಧಿ ನಿಗಮ ಸ್ಥಾಪನೆಗಾಗಿ ಹಲವು ಹೋರಾಟಗಳು ನಡೆದಿವೆ. ಸಮುದಾಯದ ಮುಖಂಡರು ನಿಗಮ ಸ್ಥಾಪನೆಗೆ ಒತ್ತಾಯಿಸಿದಾಗ ಈ ಕುರಿತು ಸರ್ಕಾರದ ಗಮನ ಸೆಳೆಯಲಾಗಿತ್ತು ಎಂದರು.


ಉದಯವಾಹಿನಿ ಚಿತ್ರ

ಕೋಲಿ ಇನ್ನಿತರ ಪಂಗಡದ ಸಮುದಾಯವನ್ನು ಪರಿಶಿಷ್ಟ ಪಂಗಡದ ಮೀಸಲಾತಿ ವಿಚಾರವಾಗಿ ಹೋರಾಟ ನಡೆಯುತ್ತಿದೆ. ಈ ಸಂಬಂಧ ಕುಲಶಾಸ್ತ್ರೀಯ ಅಧ್ಯಯನ ನಡೆಸಿ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿತ್ತು.

ಆದರೆ, ಕೇಂದ್ರ ಸರ್ಕಾರ ವರದಿಯನ್ನು ಹಿಂದಿರುಗಿಸಿದೆ. ಈ ಕುರಿತು ಅಧ್ಯಯನ ನಡೆಸುತ್ತಿರುವವರನ್ನು ಕರೆಸಿ ಚರ್ಚಿಸಿದ ಬಳಿಕ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರಗಳು ಈ ಸಮಾಜದ ಅಭಿವೃದ್ಧಿಗೆ ಕೆಲಸ ಮಾಡಿವೆ. ತಾವು ಬಸವಣ್ಣನವರ ಹಾಗೂ ನಿಜಶರಣ ಅಂಬಿಗರ ಚೌಡಯ್ಯನವರ ಅನುಯಾಯಿಯಾಗಿದ್ದು, ಅವರ ವಿಚಾರಧಾರೆಗಳನ್ನು

ಅಂಬೇಡ್ಕರ್ ಸೀಮೆಗಳಿಲ್ಲದ ಬೆಳೆಯುತ್ತಲೇ ಹೋದವರು. ಅವರು ನೀಡಿರುವ ಮೀಸಲಾತಿ ಹಕ್ಕು ಎಲ್ಲಾ ವರ್ಗಕ್ಕೆ ಸೇರಿದೆ. ಅದು ಕೇವಲ ಒಂದೇ ವರ್ಗಕ್ಕೆ ಸೀಮಿತವಾಗಿಲ್ಲ. ಆರಂಭದಲ್ಲಿ ಇದನ್ನು ಕೂಡ ವಿರೋಧಿಸಿದವರು ಇವತ್ತು ಆ ಮೀಸಲಾತಿಯಿಂದಲೇ ಉನ್ನತ ಅಧಿಕಾರ ಉನ್ನತ ಶಿಕ್ಷಣ ಎಲ್ಲವನ್ನು ಪಡೆಯುತ್ತಿದ್ದಾರೆ ಎಂದರು.
-ಸದಸ್ಯ ಎನ್ ರವಿಕುಮಾರ್

ಜೀವನದಲ್ಲಿ ಅಳವಡಿಸಿಕೊಳ್ಳಲು ಬದ್ಧರಾಗಿದ್ದೇವೆ. ಮುಂದಿನ ಪೀಳಿಗೆಗಳೂ ಸಹ ಅವರ ವಿಚಾರಗಳನ್ನು ಅಳವಡಿಸಿಕೊಳ್ಳಲು ಪೋಷಕರು ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಅಂಬಿಗರ ಚೌಡಯ್ಯನವರ 273 ವಚನಗಳು ಮಾತ್ರ ಈವರೆಗೆ ಲಭ್ಯವಾಗಿವೆ. ಯುವಜನರು ಬುದ್ಧ, ಬಸವ, ಅಂಬೇಡ್ಕರ್ ಹಾಗೂ ನಿಜಶರಣ ಅಂಬಿಗರ ಚೌಡಯ್ಯನವರ ತತ್ವಗಳನ್ನು ಪಾಲಿಸಬೇಕು.

ಕೇವಲ ಮೂರ್ತಿಗಳನ್ನು ಸ್ಥಾಪಿಸುವುದರಿಂದ ಮಹನೀಯರ ಆಶಯಗಳು ಈಡೇರುವುದಿಲ್ಲ, ಅವರ ಗುಣ, ಆದರ್ಶ ಹಾಗೂ ವಿಚಾರಧಾರೆಗಳು ಸಮಾಜದಲ್ಲಿ ನೆಲೆಗೊಳ್ಳಬೇಕು.ಜಯಂತಿ ಮತ್ತು ಚುನಾವಣೆಗಳ ಸಂದರ್ಭದಲ್ಲಿ ಮಾತ್ರ ಅವರನ್ನು ಸ್ಮರಿಸದೆ, ಪ್ರತಿನಿತ್ಯ ಅವರ ವಚನಗಳ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು

ಸಾರ್ವಜನಿಕ ಜೀವನದಲ್ಲಿ ಮಹನೀಯರ ತತ್ವಗಳನ್ನು ಅಳವಡಿಸಿಕೊಂಡಾಗ ಮಾತ್ರ ಜನರ ವಿಶ್ವಾಸ ಗಳಿಸಲು ಸಾಧ್ಯ. ಸಮಾಜದ ಪ್ರಗತಿಗಾಗಿ ಹಿರಿಯರು ತೋರಿದ ಮಾರ್ಗದಲ್ಲಿ ನಡೆದು, ಅವರ ಆದರ್ಶಗಳನ್ನು ನಿತ್ಯ ಜೀವನದಲ್ಲಿ ಪಾಲಿಸಬೇಕು ಎಂದು ಕರೆ ನೀಡಿದರು.

ಎಂದು ಸಲಹೆ ನೀಡಿದರು.

ಈ ದಿನಗಳಲ್ಲಿ ಯಾವುದೇ ಸಮುದಾಯ ಬೆಳವಣಿಗೆ ಕಾಣಬೇಕಾದರೆ ಶೈಕ್ಷಣಿಕ, ಸಾಮಾಜಿಕ,ಸಾಂಸ್ಕೃತಿಕ ಮತ್ತು ಔದ್ಯೋಗಿಕವಾಗಿ ಬಲಗೊಳ್ಳಬೇಕು ಎಂದ ಅವರು ಕೂಲಿ ಸಮಾಜದಲ್ಲಿ ಇತ್ತೀಚಿಗೆ ಮಕ್ಕಳು ಅತ್ಯುತ್ತಮ ಸಾಧನೆ ಮಾಡುವ ಮೂಲಕ ಶೈಕ್ಷಣಿಕವಾಗಿ ಉನ್ನತ ಸ್ಥಾನಕ್ಕೆ ಏರುತ್ತಿದ್ದಾರೆ ಎಂದರು.ಬಡತನ ಯಾವತ್ತೂ ಸಮಸ್ಯೆ ಆಗಬಾರದು. ಬಡತನದಿಂದ ಇವತ್ತು ಸಾಕಷ್ಟು ಶೈಕ್ಷಣಿಕ ಹಿನ್ನಡೆ ಅನುಭವಿಸಲಾಗುತ್ತಿದೆ ಅದನ್ನು ನಾವು ಮೀರಿ ಬೆಳೆಯಬೇಕಿದೆ ಎಂದರು. ಹಾವೇರಿ ಜಿಲ್ಲೆಯ ನರಸೀಪುರದ ಶಾಂತ ಭೀಷ್ಮ ಚೌಡಯ್ಯ ಮಹಾಸ್ವಾಮಿಗಳು ಮಾತನಾಡಿ, ಕೋಲಿ ಸಮುದಾಯದ ಅಭಿವೃದ್ಧಿಗೆ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಿಯಾಂಕ್ ಖರ್ಗೆ ಅವರ ಕೊಡುಗೆ ಅಪಾರವಾಗಿದೆ. ತುಳಿತಕ್ಕೊಳಗಾದ ಸಮುದಾಯವನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಖರ್ಗೆ ಕುಟುಂಬದ ಶ್ರಮ ಮಹತ್ವದ್ದಾಗಿದೆ ಎಂದರು.

ಬರ ನಿರ್ವಹಣೆಗೆ ಸಮರ್ಪಕ ಕ್ರಮ ಕೈಗೊಳ್ಳಿ

• **ಉದಯವಾಹಿನಿ, ಗದಗ,:**

ಜಿಲ್ಲೆಯಲ್ಲಿ ಮುಂಗಾರು ಮಳೆ ಬಹುತೇಕ ಕೈಕೊಟ್ಟಿರುವ ಹಿನ್ನೆಲೆಯಲ್ಲಿ ಬರ ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಕುಡಿಯುವ ನೀರು, ಜಾನುವಾರುಗಳಿಗೆ ಮೇವು, ರೈತರಿಗೆ ಬೆಳೆ ಪರಿಹಾರ ಹಾಗೂ ಉದ್ಯೋಗ ಸೃಷ್ಟಿ ಸೇರಿದಂತೆ ಬರ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಎಂ.ವಿ. ವೆಂಕಟೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು. ಅಕ್ಟೋಬರ್ 31ರಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಮಟ್ಟದ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಗದಗ ಜಿಲ್ಲಾ ಪಂಚಾಯಿತಿ ಸಭಾಂಗಣದಿಂದ ಸಭೆಯಲ್ಲಿ ಪಾಲ್ಗೊಂಡಿದ್ದರು. ಜಿಲ್ಲೆಯಲ್ಲಿ ಬೆಳೆಯಬಹುದಾದ ಪರ್ಯಾಯ ಬೆಳೆಗಳ ಕುರಿತು ರೈತರಿಗೆ ಕೃಷಿ ಇಲಾಖೆಯ ಅಧಿಕಾರಿಗಳು ಸೂಕ್ತ ಮಾಹಿತಿ ನೀಡಬೇಕು. ಸ್ಥಳೀಯ ಹವಾಮಾನ ಹಾಗೂ


ಉದಯವಾಹಿನಿ ಚಿತ್ರ

ಮಣ್ಣಿನ ಗುಣಧರ್ಮಕ್ಕೆ ಅನುಗುಣವಾಗಿ ಬೆಳೆಗಳನ್ನು ಬೆಳೆಯಲು ರೈತರನ್ನು ಪ್ರೋತ್ಸಾಹಿಸಬೇಕು. ಬರ ಪರಿಹಾರಕ್ಕಾಗಿ ಜಿಲ್ಲಾಡಳಿತದಿಂದ ಈಗಾಗಲೇ 263 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂಬ ಮಾಹಿತಿ ಪಡೆದ ಅವರು, ಪರಿಹಾರ ವಿತರಣೆಯಲ್ಲಿ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಬೆಳೆ ವಿಮೆ ಪರಿಹಾರವೂ ಅರ್ಹ ರೈತರಿಗೆ ಯಾವುದೇ ವಿಳಂಬವಿಲ್ಲದೆ ಸಮರ್ಪಕವಾಗಿ ತಲುಪುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ

ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸಮಸ್ಯೆ ಎದುರಾದ ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ತ್ವರಿತವಾಗಿ ಪರಿಹರಿಸಬೇಕು ಎಂದು ನಿರ್ದೇಶನ ನೀಡಿದರು.

ಅಭಾವ ಉಂಟಾಗದಂತೆ ಮುಂಚಿತವಾಗಿಯೇ ಖಾಸಗಿ ಕೊಳವೆಬಾವಿಗಳನ್ನು ಗುರುತಿಸಿ, ಅಗತ್ಯವಿದ್ದಲ್ಲಿ ಅವುಗಳ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು. ನಗರ ಪ್ರದೇಶಗಳಲ್ಲಿಯೂ ಕುಡಿಯುವ ನೀರಿನ ಪೂರೈಕೆಯನ್ನು ಸಮರ್ಪಕವಾಗಿ ನಿರ್ವಹಿಸಬೇಕು.

ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವ ತಡೆಗೆ ಅರಿವು ಮೂಡಿಸಿ

• **ಉದಯವಾಹಿನಿ, ಮಂಗಳೂರು:**

ಹವಾಮಾನ ವೈಪರೀತ್ಯದ ಕಾರಣದಿಂದಾಗಿ ಮುಂಬರುವ ಬೇಸಿಗೆಯ ಅವಧಿಯಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಲ್ಲಿ ನೀರಿನ ಸದ್ಬಳಕೆ ಹಾಗೂ ಸಂರಕ್ಷಣೆ ಕುರಿತು ವ್ಯಾಪಕ ಅರಿವು ಮತ್ತು ಜಾಗೃತಿ ಮೂಡಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಯು.ಟಿ.ಖಾದರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.ದ.ಕ. ಜಿಲ್ಲಾಧಿಕಾರಿ ಕಚೇರಿಯಲ್ಲಿ ಕುಡಿಯುವ ನೀರು ಹಾಗೂ ವಿವಿಧ ಇಲಾಖೆಗಳ ವಿಷಯಗಳ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಂದಿನ ಬೇಸಿಗೆಯಲ್ಲಿ ನೀರಿಗಾಗಿ ಯಾವುದೇ ರೀತಿಯಲ್ಲಿ ಸಾರ್ವಜನಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಕುಡಿಯುವ ನೀರನ್ನು ಅನಗತ್ಯವಾಗಿ ಪೋಲು ಮಾಡದೆ, ಮಿತವಾಗಿ ಜಾಗರೂಕತೆಯಿಂದ ಬಳಸಲು ಸಾರ್ವಜನಿಕರಲ್ಲಿ ವಿನಂತಿಸಬೇಕು. ಸ್ಥಳೀಯಾಡಳಿತ ಮತ್ತು ಸಂಬಂಧಪಟ್ಟ ಇಲಾಖೆಗಳ ಮುಖಾಂತರ ಜಾಗೃತಿ ಅಭಿಯಾನಗಳನ್ನು ಹಮ್ಮಿಕೊಳ್ಳಲು ಅವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು. ಕುಡಿಯುವ ನೀರಿನ ಪೂರೈಕೆ ಮತ್ತು ಸಂಬಂಧಿತ ಅಂದಾಜು ಕಾಮಗಾರಿಗಳ ವೆಚ್ಚಕ್ಕಾಗಿ ಜಿಲ್ಲಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರರ ಖಾತೆಯಲ್ಲಿ ಈಗಾಗಲೇ ಸಾಕಷ್ಟು ಅನುದಾನ ಲಭ್ಯವಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.ಒಂದು ವೇಳೆ ಈ ಅನುದಾನ ಸಾಲದೇ, ಹೆಚ್ಚುವರಿ ಹಣಕಾಸಿನ ಅಗತ್ಯವಿದ್ದಲ್ಲಿ, ತಕ್ಷಣವೇ ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಸಲ್ಲಿಸಿ ಅಗತ್ಯ ಅನುದಾನ ಪಡೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿನಿತ್ಯ ಯೋಗಭ್ಯಾಸ ಮಾಡಿ ಆರೋಗ್ಯ ಕಾಪಾಡಿಕೊಳ್ಳಿ: ಬಸವಲಿಂಗೇಶ್ವರ ಸ್ವಾಮಿಗಳು

• **ಉದಯವಾಹಿನಿ,ಯಲಬುರ್ಗಾ:**

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲ್ಲೂಕು ಶಾಖೆಯಿಂದ ಪತಂಜಲಿ ಯೋಗ ಸಮಿತಿಯ ಸಹಯೋಗದಲ್ಲಿ ವಿಶೇಷ ಯೋಗ ಶಿಬಿರದ ಉದ್ಘಾಟನಾ ಸಮಾರಂಭ ಪಟ್ಟಣದ ಸಾಯಿ ಪ್ಯಾಲೇಸನಲ್ಲಿ ಜರುಗಿತು

ದಿವ್ಯ ಸಾನಿಧ್ಯ ವಹಿಸಿದ ಶ್ರೀಧರ ಮುರುಡಿಮಠದ ಶ್ರೀ ಬಸವಲಿಂಗೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿಗಳು ಮಾತನಾಡಿ ನೌಕರರು ಒತ್ತಡಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಒತ್ತಡವಿಲ್ಲದೆ ಆರೋಗ್ಯ ಕಾಪಾಡಿಕೊಳ್ಳಲು ಪ್ರತಿನಿತ್ಯ ಯೋಗಭ್ಯಾಸ ಮಾಡಬೇಕೆಂದು ತಿಳಿಸಿ ವಿಶೇಷ ಯೋಗ ಶಿಬಿರ ಆಯೋಜಿಸಿರುವುದು ಒಳ್ಳೆಯದು ಯೋಗಭ್ಯಾಸ ಶಿಬಿರಕ್ಕೆ ಸೀಮಿತವಾಗದೆ ನಿರಂತರವಾಗಿ ಇರಲಿ ಎಂದು ಹೇಳಿದರು.

ಪತಂಜಲಿ ಯೋಗ ಸಮಿತಿಯ ತಾಲ್ಲೂಕು ಪ್ರಭಾರಿಗಳಾದ ಸಂಗಣ್ಣ ಟೆಂಗಿನಕಾಯಿ ರವರು ಮಾತನಾಡಿ ನೌಕರರ ಸಂಘದಿಂದ ವಿಶೇಷ ಯೋಗ ಶಿಬಿರ ಆಯೋಜಿಸಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿ ಬಿಪಿ, ಸುಗರ್ ಸಾಮಾನ್ಯವಾಗಿವೆ ಹೀಗಾಗಿ ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಳ್ಳಲು ಯೋಗ ಮಾಡಬೇಕೆಂದು ತಿಳಿಸಿದರು.. ಸಭೆಯ ಅಧ್ಯಕ್ಷತೆ ವಹಿಸಿದ್ದ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷರಾದ ಸಿದ್ದಲಿಂಗಪ್ಪ ಶ್ಯಾಗೋಟಿ ರವರು ಪ್ರಾಸ್ತಾವಿಕವಾಗಿ ಮಾತನಾಡಿ ನೌಕರರ ಸಂಘದಿಂದ ಹಲವಾರು ರಚನಾತ್ಮಕ ಮತ್ತು ಸೃಜನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯನಿರ್ವಹಿಸುತ್ತಿರುವ



ಸರ್ಕಾರಿ ಅಧಿಕಾರಿ ಹಾಗೂ ನೌಕರರು ಒತ್ತಡ ನಿವಾರಿಸಿಕೊಂಡು ಉತ್ತಮ ಆರೋಗ್ಯ ಕಾಪಾಡಿಕೊಳ್ಳುವ ಸಲುವಾಗಿ ವಿಶೇಷ ಯೋಗ ಶಿಬಿರ ಆಯೋಜಿಸಲಾಗಿದೆ. ಬೆಳಿಗ್ಗೆ 5.30 ಕ್ಕೆ ವಿವಿಧ ಭಾಗಗಳಿಂದ ಮತ್ತು ಸ್ಥಳೀಯ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಇಂದು ಆಗಮಿಸಿರುವುದು ಬಹಳ ಖುಷಿಯ ವಿಚಾರ ಹೀಗೆಯೇ ಪ್ರತಿನಿತ್ಯ ಆಗಮಿಸಬೇಕೆಂದು ತಿಳಿಸಿ ತಮ್ಮ ಸಹಾಯ ಸಹಕಾರದೊಂದಿಗೆ ಸಂಘಟನೆಯಿಂದ ಮತ್ತಷ್ಟು ಚಟುವಟಿಕೆಗಳನ್ನು ಹಮ್ಮಿಕೊಳ್ಳೋಣ ಯೋಗ ಶಿಬಿರದ ಯಶಸ್ಸಿಗೆ ಶ್ರಮಿಸುತ್ತಿರುವ, ಸಹಕಾರ ನೀಡುತ್ತಿರುವ ಸರ್ವರಿಗೂ ಕೃತಜ್ಞತೆ ಸಲ್ಲಿಸಿದರು..

ಆಯುಷ್ ಇಲಾಖೆಯ ಲೋಕೇಶ್ ಲಮಾಣಿ ರವರು ಯೋಗಭ್ಯಾಸ ಮಾಡಿಸಿದರು. ಕಾರ್ಯಕ್ರಮದಲ್ಲಿ ನೌಕರರ ಸಂಘದ ಕಾರ್ಯದರ್ಶಿಗಳಾದ ಸಂಗಯ್ಯ ಹಿರೇಮಠ ರವರು ಸ್ವಾಗತಿಸಿದರು. ಖಜಾಂಚಿಗಳಾದ ಹಜರತ್ ಅಲಿ, ರಾಜ್ಯ ಪರಿಷತ್ ಸದಸ್ಯರಾದ ಶಿವಪುತ್ರಪ್ಪ ತಿಪ್ಪನಾಳ, ಹಿರಿಯ ಉಪಾಧ್ಯಕ್ಷರಾದ ಕಳಕಮಲ್ಲಪ್ಪ ಅಂತೂರ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಎಸ್ ವಿ ಧರಣಾ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷರಾದ ಜಗದೀಶ ಬಳಿಗಾರ,ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷರಾದ ಬಸವರಾಜ ಮುಳಗುಂದ, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷರಾದ ಶರಣಯ್ಯ ಸರಗಣಾಚಾರ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಾಲದಂಡಪ್ಪ ತಳವಾರ, ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ರಾಘವೇಂದ್ರ ಗೋನಾಳ, ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಅಮರೇಶ ಹುಬ್ಬಳ್ಳಿ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕ್ರೀಡಾ ಕಾರ್ಯದರ್ಶಿಗಳಾದ ಪರಮೇಶ ಚಿಂತಾಮಣಿ ನಿರೂಪಿಸಿದರು. ಪ್ರಭಯ್ಯ ಬಳಗೇರಿಮಠ ರವರು ಸ್ವರಚಿತ ಯೋಗ ಗೀತೆ ಪ್ರಸ್ತುತಪಡಿಸಿದರು. ಮಂಜುನಾಥ ಬೂದಿಹಾಳ ವಂದಿಸಿದರು. ಸಂಘದ ಪದಾಧಿಕಾರಿಗಳು, ನಿರ್ದೇಶಕರು, ನಾಮನಿರ್ದೇಶಿತ ಸದಸ್ಯರು, ವಿವಿಧ ವೃಂದ ಸಂಘಗಳ ಪದಾಧಿಕಾರಿಗಳು, ಪತಂಜಲಿ ಯೋಗ ಸಮಿತಿ ಸದಸ್ಯರು, ಬಸವಲಿಂಗೇಶ್ವರ ಯೋಗ ಸಮಿತಿಯ ಸದಸ್ಯರು, ಸರ್ಕಾರಿ ನೌಕರ ಬಂಧುಗಳು ಭಾಗವಹಿಸಿದ್ದರು...

ಜಲಹಕ್ಕುಗಳೊಂದಿಗೆ ರಾಜಿ ಪ್ರಶ್ನೆಯೇ ಇಲ್ಲ

• **ಉದಯವಾಹಿನಿ, ವಿಜಯಪುರ, :**

ಕೃಷ್ಣಾ ನದಿಯಿಂದ ಸುಮಾರು 40 ಟಿಎಂಸಿ ಅಡಿ ಪ್ರವಾಹದ ನೀರನ್ನು ಭೀಮಾ ನದಿಯ ಉಜನಿ ಜಲಾಶಯಕ್ಕೆ ವರ್ಗಾಯಿಸುವ ಮಹಾರಾಷ್ಟ್ರ ಸರ್ಕಾರದ ಪ್ರಸ್ತಾವಿತ ಯೋಜನೆ ಕರ್ನಾಟಕದ ಹಿತಾಸಕ್ತಿಗೆ ಮಾರಕವಾಗಿದ್ದು, ರಾಜ್ಯದ ಜಲಹಕ್ಕುಗಳೊಂದಿಗೆ ಯಾವುದೇ ಕಾರಣಕ್ಕೂ ರಾಜಿಯಾಗುವ ಪ್ರಶ್ನೆಯೇ ಇಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಡಾ.ಎಂ.ಬಿ. ಪಾಟೀಲ ಎಚ್ಚರಿಸಿದರು. ವಿಜಯಪುರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ವಿಶ್ವಬ್ಯಾಂಕ್ ನೆರವಿನೊಂದಿಗೆ ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು ಹೇಳಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಈ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಜಲಸಂಪನ್ಮೂಲ ಸಚಿವರೊಂದಿಗೆ ಚರ್ಚಿಸಿ, ಕೃಷ್ಣಾ ಕಣಿವೆಯ ಎಲ್ಲಾ ಜನಪ್ರತಿನಿಧಿಗಳು ಹಾಗೂ ಸಂಸದರ ಸಭೆ ನಡೆಸುವಂತೆ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು. ಅಗತ್ಯವಿದ್ದರೆ ಸರ್ವಪಕ್ಷ ಸಭೆಯನ್ನೂ ಕರೆಯಬೇಕು ಎಂದು ಆಗ್ರಹಿಸಲಾಗುವುದು ಎಂದರು.


ಉದಯವಾಹಿನಿ ಚಿತ್ರ

ಈ ಯೋಜನೆಯ ಕುರಿತು ಮಹಾರಾಷ್ಟ್ರ ಸರ್ಕಾರದ ಕ್ರಮಗಳು ಈವರೆಗೆ ಸಮಗ್ರವಾಗಿ ಚರ್ಚೆಯಾಗಿರಲಿಲ್ಲ. ಸಹಕಾರ ಸಚಿವ ಲಕ್ಷ್ಮಣ ಸವದಿ ಅವರು ದೇವೇಂದ್ರ ಫಡ್ನವೀಸ್ ಅವರು ಮಾಧ್ಯಮ ಸಂಸ್ಥೆಯೊಂದರ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ವಿಡಿಯೋ ತುಣುಕನ್ನು ಕಳುಹಿಸಿದ ಬಳಿಕವೇ ಈ ವಿಷಯದ ಗಂಭೀರತೆ ತಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದರು.

ಕೃಷ್ಣಾ ಜಲವಿವಾದ ನ್ಯಾಯಮಂಡಳಿಯ ಅಂತಿಮ ಅಧಿಸೂಚನೆಯನ್ನೇ ಕೇಂದ್ರ ಸರ್ಕಾರ ಇನ್ನೂ ಹೊರಡಿಸಿಲ್ಲ. ಇಂತಹ ಸಂದರ್ಭದಲ್ಲಿ ಮಹಾರಾಷ್ಟ್ರದ ನೂತನ ಯೋಜನೆಗೆ ವಿಶ್ವಬ್ಯಾಂಕ್ ನೆರವು ದೊರೆತಿದೆ ಎಂದು ಮುಖ್ಯಮಂತ್ರಿ ಹೇಳಿರುವುದು ಹಲವು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಆರಾ-36 ದ್ರಾಕ್ಷಿ ತಳಿ ಬೆಳೆಸುತ್ತಿರುವ ಜಿಲ್ಲೆಯ ರೈತರು

• **ಉದಯವಾಹಿನಿ, ವಿಜಯಪುರ, :**

ವಿಜಯಪುರ ಜಿಲ್ಲೆಯಲ್ಲಿ ನೀರಾವರಿ ಕ್ಷೇತ್ರದಲ್ಲಿ ಆಗಿರುವ ಪ್ರಗತಿ, ಆಧುನಿಕ ಕೃಷಿ ತಂತ್ರಜ್ಞಾನದ ಅಳವಡಿಕೆ ಹಾಗೂ ತೋಟಗಾರಿಕೆ ಕ್ಷೇತ್ರದಲ್ಲಿ ರೈತರು ಸಾಧಿಸುತ್ತಿರುವ ಯಶಸ್ಸನ್ನು ಬಿಂಬಿಸುವ ವಿಶೇಷ ಸ್ತಬ್ಧಚಿತ್ರವು 71ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ಸಾರ್ವಜನಿಕರ ಗಮನ ಸೆಳೆಯಿತು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತೋಟಗಾರಿಕೆ ಇಲಾಖೆ ವತಿಯಿಂದ ಸಿದ್ಧಪಡಿಸಲಾದ ಈ ಸ್ತಬ್ಧಚಿತ್ರದಲ್ಲಿ ಜಿಲ್ಲೆಯ ನೀರಾವರಿ ಯೋಜನೆಗಳು, ಕೃಷ್ಣಾ ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗಳು, ಏತ ನೀರಾವರಿ ವ್ಯವಸ್ಥೆ ಹಾಗೂ ತೋಟಗಾರಿಕೆ ಬೆಳೆಗಳ ವೈವಿಧ್ಯತೆಯನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಲಾಯಿತು. ಪರಮಪೂಜ್ಯ ಜ್ಞಾನಯೋಗಿ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರು ವಿಜಯಪುರದ ಭೂಮಿಗೆ ಸಮರ್ಪಕವಾಗಿ ನೀರು ಒದಗಿಸಿದರೆ ಈ ಪ್ರದೇಶವು ಕ್ಯಾಲಿಫೋರ್ನಿಯಾವನ್ನೂ ಮೀರಿಸುವ ಸಾಮರ್ಥ್ಯ ಹೊಂದಿದೆ ಎಂಬ ಆಶಯ ವ್ಯಕ್ತಪಡಿಸಿದ್ದರು. ಈ ಆಶಯಕ್ಕೆ ಪೂರಕವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ


ಉದಯವಾಹಿನಿ ಚಿತ್ರ

ಸಚಿವರಾದ ಡಾ. ಎಂ.ಬಿ. ಪಾಟೀಲ ಅವರ ಪ್ರಯತ್ನದಿಂದ ಆಧುನಿಕ ತಂತ್ರಜ್ಞಾನ ಬಳಸಿ ಕೃಷ್ಣಾ ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಹಾಗೂ ಏತ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಜಿಲ್ಲೆಯ ಶಾಸಕರು ಹಾಗೂ ಜನಪ್ರತಿನಿಧಿಗಳ ಸಹಕಾರದೊಂದಿಗೆ ಕೈಗೊಂಡ ನೀರಾವರಿ ಯೋಜನೆಗಳು ಕೃಷಿ ಚಟುವಟಿಕೆಗಳಿಗೆ ಹೊಸ ಉತ್ತೇಜನ ನೀಡಿವೆ.ವಿಶೇಷವಾಗಿ ತಿಕೋಟಾ ತಾಲ್ಲೂಕಿನ ಕನಮಡಿ ಸೇರಿದಂತೆ ಎತ್ತರದ ಪ್ರದೇಶಗಳಿಗೂ ಏತ ನೀರಾವರಿ ಮೂಲಕ ನೀರು ತಲುಪಿಸಿರುವುದು ಕೃಷಿ ಕ್ಷೇತ್ರದಲ್ಲಿ ಹೊಸ ಸಾಧ್ಯತೆಗಳನ್ನು ತೆರೆದಿದೆ.

ಸಕ್ಕರೆ ಕಾರ್ಖಾನೆ ಆರಂಭಕ್ಕೆ ಮಾಲೀಕರು ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿಲ್ಲ!

ಕಬ್ಬು ಬೆಳೆಗಾರರ 'ಜೈಲ್ ಭರೋ' ಹೋರಾಟದ ಕುರಿತು ಗೊತ್ತಿಲ್ಲ. ಗುರ್ಲಾಪುರದಲ್ಲೇ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ.

• **ಉದಯವಾಹಿನಿ, ಬೆಳಗಾವಿ:**

ಕಬ್ಬು ಬೆಳೆಗಾರರು ಒಪ್ಪಿಗೆ ಸೂಚಿಸಿದರೆ ಮಾತ್ರ ಸಕ್ಕರೆ ಕಾರ್ಖಾನೆಗಳು ಕಾರ್ಯಾರಂಭ ಮಾಡಲಿವೆ. ಸದ್ಯದ ಪರಿಸ್ಥಿತಿಯಲ್ಲಿ ಕಾರ್ಖಾನೆ ಮಾಲೀಕರು ಯಾವುದೇ ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿಲ್ಲ. ಕಬ್ಬು ಬೆಳೆಗಾರರ ಸಮಸ್ಯೆ ಪರಿಹಾರಕ್ಕೆ ರೈತ ಸಂಘಟನೆ ಮತ್ತು ಕಾರ್ಖಾನೆ

1 : 'ಜೈಲ್ ಭರೋ' ಹೋರಾಟದ ಕುರಿತು ಗೊತ್ತಿಲ್ಲ
2 : ಕೇಂದ್ರ ಸರ್ಕಾರ ಮೊದಲು ಎಂಎಸ್‌ಪಿ ಹೆಚ್ಚಿಸಲಿ
3 : ಸರ್ಕಾರದಿಂದ ಈಗಾಗಲೇ ಘೋಷಣೆ ಮಾಡಿದ್ದೇವೆ

ಮಾಲೀಕರ ನಡುವೆ ಒಮ್ಮತ ಮೂಡುವ ಅಗತ್ಯವಿದೆ. ಇದರ ಜೊತೆಗೆ ಕೇಂದ್ರ ಸರ್ಕಾರ ಎಂಎಸ್‌ಪಿ ಹೆಚ್ಚಿಸಿದರೆ ಮಾತ್ರ ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಬೆಳಗಾವಿ ಕಾಂಗ್ರೆಸ್ ಭವನದಲ್ಲಿ ಸೋಮವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾರ್ಖಾನೆ ಆರಂಭಿಸಲು ಮಾಲೀಕರು ರಿಸ್ಕ್ ತೆಗೆದುಕೊಳ್ಳಲು ಸಿದ್ಧರಿಲ್ಲ. ಒಮ್ಮೆ ಆರಂಭಿಸಿದರೆ ಮತ್ತೆ ಬಂದ್ ಮಾಡಿಸುತ್ತಾರೆ. ಹಿಂದಿನ ವರ್ಷ ಇದೇ ರೀತಿ ಆಗಿದೆ. ಹಾಗಾಗಿ, ಕಾರ್ಖಾನೆ ಶುರು ಮಾಡುವಂತೆ ಕಬ್ಬು ಬೆಳೆಗಾರರೇ ಮುಂದೆ ಬಂದು ಹೇಳಬೇಕು.

ಆಗ ಮಾಲೀಕರು ಕಬ್ಬು ನುರಿಸಲು ಸಿದ್ಧರಿದ್ದಾರೆ ಎಂದರು.



ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರದಿಂದ ಹೆಚ್ಚಿಗೆ ದುಡ್ಡು ಘೋಷಣೆ ಮಾಡಿದ ಮೇಲೆ ಕೇಂದ್ರ ಸರ್ಕಾರ ಎಂಎಸ್‌ಪಿ ಹೆಚ್ಚಿಸದಿದ್ದರೆ ನಮ್ಮ ಗತಿ ಏನು ಎಂಬುದು ಕಾರ್ಖಾನೆಗಳ ಆತಂಕ. ಹಾಗಾಗಿ, ಪ್ರಲ್ಹಾದ್ ಜೋಶಿ ಅವರು ತಕ್ಷಣ ಇದಕ್ಕೆ ಪರಿಹಾರ ಕಂಡುಕೊಳ್ಳಬೇಕು ಎಂದು ಒತ್ತಾಯಿಸಿದರು. -ಸಚಿವ ಜಾರಕಿಹೊಳಿ

ಕಬ್ಬು ಬೆಳೆಗಾರರ 'ಜೈಲ್ ಭರೋ' ಹೋರಾಟದ ಕುರಿತು ಗೊತ್ತಿಲ್ಲ. ಗುರ್ಲಾಪುರದಲ್ಲೇ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ.

ರೈತರ ಮುಂದಿನ ಹೋರಾಟದ ಕುರಿತು ಸರ್ಕಾರ ಮತ್ತು ಜಿಲ್ಲಾಡಳಿತಕ್ಕೆ ಗೊತ್ತಿಲ್ಲ. ಜಿಲ್ಲಾಧಿಕಾರಿಗಳ ಬಳಿ ಬಂದು ರೈತ ಮುಖಂಡರು ಮಾತಾಡಬೇಕು. ಅದಕ್ಕೆ ಯಾವುದೇ ತೊಂದರೆ ಇಲ್ಲ.

ಜಿಲ್ಲಾಧಿಕಾರಿಗಳನ್ನು ಅವರು ಸಂಪರ್ಕಿಸಿದರೆ, ನಾವು ಮಾತುಕತೆಗೆ ಸಿದ್ಧರಿದ್ದೇವೆ ಎಂದು ಸಚಿವರು ಸ್ಪಷ್ಟಪಡಿಸಿದರು.

ರಾಜ್ಯ ಸರ್ಕಾರ ಮೊದಲು ಎಸ್‌ಎಪಿ ಘೋಷಣೆ ಮಾಡಲಿ ಎಂಬ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿಕೆಗೆ ತಿರುಗೇಟು ಕೊಟ್ಟ ಸಚಿವ ಸತೀಶ್ ಜಾರಕಿಹೊಳಿ, ಕೇಂದ್ರ ಸರ್ಕಾರ ಮೊದಲು ಎಂಎಸ್‌ಪಿ ಹೆಚ್ಚಿಸಲಿ. ಅದನ್ನು ಮಾಡದೇ ನಮ್ಮ ತಲೆ ಮೇಲೆ ಹೊರಿಸಿದರೆ ಹೇಗೆ? ಈಗ ಇರುವ ಸಕ್ಕರೆ ದರವನ್ನು ಅಧಿಕೃತ ಮಾಡಲಿ. ಅದನ್ನು ಮಾಡಲು ಕೇಂದ್ರ ಸರ್ಕಾರ ಸಿದ್ಧವಿಲ್ಲ ಎಂದು ಕಿಡಿಕಾರಿದರು. ರಾಜ್ಯ ಸರ್ಕಾರದಿಂದ ಈಗಾಗಲೇ ಘೋಷಣೆ ಮಾಡಿದ್ದೇವೆ.

ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಮರ್ಥ ಅಭ್ಯರ್ಥಿಗಳನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಆದರೆ, ಚುನಾವಣೆ ಕುರಿತು ಇನ್ನೂ ಅಂತಿಮ ಅಧಿಸೂಚನೆ ಪ್ರಕಟವಾಗಿಲ್ಲ. ಅದು ಹೊರಬಂದ ಬಳಿಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತೇವೆ ಎಂದರು.

ಮಾರುಕಟ್ಟೆಯಲ್ಲಿ ಈಗಿನ ಸಕ್ಕರೆ ದರ ಆಧರಿಸಿ, ಕಾರ್ಖಾನೆಗಳು ಪ್ರತಿ ಟನ್ ಕಬ್ಬಿಗೆ 3500 ರೂ. ನೀಡಲು ಒಪ್ಪಿಕೊಂಡಿವೆ. ಅದೇ ರೀತಿ ಎಂಎಸ್‌ಪಿ ಇನ್ನೂ ಹೆಚ್ಚಿಸಿದರೆ, ಅದಕ್ಕೆ ಅನುಗುಣವಾಗಿ ಮತ್ತೆ ದರ ಹೆಚ್ಚಿಸುವುದಾಗಿ ಹೇಳಿದ್ದಾರೆ. ಇದು ಸಿಎಂ ನೇತೃತ್ವದಲ್ಲೇ ಒಪ್ಪಂದ ಆಗಿದೆ. ಎರಡು ದಿನದಲ್ಲಿ ಮಾತನಾಡಿಕೊಂಡು ಬರುತ್ತೇವೆ ಎಂದಿದ್ದರು. ಆದರೆ, ಈವರೆಗೂ ಬಂದಿಲ್ಲ ಎಂದರು.

ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆಗಳ ಅಧಿಸೂಚನೆ ಡಿಸೆಂಬರ್ 15ರಂದು ಪ್ರಕಟವಾಗುವ ಸಾಧ್ಯತೆ ಹಿನ್ನೆಲೆಯಲ್ಲಿ, ಬೆಳಗಾವಿಯಲ್ಲಿ ನಡೆಯಲಿರುವ ಚಳಿಗಾಲದ ವಿಧಾನಮಂಡಲ ಅಧಿವೇಶನವನ್ನು ನಿಗದಿತ ಅವಧಿಗಿಂತ ಮುಂಚಿತವಾಗಿ ನಡೆಸಲು ನಿರ್ಧರಿಸಲಾಗಿದೆ ಎಂದು ಜಾರಕಿಹೊಳಿ ವಿವರಿಸಿದರು. ತಾತ್ಕಾಲಿಕ ಕ್ರಮಗಳನ್ನು ಕೈಗೊಳ್ಳುವುದರಿಂದ ಸಮಸ್ಯೆಗೆ ಸಂಪೂರ್ಣ ಪರಿಹಾರ ಸಿಗುವುದಿಲ್ಲ. ನಾಲಾದಲ್ಲಿ ನೀರು ಸರಾಗವಾಗಿ ಹರಿದುಹೋಗಲು ಅಗತ್ಯವಿರುವಷ್ಟು ಅಗಲೀಕರಣ ಮಾಡಬೇಕು. ನಾಲಾ ವಿಸ್ತರಣೆ ಮಾಡಿದರೆ ಮಾತ್ರ ಪ್ರವಾಹ ಮತ್ತು ಜಲಾವೃತ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಸಚಿವರು ಹೇಳಿದರು.

ಮಿನಿ ನ್ಯೂಸ್

ಸಮುದಾಯ ಮಟ್ಟದ ಜಾಗೃತಿ ಕಾರ್ಯಕ್ರಮ

• **ಉದಯವಾಹಿನಿ, ಬಳ್ಳಾರಿ,:**

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ಬಳ್ಳಾರಿ ಹಾಗೂ ರೀಚ್ ಸಂಸ್ಥೆಯ ವತಿಯಿಂದ ಬಾಲ್ಯ ವಿವಾಹ ತಡೆಗೆ ಜಾಗೃತಿ ಹಾಗೂ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಬಗ್ಗೆ ಶಾಲೆ ಕಾಲೇಜುಗಳಲ್ಲಿ ಮತ್ತು ಸಮುದಾಯ ಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಬಳ್ಳಾರಿ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿ ಮಾಡುವ ದಿಶೆಯಲ್ಲಿ ಜಾಗೃತಿ ಹಮ್ಮಿಕೊಳ್ಳುತ್ತದೆ. ಈ ಜಾಗೃತಿ ಕಾರ್ಯಕ್ರಮದಲ್ಲಿ ರೀಚ್ ಸಂಸ್ಥೆಯ ಸಂಯೋಜಕರಾದ ಹನುಮಂತಪ್ಪ ಹೆಚ್, ಶ್ರೀಮತಿ ಬಸಮ್ಮ ಹಾಗೂ ಜಿಲ್ಲಾ ಮಕ್ಕಳ ಸಹಾಯವಾಣಿ ಸಿಬ್ಬಂದಿಗಳಾದ ಶ್ರೀ ಮತಿ ಚಂದ್ರಕಲಾ ರವರು ಹಾಗೂ ಸ್ಕೌಟ್ ಮಾಸ್ಟರ್ ಆದ ಜಯರಾಜ್, ಶಂಭುನಾಥ್ ರವರು ಹಾಗೂ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಹಾಯಕರಾದ ಮಹಮ್ಮದ್ ಶರ್ಫುದ್ದೀನ್ ರವರು ಉಪಸ್ಥಿತರಿದ್ದರು.

ಸುಸಜ್ಜಿತ ಪೌಷ್ಟಿಕ ಆಹಾರ ಕೋಣೆ ಉದ್ಘಾಟಿಸಿದ ಸಚಿವ ಈಶ್ವರ ಖಂಡ್ರೆ

• **ಉದಯವಾಹಿನಿ, ಬೀದರ: :**

ನಗರದ ಬ್ರಿಮ್ಸ್ ಆಸ್ಪತ್ರೆಯಲ್ಲಿ ಮಹಿಳಾ ರೋಗಿಗಳು ಹಾಗೂ ಬಾಣಂತಿಯರಿಗೆ ಪೌಷ್ಟಿಕ ಆಹಾರವನ್ನು ಸರಬರಾಜು ಮಾಡುವ ನಿಟ್ಟಿನಲ್ಲಿ ನೂತನವಾಗಿ ನಿರ್ಮಿಸಲಾದ ಸುಸಜ್ಜಿತ ಪೌಷ್ಟಿಕ ಆಹಾರ ಕೋಣೆಯನ್ನು ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಬೀದರ್ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ. ಖಂಡ್ರೆ ಅವರು ಉದ್ಘಾಟಿಸಿದರು.

ಉದ್ಘಾಟನೆಯ ನಂತರ ಸಚಿವರು ಆಸ್ಪತ್ರೆಯ ನಿಕಟಪೂರ್ವ ವಾರ್ಡ್ಗಳಿಗೆ ಖುದ್ದಾಗಿ ಭೇಟಿ ನೀಡಿ, ಚಿಕಿತ್ಸೆ ಪಡೆಯುತ್ತಿರುವ ಮಹಿಳಾ ರೋಗಿಗಳಿಗೆ ಹಾಗೂ ಬಾಣಂತಿಯರಿಗೆ ತಮ್ಮ ಕೈಯಾರ ಸ್ವತಃ ಪೌಷ್ಟಿಕ ಊಟವನ್ನು ವಿತರಿಸಿದರು. ಇದೇ ವೇಳೆ ರೋಗಿಗಳ ಆರೋಗ್ಯ ವಿಚಾರಿಸಿದ ಸಚಿವರು, ಆಸ್ಪತ್ರೆಯಲ್ಲಿ ದೊರೆಯುತ್ತಿರುವ ವೈದ್ಯಕೀಯ ಸೌಲಭ್ಯಗಳು, ನೈರ್ಮಲ್ಯ ಮತ್ತು ಊಟದ ಗುಣಮಟ್ಟದ ಕುರಿತು ಸಾರ್ವಜನಿಕರಿಂದ ನೇರವಾಗಿ ಮಾಹಿತಿ ಪಡೆದುಕೊಂಡರು. ಬಳಿಕ ಮಾತನಾಡಿದ ಸಚಿವರು, ಆಸ್ಪತ್ರೆಗೆ ದಾಖಲಾಗುವ ರೋಗಿಗಳ ಶೀಘ್ರ ಚೇತರಿಕೆಗೆ ವೈದ್ಯಕೀಯ ಚಿಕಿತ್ಸೆಯ ಜೊತೆಗೆ ಸತ್ವಯುತ ಹಾಗೂ ಶುಚಿ-ರುಚಿಯಾದ ಆಹಾರ ನೀಡುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ನೂತನವಾಗಿ ಆರಂಭಿಸಲಾದ ಸುಸಜ್ಜಿತ ಆಹಾರ ಕೋಣೆಯು ರೋಗಿಗಳಿಗೆ ನಿರಂತರವಾಗಿ ಉತ್ತಮ ದರ್ಜೆಯ ಆಹಾರ ಪೂರೈಸಲು ನೆರವಾಗಲಿದೆ ಎಂದರು. ಅಲ್ಲದೆ, ಆಸ್ಪತ್ರೆಗೆ ಆಗಮಿಸುವ ಪ್ರತಿಯೊಬ್ಬ ಬಡ ರೋಗಿಗೂ ಗುಣಮಟ್ಟದ ಚಿಕಿತ್ಸೆ ಸಿಗುವಂತೆ ನೋಡಿಕೊಳ್ಳಬೇಕು ಎಂದು ವೈದ್ಯಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.


ಉದಯವಾಹಿನಿ ಚಿತ್ರ

ಕನ್ನಡ ಚೈತನ್ಯ ವೇದಿಕೆ ಕಾರ್ಯಕ್ಕೆ ಮೆಚ್ಚುಗೆ

• **ಉದಯವಾಹಿನಿ, ಬಳ್ಳಾರಿ, :**

ಗಡಿನಾಡಿನಲ್ಲಿ ಕನ್ನಡ ಉಳಿಸಿ ಬೆಳೆಸುವ ಕಾರ್ಯವನ್ನು ಕನ್ನಡ ಚೈತನ್ಯ ವೇದಿಕೆ ಕಳೆದ 25 ವರ್ಷಗಳಿಂದ ಸಮರ್ಪಕವಾಗಿ ನಿರ್ವಹಿಸುತ್ತಿದೆ ಎಂದು ಮಾಜಿ ಶಾಸಕ ಜಿ ಸೋಮಶೇಖರ ರೆಡ್ಡಿ ತಿಳಿಸಿದರು.ಕನ್ನಡ ಚೈತನ್ಯ ವೇದಿಕೆಯ ಕಚೇರಿಯಲ್ಲಿ ಹಮ್ಮಿಕೊಂಡಿದ್ದ 71ನೇ ಕರ್ನಾಟಕ ರಾಜ್ಯೋತ್ಸವವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಕನ್ನಡ ನೆಲ ಜಲ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ಎಲ್ಲಾ ಕನ್ನಡಿಗರ ಸಾಮೂಹಿಕ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಕನ್ನಡ ಚೈತನ್ಯ ವೇದಿಕೆಯ ಅಧ್ಯಕ್ಷ ಬಿ ಎಸ್ ಪ್ರಭುಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಬಳ್ಳಾರಿ ಜಿಲ್ಲಾ ಅಧ್ಯಕ್ಷರಾದ ಡಾ. ನಿಷ್ಠಿ ರುದ್ರಪ್ಪ ಕಾರ್ಯಕ್ರಮಕ್ಕೆ ಶುಭ ಕೋರಿದರು. ವೇದಿಕೆಯಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಕೆಎಸ್ ಅಶೋಕ್. ಕಿಟ್ಟು .ಮಹಿಳಾ ಅಧ್ಯಕ್ಷರಾದ ಜ್ಯೋತಿ ಪ್ರಕಾಶ್ ಉಪಸ್ಥಿತರಿದ್ದರು. ಕನ್ನಡ ಚೈತನ್ಯ ವೇದಿಕೆಯಿಂದ ವಿವಿಧ ವೇಷಭೂಷಣಗಳ ಪ್ರದರ್ಶನ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ನಂತರ ಕನ್ನಡ ಭುವನೇಶ್ವರಿಯ ಮೆರವಣಿಗೆಯನ್ನು ಭವ್ಯವಾಗಿ ನೆರವೇರಿಸಲಾಯಿತು. ಈ ಕಾರ್ಯಕ್ರಮಕ್ಕೆ ಕನ್ನಡ ಚೈತನ್ಯ ವೇದಿಕೆಯ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಜ್ಯೋತಿ ಪ್ರಕಾಶ್ ಹಾಗೂ ನೂರಾರು ಜನ ಕನ್ನಡ ಅಭಿಮಾನಿಗಳು ಭಾಗವಹಿಸಿದ್ದರು.

ಲೇಡಿಗೋಷನ್‌ಗೆ ರಾಜ್ಯ ಮಟ್ಟದ ಪ್ರಶಸ್ತಿ

• **ಉದಯವಾಹಿನಿ, ಮಂಗಳೂರು-**

ಗುಣಮಟ್ಟದ ತಾಯಿ ಮಗುವಿನ ಆರೋಗ್ಯ ಸೇವೆಯನ್ನು ನೀಡುತ್ತಾ ಬಂದ ದಕ್ಷಿಣ ಕನ್ನಡ ಜಿಲ್ಲಾ ಸರಕಾರಿ ಲೇಡಿಗೋಷನ್ ಆಸ್ಪತ್ರೆ ರಾಜ್ಯ ಮಟ್ಟದಲ್ಲಿ ಮತ್ತೆ ಅತ್ಯುನ್ನತ ಸ್ಥಾನದಲ್ಲಿ ನಿಂತು ಮತ್ತೊಮ್ಮೆ ತನ್ನ ಘನತೆಯನ್ನು ಎತ್ತಿ ತೋರಿಸಿದೆ. ಅನೇಕ ವಿನೂತನ ಕಾರ್ಯಕ್ರಮ ಹಾಗೂ ವಿಧಾನಗಳನ್ನು ಅಳವಡಿಸಿಕೊಂಡು ತಾಯಿಮರಣ ಹಾಗೂ ಶಿಶು ಮರಣದ ಪ್ರಮಾಣವನ್ನು ಕನಿಷ್ಠತೆಗೆ ತಂದ ಹೆಗ್ಗಳಿಕೆ ಲೇಡಿಗೋಷನ್ ಆಸ್ಪತ್ರೆಯದು.

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಐಪಾಸ್ ಫೌಂಡೇಶನ್ ಇದರ ಸಹಯೋಗದೊಂದಿಗೆ ನಡೆಸಿದ ಸಮೀಕ್ಷೆಯಲ್ಲಿ ರಾಜ್ಯದ ಜಿಲ್ಲಾಸ್ಪತ್ರೆಗಳ ಪೈಕಿ ಸರಕಾರಿ ಲೇಡಿಗೋಷನ್ ಆಸ್ಪತ್ರೆಯಲ್ಲಿ 2025-26 ರಲ್ಲಿ ಕಾನೂನುಬದ್ಧವಾಗಿ ನಡೆದ ಗರ್ಭಪಾತ ಮತ್ತು ಅದರ ನಂತರದ ಆರೈಕೆಯಲ್ಲಿ ಶೇಕಡಾ ನೂರರಷ್ಟು ತಾಯಿ ಆರೋಗ್ಯವನ್ನು ಕಾಪಾಡಿ ತಾಯಿ ಮರಣವನ್ನು ಶೂನ್ಯಕ್ಕೆ ತಂದಂತಹ ಕೀರ್ತಿಗೆ ಪಾತ್ರವಾಗಿ ರಾಜ್ಯಕ್ಕೆ ಮೊದಲನೇ ಸ್ಥಾನದಲ್ಲಿರುತ್ತದೆ. ಅಂಕಿ ಅಂಶಗಳ ಪ್ರಕಾರ ಸದ್ರಿ ಆರ್ಥಿಕ ವರ್ಷದಲ್ಲಿ 304 ಕಾನೂನು ಮಿತಿಯ ಗರ್ಭಪಾತಗಳನ್ನು ಲೇಡಿಗೋಷನ್ ಆಸ್ಪತ್ರೆ ಸಮರ್ಥವಾಗಿ ನಿಭಾಯಿಸಿದ್ದು ಪ್ರತಿಯೊಂದು ಪ್ರಕರಣವೂ ಗುಣಮಟ್ಟದ ಕಾಂಪ್ರೆಹೆನ್ಸಿವ್ ಅಬಾರ್ಶನ್ ಕೇರ್ ಕಾರ್ಯಕ್ರಮದಡಿಯಲ್ಲಿ ಎಲ್ಲಾ ನಿಯಮಗಳನ್ನು ಪಾಲಿಸಿ ಝೀರೋ ಮರಣ ಪ್ರಮಾಣವನ್ನು ದಾಖಲಿಸಿದೆ. 9 ವಾರಗಳ ಮೊದಲ ಗರ್ಭಪಾತ -191, 10 ರಿಂದ 12 ವಾರಗಳು-31, 12 ರಿಂದ 20 ವಾರಗಳು-52, 20 ರಿಂದ 24 ವಾರಗಳು-25, 24 ವಾರಗಳ ನಂತರ-5, ಒಟ್ಟು -304. ಅಲ್ಲದೆ ಶೇಕಡಾ 95 ರಷ್ಟು ಫಲಾನುಭವಿಗಳಿಗೆ ಕುಟುಂಬ ಕಲ್ಯಾಣ ವಿಧಾನಗಳ ಅಳವಡಿಕೆಯನ್ನು ಪ್ರೇರೇಪಿಸಿ ಅನುಸರಣೆ ಮಾಡುವಂತೆ ಮಾಡಿದ ಹಿರಿಮೆಗೆ ಕೂಡಾ ಲೇಡಿಗೋಷನ್ ಆಸ್ಪತ್ರೆ ಒಳಗಾಗಿದೆ.


ಉದಯವಾಹಿನಿ ಚಿತ್ರ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	03:00 ರಿಂದ 04:30
ಗುಳಿಕ ಕಾಲ	ಮಧ್ಯಾಹ್ನ	12:00 ರಿಂದ 01:30
ಯಮಗಂಡ ಕಾಲ	ಬೆಳಿಗ್ಗೆ	09:00 ರಿಂದ 10:30

ಮೇಷ ನಿಮ್ಮ ಹಣವನ್ನು ಅನೇಕ ವಿಷಯಗಳಿಗೆ ಖರ್ಚು ಮಾಡಬಹುದು, ನೀವು ಇಂದು ಉತ್ತಮ ಬಜೆಟ್ ಅನ್ನು ಯೋಜಿಸಬೇಕಾಗಿದೆ, ಇದು ನಿಮ್ಮ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ. ರಾತ್ರಿಯನ್ನು ವಿಶೇಷವಾಗಿಸಲು ಮೋಂಬತ್ತಿಯ ಬೆಳಕಿನಲ್ಲಿ ನಿಮ್ಮ ಕುಟುಂಬದೊಂದಿಗೆ ಭೋಜನ ಮಾಡಿ.

ವೃಷಭ ಸಂಗಾತಿಯೊಡನೆ ಚಲನಚಿತ್ರ, ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು, ಇದು ಜೀವನದ ಅನೇಕ ಸಮಸ್ಯೆಗಳನ್ನು ತೆಗೆದುಹಾಕುತ್ತದೆ.

ಮಿಥುನ ಕ್ರೀಡೆಗಳು ಮತ್ತು ಇತರ ಹೊರಾಂಗಣ ಚಟುವಟಿಕೆಗಳಲ್ಲಿ ಭಾಗವಹಿಸುವುದು ನಿಮ್ಮ ಕಳೆದುಕೊಂಡ ಚೈತನ್ಯವನ್ನು ಸಂಗ್ರಹಿಸಲು ಸಹಾಯ ಮಾಡುತ್ತದೆ. ನೀವು ಇತರರ ಮೇಲೆ ಹೆಚ್ಚು ಖರ್ಚು ಮಾಡಬಯಸುತ್ತೀರಿ. ಪೂರ್ವಜರ ಆಸ್ತಿಯ ಉತ್ತರಾಧಿಕಾರಿತ್ವದ ಸುದ್ದಿ ಇಡೀ ಕುಟುಂಬವನ್ನು ಸಂತುಷ್ಟಗೊಳಿಸಬಹುದು.

ಕಟಕ ಕುಟುಂಬ ಮತ್ತು ಸ್ನೇಹಿತರೊಂದಿಗೆ ಆಹ್ಲಾದಕರ ಸಮಯ ಸಂತೋಷಕ್ಕಾಗಿ ಹೊಸ ಸಂಬಂಧವನ್ನು ಎದುರುನೋಡಬಹುದು ಉದ್ಯಮಿಗಳು ಕೆಲವು ಹಠಾತ್ ಅನಿರೀಕ್ಷಿತ ಲಾಭ ಅಥವಾ ಆದಾಯದ ಒಳ್ಳೆಯ ದಿನವನ್ನು ಹೊಂದಬಹುದಾದ್ದರಿಂದ ಅವರಿಗೆ ಒಳ್ಳೆಯ ದಿನ.

ಸಿಂಹ ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಕೆಲಸದ ಸ್ಥಳದಲ್ಲಿ ಅಥವಾ ವ್ಯಾಪಾರದಲ್ಲಿ ನಿಮ್ಮ ಯಾವುದೇ ಅಜಾಗರೂಕತೆ ಇಂದು ನಿಮಗೆ ಆರ್ಥಿಕ ನಷ್ಟವನ್ನು ಉಂಟುಮಾಡಬಹುದು ದೂರದ ಸಂಬಂಧಿಯೊಬ್ಬರಿಂದ ಒಂದು ಬಹುನಿರೀಕ್ಷಿತವಾದ ಸಂದೇಶ ನಿಮಗೆ ಒಳ್ಳೆಯ ಸುದ್ದಿ ತರುತ್ತದೆ.

ಕನ್ಯಾ ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ನೀವು ಹಣವನ್ನು ಸಂಗ್ರಹಿಸಲು ಬಯಸಿದರೆ ನಿಮ್ಮ ಸಂಗಾತಿಯೊಂದಿಗೆ ಅಥವಾ ಪೋಷಕರೊಂದಿಗೆ ಮಾತನಾಡಿ.

ತುಲಾ ನಿಮ್ಮ ಬಗ್ಗೆ ನಿಮಗೇ ಉತ್ತಮ ಅಭಿಪ್ರಾಯ ಬರಲು ಕೆಲಸಗಳನ್ನು ಮಾಡಲು ಒಂದು ಅದ್ಭುತ ದಿನ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು ಮತ್ತು ಜೀವನದಲ್ಲಿ ಹಣದ ಏನು ಮೌಲ್ಯವಿದೆ ಎಂದು ನಿಮಗೆ ಅರ್ಥವಾಗಬಹುದು.

ವೃಶ್ಚಿಕ ಎಣ್ಣೆಯುಕ್ತ ಮತ್ತು ಮಸಾಲೆಯುಕ್ತ ಆಹಾರ ತಪ್ಪಿಸಿ. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ. ನಿಮ್ಮ ಏಕತಾನತೆಯ ಜೀವನದಿಂದ ಒಂದು ವಿರಾಮವನ್ನು ತೆಗೆದುಕೊಳ್ಳಲು ನಿಮ್ಮ ಸ್ನೇಹಿತರೊಂದಿಗೆ ಹೊರಗೆ ಹೋಗಿ ಮಾತನಾಡಿ. ಭಾವನಾತ್ಮಕ ತೊಂದರೆಗಳು ನಿಮ್ಮನ್ನು ಕಾಡುತ್ತವೆ.

ಧನಸ್ಸು ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಇಂದು ಮಾಡಿದ ಹೂಡಿಕೆ ನಿಮ್ಮ ಅಭ್ಯುದಯ ಮತ್ತು ಆರ್ಥಿಕ ಭದ್ರತೆಯನ್ನು ಹೆಚ್ಚಿಸುತ್ತದೆ. ಒಬ್ಬ ಹಳೆಯ ಸ್ನೇಹಿತ ದಿನದ ಅಂತ್ಯದಲ್ಲಿ ಒಂದು ಆಹ್ಲಾದಕರ ಭೇಟಿ ನೀಡುತ್ತಾರೆ. ನಿಮ್ಮ ಪ್ರಿಯತಮೆಯ ಕಠಿಣ ಪದಗಳಿಂದ ನಿಮ್ಮ ಮನಸ್ಥಿತಿ ಹಾಳಾಗಬಹುದು.

ಮಕರ ಇಂದು ನೀವು ನಿಮ್ಮ ಆರೋಗ್ಯ ಮತ್ತು ನೋಟವನ್ನು ಸುಧಾರಿಸಲು ಕೆಲಸ ಮಾಡಲು ಸಾಕಷ್ಟು ಸಮಯ ಹೊಂದಿರುತ್ತೀರಿ ಇಂದು ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಹೊಂದಿರುವ ಸಾಧ್ಯತೆ ಇದೆ ಆದರೆ ನಿಮ್ಮ ಬುದ್ಧಿವಂತಿಕೆಯಿಂದ ಈ ಹಾನಿಯನ್ನು ಲಾಭದಲ್ಲಿ ಪರಿವರ್ತಿಸಬಹುದು.

ಕುಂಭ ನೀವು ಬಹಳ ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಲುಕಿದರೂ ಅದನ್ನು ಎದುರಿಸಲು ನಿಮ್ಮ ಇಚ್ಛಾಶಕ್ತಿ ಇಂದು ಸಹಾಯ ಮಾಡಬಹುದು. ಒಂದು ಅತ್ಯಂತ ಭಾವನಾತ್ಮಕ ನಿರ್ಧಾರ ಕೈಗೊಳ್ಳುವಾಗ ನೀವು ಸ್ತಿಮಿತ ಕಳೆದುಕೊಳ್ಳಬಾರದು. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ.

ಮೀನ ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ಆಲ್ಕೋಹಾಲ್ ಸಿಗರೇಟ್ ಮುಂತಾದವುಗಳಿಗೆ ಹಣವನ್ನು ಖರ್ಚು ಮಾಡಬಾರದು, ಎಂದು ನಿಮಗೆ ನನ್ನ ಸಲಹೆ ನೀಡಲಾಗಿದೆ, ಅದನ್ನು ಮಾಡುವುದು ನಿಮ್ಮ ಆರೋಗ್ಯವನ್ನು ಹದಗೆಡಿಸುತ್ತದೆ.

ಸುಸ್ಥಿರ-ಉದ್ಯೋಗ ಸೃಷ್ಟಿಯ ನಗರವನ್ನಾಗಿ ರೂಪಿಸಲು ಸಂಕಲ್ಪ

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಯುವಕರಿಗೆ ನೆರವಾಗುವ ಉದ್ದೇಶದಿಂದ ಈಗಾಗಲೇ ಪ್ರಬುದ್ಧ ಅಕಾಡೆಮಿ ಸ್ಥಾಪಿಸಲಾಗಿದೆ.

• **ಉದಯವಾಹಿನಿ ಕಲಬುರಗಿ:**

ಕನ್ನಡವು ಕೇವಲ ಒಂದು ಭಾಷೆಯಲ್ಲ, ಬದಲಾಗಿ ಅದು ಭಾವನೆ, ಇತಿಹಾಸ, ಆಲೋಚನೆ ಮತ್ತು ಸಂಸ್ಕೃತಿಯ ಸಮ್ಮಿಲನವಾಗಿದೆ ಎಂದು ಕರ್ನಾಟಕದ ಗೃಹ, ಐಟಿ-ಬಿಟಿ, ಇ-ಆಡಳಿತ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಹೇಳಿದರು.

ರಾಜ್ಯದ ಶ್ರೀಮಂತ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು

1 : ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಿ
2 : ನಗರದ ಅಭಿವೃದ್ಧಿಗಾಗಿ ನೂತನ ನೀಲನಕ್ಷೆ
3 : ವಿದೇಶಿ ರಾಯಭಾರಿಗಳನ್ನು ಆಹ್ವಾನಿಸಲಾಗಿತ್ತು

ಸಂರಕ್ಷಿಸಿ, ಅದನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸಲು ಪ್ರಯತ್ನಗಳು ನಡೆಯಬೇಕೆಂದು ಅವರು ಕರೆ ನೀಡಿದರು. 71ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಕಲಬುರಗಿಯನ್ನು ಸ್ಮಾರ್ಟ್ ನಗರದ ಜೊತೆಗೆ ಸುಸ್ಥಿರ ಹಾಗೂ ಸಮಗ್ರ ಅಭಿವೃದ್ಧಿ ಹೊಂದಿದ ನಗರವನ್ನಾಗಿ ರೂಪಿಸುವ ಸಂಕಲ್ಪ ಮಾಡಲಾಗಿದೆ. ನಗರದ ಅಭಿವೃದ್ಧಿಗಾಗಿ ನೂತನ ನೀಲನಕ್ಷೆ ಸಿದ್ಧಪಡಿಸಲಾಗಿದ್ದು, ವಿದೇಶಿ


☛ಉದಯವಾಹಿನಿ ಚಿತ್ರ

ಬಂಡವಾಳ ಆಕರ್ಷಣೆ, ಉದ್ಯೋಗ ಸೃಷ್ಟಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದು ಹೇಳಿದ್ದಾರೆ. ಇತ್ತೀಚೆಗೆ ರಾಜ್ಯ ಸರ್ಕಾರದ ವತಿಯಿಂದ ದಸರಾ ಮಹೋತ್ಸವಕ್ಕೆ 40ಕ್ಕೂ ಹೆಚ್ಚು ವಿದೇಶಿ ರಾಯಭಾರಿಗಳನ್ನು ಆಹ್ವಾನಿಸಲಾಗಿತ್ತು. ಈ ಸಂದರ್ಭದಲ್ಲಿ ಅವರೊಂದಿಗೆ ಸಂವಾದ ನಡೆಸುವ ಅವಕಾಶ ದೊರೆತಿತ್ತು. ಕರ್ನಾಟಕದ ಕಲೆ, ಸಾಹಿತ್ಯ, ಆಹಾರ ಮತ್ತು ಸಂಸ್ಕೃತಿಯ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ ಎಂಬುದನ್ನು ತಿಳಿದು ವಿದೇಶಿ ಪ್ರತಿನಿಧಿಗಳು ಅಚ್ಚರಿ ವ್ಯಕ್ತಪಡಿಸಿದರು. ಕನ್ನಡದ

> ಯುವಜನರಿಗೆ ಅಗತ್ಯವಿರುವ ನೀತಿ-ನಿಯಮಗಳನ್ನು ರೂಪಿಸಿ, ಅವರ ಭವಿಷ್ಯಕ್ಕೆ ಅವಕಾಶಗಳನ್ನು ಕಲ್ಪಿಸುವ ಸಾಮರ್ಥ್ಯ ಕರ್ನಾಟಕಕ್ಕಿದೆ. ಕಲಬುರಗಿಯ ಅಭಿವೃದ್ಧಿಯಾಗಬೇಕಾದರೆ ಯುವಕರಿಗೆ ಗುಣಮಟ್ಟದ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶಗಳನ್ನು ಕಲ್ಪಿಸುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದರು. -ಸಚಿವ ಪ್ರಿಯಾಂಕ್ ಖರ್ಗೆ

ಸಾಹಿತ್ಯ ಪರಂಪರೆ, ರಾಜ್ಯದ ಇತಿಹಾಸ ಹಾಗೂ ವೈವಿಧ್ಯತೆಯ ಬಗ್ಗೆ ತಿಳಿದುಕೊಂಡು ಸಂತಸಪಟ್ಟರು ಎಂದು ಹೇಳಿದರು. ಕನ್ನಡ ಕೇವಲ ಭಾಷೆಯಲ್ಲ, ಅದು ಭಾವನೆ, ಇತಿಹಾಸ, ವಿಚಾರ ಮತ್ತು ಆಚಾರಗಳ ಸಂಗಮವಾಗಿದೆ. ಜನಪದ, ದಾಸ, ಜೈನ, ನವೋದಯ, ನವ್ಯ ಹಾಗೂ ಬಂಡಾಯ ಸಾಹಿತ್ಯ ಸೇರಿದಂತೆ ವೈವಿಧ್ಯಮಯ ಸಾಹಿತ್ಯ ಪರಂಪರೆಯನ್ನು ಕನ್ನಡ ಹೊಂದಿದೆ. ಇಂತಹ ಶ್ರೀಮಂತ ಮತ್ತು ವೈವಿಧ್ಯಮಯ ಸಾಹಿತ್ಯ ಪರಂಪರೆ ಮತ್ತೊಂದು ಭಾಷೆಯಲ್ಲಿ ಕಾಣುವುದು ಅಪರೂಪ ಎಂದರು. ಕರ್ನಾಟಕದ ವೈವಿಧ್ಯತೆಯನ್ನು ವಿವರಿಸಿದ ಅವರು, ಮಲೆನಾಡಿನ ಜನರಿಗೆ ಇದು ಹಸಿರಿನ ಸಿರಿ, ಕಲ್ಯಾಣ ಕರ್ನಾಟಕದ ಜನರಿಗೆ ತೊಗರಿಯ ಕಣಜ ಹಾಗೂ ಸೂಫಿ ಸಂತರ ನಾಡು, ಮಂಡ್ಯ ಭಾಗದವರಿಗೆ

> ಇದೀಗ ನಗರಕ್ಕೆ ಮಾಸ್ಟರ್ ಪ್ಲ್ಯಾನ್ ಸಿದ್ಧಪಡಿಸಲಾಗಿದ್ದು, ಸ್ಮಾರ್ಟ್ ಸಿಟಿ ಮಾದರಿಯಲ್ಲಿ ವಿದೇಶಿ ಬಂಡವಾಳ ಆಕರ್ಷಿಸುವುದು, ಉದ್ಯೋಗ ಸೃಷ್ಟಿಸುವುದು ಹಾಗೂ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಉದ್ದೇಶ ಹೊಂದಲಾಗಿದೆ.


ರೇಷ್ಮೆ ಮತ್ತು ಹಾಲಿನ ನಾಡು, ಕರಾವಳಿ ಭಾಗದವರಿಗೆ ವಿಭಿನ್ನ ಸಂಸ್ಕೃತಿಯ ನೆಲೆ. ಸಾಹಿತಿಗಳಿಗೆ ಕಲೆ ಮತ್ತು ಸಾಂಸ್ಕೃತಿಕ ನಾಡು, ಬಸವಣ್ಣನವರ ಅನುಯಾಯಿಗಳಿಗೆ ಸಮಾನತೆಯ ಸಂದೇಶ ಸಾರಿದ ನೆಲ, ವಿಶ್ವದ ಜನರಿಗೆ ಜ್ಞಾನದ ನಾಡು, ಯುವಜನರಿಗೆ ಅವಕಾಶಗಳ ನಾಡು ಹಾಗೂ ವಿದೇಶಿಯರಿಗೆ ಮಾನವ ಸಂಪನ್ಮೂಲದ ಕೇಂದ್ರವಾಗಿದೆ. ಹೀಗಾಗಿ ಕರ್ನಾಟಕವು ರಾಷ್ಟ್ರದ ಆರ್ಥಿಕ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಹೇಳಿದರು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು ಯುವಕರಿಗೆ ನೆರವಾಗುವ ಉದ್ದೇಶದಿಂದ ಈಗಾಗಲೇ ಪ್ರಬುದ್ಧ ಅಕಾಡೆಮಿ ಸ್ಥಾಪಿಸಲಾಗಿದೆ. ಇದರ ಜೊತೆಗೆ ವಿಭಿನ್ನ ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಉದ್ದೇಶದಿಂದ ಕಲಬುರಗಿ ನೆಕ್ಸ್ಟ್ ಫೌಂಡೇಶನ್ ಸ್ಥಾಪಿಸಲಾಗಿದೆ. ಖಾಸಗಿ ಸಹಭಾಗಿತ್ವದ ಮೂಲಕ ಅಭಿವೃದ್ಧಿ ಕಾರ್ಯಗಳನ್ನು ಹೇಗೆ ಪರಿಣಾಮಕಾರಿಯಾಗಿ ಕೈಗೊಳ್ಳಬಹುದು ಎಂಬುದಕ್ಕೆ ಈ ಸಂಸ್ಥೆ ಮಾದರಿಯಾಗಲಿದೆ ಎಂದರು.

ಸ್ಟಿಂಗ್ ಆಪರೇಷನ ದೆಹಲಿಯಲ್ಲಿ ಮತ್ತೊಬ್ಬ ಶಂಕಿತನ ಗುರುತು ಪತ್ತೆ..!

• **ಉದಯವಾಹಿನಿ ಕಲಬುರಗಿ:**

ಸ್ಟಿಂಗ್ ಆಪರೇಷನ್ ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಈಗಾಗಲೇ ಹಲವು ಮಹತ್ವದ ಅಂಶಗಳು ಬೆಳಕಿಗೆ ಬಂದಿವೆ. ಮುಂದಿನ ತನಿಖೆಯಲ್ಲಿ ಇನ್ನಷ್ಟು ಸಂಗತಿಗಳು ಬಹಿರಂಗವಾಗುವ ನಿರೀಕ್ಷೆಯಿದೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತನಿಖೆಯ ವೇಳೆ ಯಾರ ಮೇಲಾದರೂ ಅನುಮಾನ ವ್ಯಕ್ತವಾದರೆ ಅವರು ಎಷ್ಟೇ ಪ್ರಭಾವಿಗಳಾಗಿದ್ದರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಇದೇ ವೇಳೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ವರ್ತನೆಗೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಸಾರ್ವಜನಿಕ ಜೀವನದಲ್ಲಿರುವವರು ತಾವು ಹೊಂದಿರುವ ಹುದ್ದೆ ಮತ್ತು ಸ್ಥಾನಮಾನದ ಘನತೆಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ ಎಂದು ಹೇಳಿದರು.


☛ಉದಯವಾಹಿನಿ ಚಿತ್ರ

ವೈಯಕ್ತಿಕ ಟೀಕೆಗಳು, ಜಾತಿ ಮತ್ತು ಕುಟುಂಬದ ಬಗ್ಗೆ ಅವಹೇಳನಕಾರಿ ಹೇಳಿಕೆಗಳು ಹಾಗೂ ಇತರರನ್ನು ಏಕವಚನದಲ್ಲಿ ಅಗೌರವದಿಂದ ಸಂಬೋಧಿಸುವುದನ್ನು ಅವರು ಟೀಕಿಸಿದರು. ತನಿಖೆಯ ವೇಳೆ ನಡೆಸಲಾದ ತಾಂತ್ರಿಕ ವಿಶ್ಲೇಷಣೆಯಿಂದ ಹಲವು ಪ್ರಮುಖ ಮಾಹಿತಿಗಳು ಲಭ್ಯವಾಗಿವೆ. ಪ್ರಕರಣದ ಮೂಲ ಯಾವುದು ಮತ್ತು ಇದರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆಹಚ್ಚಲು ತನಿಖೆ ನಡೆಯುತ್ತಿದೆ. ಈ ವಿಚಾರವನ್ನು ಹೇಗೆ ಹರಡಲಾಯಿತು ಮತ್ತು ಇದರ ಹಿಂದಿರುವ ಸೂತ್ರಧಾರರು ಯಾರು ಎಂಬುದರ ಕುರಿತು ಎಫ್‌ಐಆರ್‌ನಲ್ಲಿ ಸ್ಪಷ್ಟ ಉಲ್ಲೇಖಗಳಿವೆ ಎಂದರು.

ಕನ್ನಡ ಶಾಲೆ ಉಳಿವಿಗೆ ಶ್ರಮಿಸಿ ಎಂದು ಅರವಿಂದ ಬೆಲ್ಲದ ಕರೆ

• **ಉದಯವಾಹಿನಿ ಧಾರವಾಡ:**

'ಕನ್ನಡ ಶಾಲೆಗಳು ಉಳಿಯಬೇಕು. ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಮತ್ತು ಕನ್ನಡ ಭಾಷೆಯ ಉಳಿವಿಗಾಗಿ ಎಲ್ಲರೂ ಒಗ್ಗಟ್ಟಿನಿಂದ ಹೋರಾಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಹೇಳಿದರು. ಕರ್ನಾಟಕ ವಿದ್ಯಾವರ್ಧಕ ಸಂಘದ ವತಿಯಿಂದ ಭಾನುವಾರ ಪಾಟೀಲ ಪುಟ್ಟಪ್ಪ ಸಭಾಭವನದಲ್ಲಿ ಆಯೋಜಿಸಿದ್ದ ನಾಡಹಬ್ಬ ಆಚರಣೆಯಲ್ಲಿ ಮಾತನಾಡಿದ ಅವರು, 'ಭಾಷೆ ಅಳಿದರೆ ಸಂಸ್ಕೃತಿ ಅಳಿಯುತ್ತದೆ. ಭಾಷೆಯೇ ಸಂಸ್ಕೃತಿಯ ತಳಹದಿ. ನಾಡು ಮತ್ತು ನುಡಿಯ ಸಂರಕ್ಷಣೆಯ ಜವಾಬ್ದಾರಿಯನ್ನು ಹೊತ್ತಿರುವ ಕರ್ನಾಟಕ ವಿದ್ಯಾವರ್ಧಕ ಸಂಘವು ಈ ನಿಟ್ಟಿನಲ್ಲಿ ಮತ್ತಷ್ಟು ಮುಂಚೂಣಿಯಾಗಿ ನಿಂತು ಕಾರ್ಯ ನಿರ್ವಹಿಸಬೇಕಿದೆ' ಎಂದರು. ಸಂಘದ ಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಮಾತನಾಡಿ,


☛ಉದಯವಾಹಿನಿ ಚಿತ್ರ

'ನಾಡು, ನುಡಿ, ಸಂಸ್ಕೃತಿಯ ರಕ್ಷಣೆ ಮತ್ತು ಜಾಗೃತಿಗಾಗಿ ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರಮಿಸುತ್ತಿದೆ. ರಾಜ್ಯದ ಮೂಲೆ ಮೂಲೆಗಳಲ್ಲಿ ಕನ್ನಡ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ನಿರಂತರವಾಗಿ ಆಯೋಜಿಸುತ್ತಿದೆ' ಎಂದರು. ಪಂಡಿತ ಎಂ.ವೆಂಕಟೇಶ ಕುಮಾರ ಅವರು ವಾಗ್ಭೂಷಣ ಪತ್ರಿಕೆ ಎರಡನೆ ಸಂಚಿಕೆ ಬಿಡುಗಡೆಗೊಳಿಸಿದರು. ಸಂಘದ ಉಪಾಧ್ಯಕ್ಷ ಡಾ. ಸಂಜೀವ ಕುಲಕರ್ಣಿ, ಗೌರವ ಉಪಾಧ್ಯಕ್ಷರಾದ ಪಾಡುರಂಗ ಪಾಟೀಲ, ಶ್ರೀನಿವಾಸ ವಾಡಪ್ಪಿ, ಪ್ರೊ. ಮಾಲತಿ ಪಟ್ಟಣಶೆಟ್ಟಿ, ಶಂಕರ ಹಲಗತ್ತಿ ಇದ್ದರು.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವೈಜನಾಥ ಪಾಟೀಲರ ಕೊಡುಗೆ ಅವಿಸ್ಮರಣೀಯ: ಎಂಎಸ್‌ಐಎಲ್ ಮಾಜಿ ಅಧ್ಯಕ್ಷ ವಿಕ್ರಂ ಪಾಟೀಲ

• **ಉದಯವಾಹಿನಿ,ಚಿಂಚೋಳಿ:**

ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ದಿ.ವೈಜನಾಥ ಪಾಟೀಲರ ಕೊಡುಗೆ ಅವಿಸ್ಮರಣೀಯವಾಗಿದೆ ಎಂದು ಎಂಎಸ್‌ಐಎಲ್ ಮಾಜಿ ಅಧ್ಯಕ್ಷ ವಿಕ್ರಂ ಪಾಟೀಲ ಹೇಳಿದರು.

ಪಟ್ಟಣದಲ್ಲಿ ಸಂವಿಧಾನದ 371ಜೆ ಕಲಂನ ರೂವಾರಿ ಮಾಜಿ ಸಚಿವ ದಿ.ವೈಜನಾಥ ಪಾಟೀಲರ 6ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ ಗೌರವ ನಮನ ಸಲ್ಲಿಸಿ ಮಾತನಾಡಿದ ಅವರು, ದಿ.ವೈಜನಾಥ ಪಾಟೀಲರು ಕೇವಲ ಒಬ್ಬ ರಾಜಕಾರಣಿಯಾಗಿರಲಿಲ್ಲ, ಅವರು ಹೈದರಾಬಾದ್-ಕರ್ನಾಟಕ ಭಾಗದ ನೊಂದ ಜನರ ಧ್ವನಿಯಾಗಿ 371ಜೆ ಕಲಂ ಜಾರಿಗೆ ತರಲು ನಿರಂತರ ಹೋರಾಟ ಮಾಡಿ ಅನೇಕ ಬಾರಿ ಜೈಲುವಾಸ ಅನುಭವಿಸಿ ಈ ಭಾಗದ ಜನರ ಕಲ್ಯಾಣಕ್ಕಾಗಿ ಛಲ ಬಿಡದೆ ನಿರಂತರ ಶ್ರಮದಿಂದ ಇಂದು 371ಜೆ ಜಾರಿಗೆ ಬಂದಿದೆ ಇದರಿಂದ ಶಿಕ್ಷಣದಲ್ಲಿ ಈ ಭಾಗದ ಅನೇಕ ವಿದ್ಯಾರ್ಥಿಗಳಿಗೆ ಡಾಕ್ಟರ್, ಇಂಜಿನಿಯರಿಂಗ್ ಐಎಎಸ್ ಐಪಿಎಸ್ ಆಗುವ


☛ಉದಯವಾಹಿನಿ ಚಿತ್ರ

ಕನಸು ನನಸಾಗಿ ಅನೇಕರು ಉದ್ಯೋಗ ಪಡೆದುಕೊಳ್ಳುತ್ತಿದ್ದಾರೆ ಕಲ್ಯಾಣ ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯುವಂತೆಯಾಗಿದೆ.

ನಮ್ಮ ಭಾಗದ ಮಕ್ಕಳಿಗೆ ಶಿಕ್ಷಣದಲ್ಲಿ, ಉದ್ಯೋಗದಲ್ಲಿ ಮೀಸಲಾತಿ ಸಿಗುತ್ತಿದೆ, ಅಭಿವೃದ್ಧಿ ಮಂಡಳಿಗೆ ವಿಶೇಷ ಅನುದಾನ ಬರುತ್ತಿದೆ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗುತ್ತಿವೆ ಎಂದರೆ ಅದಕ್ಕೆ ಮೂಲ ಕಾರಣ ದಿ.ವೈಜನಾಥ ಪಾಟೀಲರ ದೂರದೃಷ್ಟಿಯಾಗಿದೆ, ಸಾಮಾಜಿಕ ಕಳಕಳಿ, ರೈತರ ಪರ ಹೋರಾಟ, ಚಿಂಚೋಳಿ ಭಾಗದ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆಗಳು ಅಪಾರವಾಗಿವೆ ಎಂದರು.

ಪುತ್ರರು ಡಿಸಿಸಿ ಬ್ಯಾಂಕ್ ನಿರ್ದೇಶಕ ಗೌತಮ್ ವೈಜನಾಥ ಪಾಟೀಲ, ಡಾ.ಬಸವೇಶ ವೈಜನಾಥ ಪಾಟೀಲ, ಪುತ್ರಿಯರು ಆರತಿ ಹಾಗೂ ಭಾರತಿ, ವಿವಿಧ ಪಕ್ಷಗಳ ರಾಜಕೀಯ ಮುಖಂಡರುಗಳಾದ ಕೆಎಂ ಬಾರಿ, ಅಬ್ದುಲ್ ಬಾಷೀದ್, ಚಿತ್ರಶೇಖರ ಪಾಟೀಲ, ರವಿರಾಜ್ ಕೊರವಿ, ಗೋಪಾಲರಾವ ಕಟ್ಟಿಮನಿ, ಜಗನ್ನಾಥ ಗುತ್ತೇದಾರ, ಸಂತೋಷ ಗಡಂತಿ, ಗೋಪಾಲರೆಡ್ಡಿ ಕೊಳ್ಳೂರ, ಸಂತೋಷ ರೆಡ್ಡಿ, ಭವಾನಿ ಫತ್ತೇಪೂರ, ಸುಭಾಷ್ ಸೀಳಿನ, ಶಾಂತವೀರ ಹೀರಾಪೂರ, ಚಂದ್ರಶೇಟ್ಟಿ ಜಾಧವ, ಮಲ್ಲಿಕಾರ್ಜುನ ಪಾಲಾಮೋರ್, ಮುಕುಂದ ದೇಶಪಾಂಡೆ, ಹಣಮಂತ ಪೂಜಾರಿ, ಶ್ರೀಮಂತ ಕಟ್ಟಿಮನಿ, ನರಸಪ್ಪಾ, ಕಾಶಿನಾಥ್ ನಾಟೀಕಾರ, ಶ್ರೀನಂದರೆಡ್ಡಿ, ಕುಪೇಂದ್ರರಾವ ಫತ್ತೇಪೂರ, ಸಂತೋಷ ಗುತ್ತೇದಾರ, ಭೀಮಶೆಟ್ಟಿ ಮುರುಡಾ, ಸೇರಿದಂತೆ ಅನೇಕರಿದ್ದರು.

ಬೆಂಗಳೂರಿನ ಇಬ್ಬರು ಪ್ರವಾಸಿಗರು ನೀರುಪಾಲು; ಒಬ್ಬರು ನಾಪತ್ತೆ!

• **ಉದಯವಾಹಿನಿ ಗೋಕರ್ಣ :**

ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿರುವ ದಿಬ್ಬಣಶೇಷಿ ಸಮುದ್ರ ತೀರದಲ್ಲಿ ಸಂಭವಿಸಿದ ದುರಂತವೊಂದರಲ್ಲಿ, ಬೆಂಗಳೂರಿನಿಂದ ಪ್ರವಾಸಕ್ಕೆ ಬಂದಿದ್ದ ಇಬ್ಬರು ಪ್ರವಾಸಿಗರು (ಒಬ್ಬ ಮಹಿಳೆ ಸೇರಿದಂತೆ) ಸಮುದ್ರದಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮತ್ತೊಬ್ಬ ವ್ಯಕ್ತಿ ನಾಪತ್ತೆಯಾಗಿದ್ದಾರೆ. ಖಾಸಗಿ ಸಂಸ್ಥೆಯ ಉದ್ಯೋಗಿಗಳಾಗಿದ್ದ ಮೃತರು, ತಮ್ಮ ಸ್ನೇಹಿತರೊಂದಿಗೆ ಪ್ರವಾಸಕ್ಕೆ ಬಂದಿದ್ದರು. ಈ ವೇಳೆ ಈಜಲು ಸಮುದ್ರಕ್ಕಿಳಿದಾಗ ಈ ದುರ್ಘಟನೆ ಸಂಭವಿಸಿದೆ. ಮೃತರನ್ನು ಶೋಭಾ ದಾಸ್ (22) ಮತ್ತು ಅಕ್ರಮ್ ಎಂದು ಗುರುತಿಸಲಾಗಿದೆ. ನಾಪತ್ತೆಯಾಗಿರುವ ವ್ಯಕ್ತಿಯ ಹೆಸರು ವಿಶ್ವೇಶ್ ಎ.ಕೆ. ಎಂದು ತಿಳಿದುಬಂದಿದೆ.

ಇವರು ಬೆಂಗಳೂರಿನ ಬೆಳ್ಳಂದೂರಿನಲ್ಲಿರುವ 'ಅಲೋರಿಕಾ ಇಂಡಿಯಾ ಪ್ರೈವೇಟ್ ಲಿಮಿಟೆಡ್' ಎಂಬ ಖಾಸಗಿ ಕಾಲ್ ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದ 16 ಜನರ ಗುಂಪಿನಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಕಂಪನಿಯು ನೀಡಿದ ಬೋನಸ್ ನಿಂದ ಸಂಭ್ರಮಾಚರಣೆಗಾಗಿ ಇವರು ಇಲ್ಲಿಗೆ ಬಂದಿದ್ದರು. 16 ಮಂದಿಯೂ ಒಂದು ಖಾಸಗಿ ರೆಸಾರ್ಟ್‌ನಲ್ಲಿ ತಂಗಿದ್ದರು ಮತ್ತು ಮರುದಿನ ಸಮುದ್ರಕ್ಕೆ ಇಳಿದಿದ್ದರು ಎನ್ನಲಾಗಿದೆ. ಆದರೆ, ದಡದಿಂದ ಸುಮಾರು 15-16 ಅಡಿ ದೂರದಲ್ಲಿದ್ದಾಗ ಅಲೆಗಳು ಹೆಚ್ಚಾಗಿದೆ. ಅವರು ಅಪಾಯದಲ್ಲಿರುವುದನ್ನು ಗಮನಿಸಿದ ಸ್ಥಳೀಯರು ಜೀವ ರಕ್ಷಕರಿಗೆ (ಲೈಫ್ ಗಾರ್ಡ್‌ಗಳಿಗೆ) ಮಾಹಿತಿ ನೀಡಿದ್ದಾರೆ. ಕೂಡಲೇ ಮೀನುಗಾರರು ಅವರನ್ನು ರಕ್ಷಿಸಲು ಧಾವಿಸಿದ್ದಾರೆ. ಆದರೆ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆಯೇ ಶೋಭಾ ಮತ್ತು ಅಕ್ರಮ್ ಮೃತಪಟ್ಟಿದ್ದಾರೆ.

ಹಿಂದೂ ಧರ್ಮದ ಸಾರವೇ ಜನಹಿತ, ಮಾನವ ಕಲ್ಯಾಣ

• **ಉದಯವಾಹಿನಿ, ಮುದ್ದೇಬಿಹಾಳ:**

ಹಿಂದೂ ಧರ್ಮದ ಮೂಲ ಆಶಯ ಜನಹಿತ ಮತ್ತು ಮಾನವ ಕಲ್ಯಾಣವಾಗಿದೆ. ಎಲ್ಲಾ ಧರ್ಮಗಳ ತತ್ವಗಳನ್ನು ಸರಿಯಾಗಿ ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಅಂಬಾ ಭವಾನಿ ದೇವಸ್ಥಾನದ ಅಧ್ಯಕ್ಷ ನೇತಾಜಿ ನಲವಡೆ ಹೇಳಿದರು. ಪಟ್ಟಣದ ಅಂಬಾ ಭವಾನಿ ದೇವಸ್ಥಾನದಲ್ಲಿ ಭಗವದ್ಗೀತಾ ಅಭಿಯಾನ ಕರ್ನಾಟಕ-2026 ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಲ್ಲೂಕು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ಶಿವಾನಂದ ಬಿ. ನಾಡಗೌಡ ಮಾತನಾಡಿ, ವೈದ್ಯರಿಗೆ ರೋಗಿಯ ಕಾಯಿಲೆ ಗುಣಪಡಿಸುವುದೇ ಮುಖ್ಯವಾಗಬೇಕು ಹೊರತು ಜಾತಿ, ಧರ್ಮ ಹಾಗೂ ಆರ್ಥಿಕ ಸ್ಥಿತಿಯಲ್ಲ ಎಂದರು. ಭಗವದ್ಗೀತೆಯಲ್ಲಿ ಜೀವನದ ಸುಖ-ದುಃಖಗಳಿಗೆ ಮಾರ್ಗದರ್ಶನವಿದ್ದು, ಅದರ ತತ್ವಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಎಂ.ಜಿ.ವಿ.ಸಿ. ಪದವಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಪ್ರಕಾಶ ಎನ್. ನರಗುಂದ ಅವರು 'ಭಗವದ್ಗೀತೆ-ನೈತಿಕತೆಯ ಪೀಠಿಕೆ' ವಿಷಯವಾಗಿ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಅಭಿಯಾನ ಸಮಿತಿ ಅಧ್ಯಕ್ಷ ಶ್ರೀಶೈಲ ದೊಡಮನಿ-ರೂಢಗಿ, ಕಾರ್ಯಾಧ್ಯಕ್ಷ ಮಾಣಿಕಚಂದ ದಂಡಾವತಿ, ಗೌರವಾಧ್ಯಕ್ಷ ಶ್ರೀನಿವಾಸ ಗಜೇಂದ್ರಗಡ, ಕೆ.ಬಿ. ಕುಲಕರ್ಣಿ, ಅರವಿಂದ ಕುಲಕರ್ಣಿ, ನಿಂಗರಾಜ ಮಹೇಂದ್ರಕರ, ಶ್ರೀಕಾಂತ ಹಿರೇಮಠ, ವಿದ್ಯಾ ನಲವಡೆ, ಚಂದ್ರಕಲಾ ಕತ್ತಿ, ಲಕ್ಷ್ಮೀಬಾಯಿ ತಾಡಪಾತ್ರೆ, ಸುಜಾತ ಕಲಾದಗಿ, ಸರಸ್ವತಿ ಕುಲಕರ್ಣಿ, ಜಯಲಕ್ಷ್ಮೀ ಪಾಟೀಲ್, ಲಕ್ಷ್ಮೀ ನಲವಡೆ, ಸರೋಜಿನಿ ದೇವೂರ, ಅನ್ನಪೂರ್ಣ ನಾಗರಾಳ, ಅಂಬುಜಾ ಕುಲಕರ್ಣಿ, ವಿ.ವಿ. ಪಾಟೀಲ್,


☛ಉದಯವಾಹಿನಿ ಚಿತ್ರ

ಮೀರಾ ದೇಶಪಾಂಡೆ, ಗುರುಬಾಯಿ ತಂಗಡಗಿ, ರಾಜೇಶ್ವರಿ ನಾಡಗೌಡರ್, ಶಾಹಿನ ನಾಲತವಾಡ, ರೂಪಾ ನಾಟಿಕಾರ, ಕಾಳಪ್ಪ ಬಡಿಗೇರ ಹಾಗೂ ಅಭಿರಾಮ ಹೆಗಡೆ ಉಪಸ್ಥಿತರಿದ್ದರು. ರಂಜಿತಾ ಭಟ್ಟ ಮತ್ತು ಸಂಗಡಿಗರಿಂದ ಗೀತಗಾಯನ, ವರ್ಷಿಣಿ ಪಾಟೀಲ್ ಅವರಿಂದ ಭರತನಾಟ್ಯ ನಡೆಯಿತು. ರಾಮಚಂದ್ರ ಹೆಗಡೆ ಸ್ವಾಗತಿಸಿ, ಬಸವರಾಜ ನಂದಿಕೇಶ್ವರಮಠ ಪ್ರಾಸ್ತಾವಿಕ ಮಾತನಾಡಿದರು. ಮಂಜುನಾಥ ಪಡದಾಳಿ ನಿರೂಪಿಸಿ ವಂದಿಸಿದರು.

ದರಏರಿಕೆಯ ಪ್ರಸ್ತಾವನೆ ಖಂಡಿಸಿ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದಿಂದ ಪ್ರತಿಭಟನೆ

• **ಉದಯವಾಹಿನಿ, ಕಲಬುರಗಿ:**

ರಾಜ್ಯ ಸರ್ಕಾರ ಹಾಲಿನ ದರ ಲೀಟರ್ ಗೆ ರೂ. 8, 10,12 ರೂಪಾಯಿ ಹೆಚ್ಚಳ ಮಾಡಿರುವುದನ್ನು ಹಾಗೂ ಬಸ್ ದರಏರಿಕೆಯ ಪ್ರಸ್ತಾವನೆಯನ್ನು ಖಂಡಿಸಿ ಎಸ್ ಯುಸಿಐ ಕಮ್ಯುನಿಸ್ಟ್ ಪಕ್ಷದಿಂದಇಂದು ಕಲಬುರಗಿ ನಗರದಎಸ್.ವಿ.ಪಿ.ವೃತ್ತದಲ್ಲಿ ಪ್ರತಿಭಟನೆ ಮಾಡಲಾಯಿತು. ರಾಜ್ಯದಜನರು ಬರಗಾಲದಿಂದ ಹಾಗೂ ಅಗತ್ಯ ವಸ್ತುಗಳ ಬೆಲೆಯೇರಿಕೆಯಿಂದ ತತ್ತರಿಸಿರುವ ಸಂದರ್ಭದಲ್ಲಿಯೇರಾಜ್ಯ ಸರ್ಕಾರವು ಹಾಲಿನ ದರವನ್ನು ಪ್ರತಿ ಲೀಟರಿಗೆರೂ. 8 ರಿಂದ 12 ರೂಪಾಯಿವರೆಗೆ ಹೆಚ್ಚಳ ಮಾಡಿರುವ ನಿರ್ಧಾರವನ್ನು ತೀವ್ರವಾಗಿ ಖಂಡಿಸಲಾಯಿತು. ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿರುವ ಹೈನುಗಾರರ ಸಮಸ್ಯೆಯನ್ನು ಪರಿಹರಿಸಲು ಪರ್ಯಾಯ ಕ್ರಮಗಳನ್ನು ಕೈಗೊಳ್ಳಬೇಕು ಎಂದುಇದೇ ಸಂದರ್ಭದಲ್ಲಿಒತ್ತಾಯಿಸಲಾಯಿತು. ಪ್ರತಿಭಟನೆಯನ್ನು ಉದ್ದೇಶಿಸಿ ಎಸ್‌ಯು ಸಿ ಐ ಕಮ್ಯುನಿಸ್ಟ್ ಪಕ್ಷದಜಿಲ್ಲಾ ಸಮಿತಿಯ ಹಿರಿಯ ಸದಸ್ಯರಾದ ಕಾ.ವಿ. ನಾಗಮ್ಮಾಳ್ ಮಾತನಾಡುತ್ತಾ ಮುಂಬರುವ ಪಂಚಾಯಿತಿ ಚುನಾವಣೆಗಳನ್ನು ಗಮನದಲ್ಲಿರಿಸಿಕೊಂಡು, ಕರ್ನಾಟಕ ಹಾಲು ಒಕ್ಕೂಟದ ರಾಜಕಾರಣಿ ಪದಾಧಿಕಾರಿಗಳು ಗ್ರಾಮೀಣ ಹೈನುಗಾರರಿಗೆ ಬೆಂಬಲ ನೀಡುವ ಹೆಸರಿನಲ್ಲಿ ಇಂತಹ ಒತ್ತಾಯವನ್ನು ಮಾಡಿದ್ದಾರೆಎಂಬುದು ಸ್ಪಷ್ಟವಾಗಿದೆ. ಸರ್ಕಾರ ಹಾಲು ಉತ್ಪಾದಕರ ಮತ್ತುಗ್ರಾಹಕರಇಬ್ಬರ ಹಿತವನ್ನು ಪರಿಗಣಿಸಬೇಕು. ಮೇವು, ಪಶು ಆಹಾರ ಇತ್ಯಾದಿಗಳನ್ನು ರಿಯಾಯಿತಿದರದಲ್ಲಿ ಪೂರೈಸಬೇಕು. ಕೆಎಂಎಫ್ ನಲ್ಲಿರುವದುಂದುವೆಚ್ಚತಡೆಗಟ್ಟಬೇಕು. ಉತ್ಪಾದನೆಯ ವೆಚ್ಚ ಕಡಿಮೆ ಮಾಡುವ ಬದಲಿಗೆದರ ಹೆಚ್ಚಳವನ್ನೇ ಪರಿಹಾರಎಂದು ಪರಿಗಣಿಸಿದರೆ ಆಗ ಹಣದುಬ್ಬರದ ವಿಷ ಚಕ್ರಕ್ಕೆ ಎಲ್ಲರೂ ಸಿಕ್ಕಿಹಾಕಿಕೊಳ್ಳುತ್ತಾರೆ. ಹಾಲು ಮಕ್ಕಳಿಗೆ ಸೇರಿದಂತೆ ಎಲ್ಲರಿಗೂ ಅವಶ್ಯಕ ಪೌಷ್ಟಿಕ ಆಹಾರವಾದಕಾರಣ ಸರ್ಕಾರ ತಕ್ಷಣವೇ ತನ್ನ ಈ ನಿರ್ಧಾರದಿಂದ ಹಿಂದೆ ಸರಿಯಬೇಕುಎಂದುಅಗ್ರಹಿಸಲಾಯಿತು.

ಶ್ರಮದ ಅರಿವಿಲ್ಲದೆ ಟೀಕೆ ಮಾಡುವುದು ಸರಿಯಲ್ಲ

• **ಉದಯವಾಹಿನಿ, ಜಮಖಂಡಿ:**

ಹಾಲಿನ ದರ ಏರಿಕೆ ಹಾಗೂ ಹಾಲು ಉತ್ಪಾದಕರಿಗೆ ರಾಜ್ಯ ಸರ್ಕಾರ ನೀಡುತ್ತಿರುವ ಹೆಚ್ಚುವರಿ ಹಣದ ವಿಚಾರದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ನೀಡಿರುವ ಹೇಳಿಕೆಗೆ ರೈತ ಮುಖಂಡ ಬಸವರಾಜ ಸಿಂಧೂರ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಜಮಖಂಡಿ ನಗರದ ತಮ್ಮ ಗೃಹ ಕಚೇರಿಯಲ್ಲಿ ಮಾತನಾಡಿದ ಅವರು, ಹಾಲಿನ ಬೆಲೆ ಹೆಚ್ಚಳದಿಂದ ಗ್ರಾಹಕರಿಗೆ ಹೊರೆ ಆಗುತ್ತದೆ ಎಂಬ ಕಾಳಜಿ ಕೇಂದ್ರ ಸರ್ಕಾರಕ್ಕಿದ್ದರೆ, ಗ್ರಾಹಕರಿಗೆ ಪ್ರತಿ ಲೀಟರ್ ಹಾಲಿನ ಖರೀದಿಗೆ 10 ಸಹಾಯಧನ ನೀಡಲಿ. ಅದನ್ನು ಬಿಟ್ಟು ರೈತರಿಗೆ ನೀಡುವ ಹೆಚ್ಚುವರಿ ಹಣವನ್ನು ವಿರೋಧಿಸುವುದು ಸರಿಯಲ್ಲ ಎಂದು ಹೇಳಿದರು ರಾಜ್ಯ ಸರ್ಕಾರ ಹಾಲಿನ ದರದಲ್ಲಿ ಪ್ರತಿ ಲೀಟರ್‌ಗೆ 8 ಹೆಚ್ಚಳ ಮಾಡಿದ್ದು, ಅದರಲ್ಲಿ 1 ಒಕ್ಕೂಟಕ್ಕೆ ಹಾಗೂ ಉಳಿದ 7 ಹಾಲು ಉತ್ಪಾದಕರಿಗೆ ನೀಡುವ ನಿರ್ಧಾರ ಕೈಗೊಂಡಿದೆ. ಇದು ರೈತರ ಹಿತದೃಷ್ಟಿಯಿಂದ ತೆಗೆದುಕೊಂಡ ಕ್ರಮವಾಗಿದೆ. ರೈತರ ಪರವಾಗಿದ್ದೇವೆ ಎಂದು ಹೇಳುವ ಕೇಂದ್ರ ಸರ್ಕಾರ, ಗ್ರಾಹಕರಿಗೆ ಸಹಾಯಧನ ನೀಡುವ ಮೂಲಕ ತನ್ನ ಕಾಳಜಿಯನ್ನು ತೋರಿಸಲಿ. ಇದಕ್ಕೆ ಯಾವುದೇ ಅಡ್ಡಿಯಿಲ್ಲ ಎಂದು ಸವಾಲು ಹಾಕಿದರು. ಒಂದು ಲೀಟರ್ ಹಾಲು ಉತ್ಪಾದನೆ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಹಸು ಅಥವಾ ಎಮ್ಮೆ ವರ್ಷವಿಡೀ ಹಾಲು ನೀಡುವುದಿಲ್ಲ. ಕೆಲವೇ ತಿಂಗಳು ಹಾಲು ನೀಡಿದ ನಂತರ ಗರ್ಭಧಾರಣೆ, ಮೇವು, ಆಹಾರ, ನಿರ್ವಹಣೆ ಹಾಗೂ ಪಶುಪಾಲನೆಗಾಗಿ ರೈತರು ನಿರಂತರವಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ಹೀಗಿರುವಾಗ ಹಾಲು ಉತ್ಪಾದಕರ ಕಷ್ಟ ಮತ್ತು ಶ್ರಮವನ್ನು ಅರ್ಥಮಾಡಿಕೊಳ್ಳಬೇಕು ಎಂದು ತಿಳಿಸಿದರು.

ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವ ನೆರವೇರಿಸಿದ ಮುಂಡರಗಿ ಶ್ರೀ

• **ಉದಯವಾಹಿನಿ, ಕಲಬುರಗಿ,**


☛ಉದಯವಾಹಿನಿ ಚಿತ್ರ

ಪೀಠಾಧಿಪತಿಗಳ ಸ್ಥಾನವೆಂದರೆ ಗೌರವದ ಸ್ಥಾನದ ಜತೆಗೆ ತ್ಯಾಗ, ತಾಳ್ಮೆ, ನಿಸ್ವಾರ್ಥತೆ ಮತ್ತು ಜನ ಕಲ್ಯಾಣದ ಜವಾಬ್ದಾರಿಯಾಗಿದೆ ಎಂದು ಮುಂಡರಗಿ ಸಂಸ್ಥಾನ ಮಠದ ಪೂಜ್ಯರಾದ ನಾಡೋಜ ಡಾ. ಅನ್ನದಾನೀಶ್ವರ ಮಹಾಸ್ವಾಮಿಗಳು ಹೇಳಿದರು.

ಅಫಜಲಪುರ ತಾಲ್ಲೂಕಿನ ಭೈರಾಮಡಗಿ ಗ್ರಾಮದಲ್ಲಿ ಮಹಾಂತೇಶ್ವರ ವಿರಕ್ತ ಮಠಕ್ಕೆ ಷಡಕ್ಷರಿ ದೇವರ ನಿರಂಜನ ಚರ ಪಟ್ಟಾಧಿಕಾರಿ ಮಹೋತ್ಸವ ಬ್ರಾಹ್ಮೀ ಮುಹೂರ್ತದಲ್ಲಿ ಸಕಲ ವಿಧಿ ವಿಧಾನಗಳ ಮೂಲಕ ನೆರವೇರಿಸಿ ಅದರಲ್ಲೂ ಪ್ರಮುಖವಾಗಿ ಅನುಗ್ರಹ ದೀಕ್ಷೆ ನೆರವೇರಿಸಿ ಮಾತನಾಡಿದರು. ಭಕ್ತರು ಹಾಗೂ ಸ್ವಾಮೀಜಿ ಪರಸ್ಪರ ಗೌರವದಿಂದ ಮುನ್ನಡೆದರೆ ಸದೃಢ ಸಮಾಜ ನಿರ್ಮಾಣಕ್ಕೆ ಪೂರಕವಾಗುತ್ತದೆಯಲ್ಲದೇ ಮಠವನ್ನು ಭಕ್ತರು ಹಾಗೂ ಸ್ವಾಮೀಜಿಗಳು ಒಂದಾಗಿ ಮಠ ಅಭಿವೃದ್ಧಿಪಡಿಸಬೇಕು. ಹೀಗಾದಲ್ಲಿ ಸಮಾಜದ ಹಳಿ ಸರಿ ದಾರಿಯಲ್ಲಿ ತೆರಳಲು ಸಾಧ್ಯವಾಗುತ್ತದೆ ಎಂದು ವಿವರಣೆ ನೀಡಿದರು. ಘಟಪ್ರಭಾ ಗುಬ್ಬಲಗುಡ್ಡಕೆಂಪಯ್ಯ ಸ್ವಾಮಿ ಮಠದ ಡಾ. ಮಲ್ಲಿಕಾರ್ಜುನ ಸ್ವಾಮಿಗಳು ಮಾತನಾಡಿ, ಭಕ್ತರು ಹಾಗೂ ಸ್ವಾಮೀಜಿ ನೀರು ಮೀನು ಇದ್ದ ಹಾಗೆ.

ಒಬ್ಬರಿಗೊಬ್ಬರು ಬಿಟ್ಟು ಇರಲಿಕ್ಕಾಗದು, ಷಡಕ್ಷರಿ ದೇವರು ಭೈರಾಮಡಗಿ ಮಠಕ್ಕೆ ಆಸ್ತಿ ಪಾಸ್ತಿ ಯಾವುದೂ ನೋಡಿಲ್ಲ. ಭಕ್ತರ ಮನಸ್ಸು ನೋಡಿ ಬಂದಿದ್ದಾರೆ ಎಂದು ಶ್ಲಾಘಿಸಿದರು. ಚಿನ್ಮಯಗಿರಿ ಮಹಾಂತೇಶ್ವರ ಮಠದ ಕಿರಿಯ ಪೂಜ್ಯರಾದ ವೀರ ಮಹಾಂತ ಶಿವಾಚಾರ್ಯರು ಮಾತನಾಡಿ, 12 ವರ್ಷಗಳಿಂದ ಮಹಾಂತೇಶ್ವರ ಮಠಕ್ಕೆ ಯಾರೊಬ್ಬರು ಪೀಠಾಧಿಪತಿಗಳಿಲ್ಲದೇ ಹಾಳು ಬಿದ್ದಿತ್ತು. ಆದರೆ ಷಡಕ್ಷರಿ ದೇವರನ್ನು ಪೀಠಾಧಿಪತಿಗಳಾನ್ನಿಸಿಕೊಂಡಿರುವುದು ಭಕ್ತರ ದೃಢ ಸಂಕಲ್ಪವೇ ಕಾರಣ ಎಂದು ಹೇಳಿದರು

ರಾಜ್ಯೋತ್ಸವದಂದೇ ಕಾರವಾರ ಯೋಧನ ಐರನ್‌ಮ್ಯಾನ್ ಸಾಧನೆ

'ಐರನ್‌ಮ್ಯಾನ್ 70.3' ಸ್ಪರ್ಧೆಯನ್ನು ಕೇವಲ ಆರು ಗಂಟೆಗಳಲ್ಲಿ ಪೂರ್ಣಗೊಳಿಸುವ ಮೂಲಕ ಪ್ಯಾರಾ ಕಮಾಂಡೋ ಪ್ರಕಾಶ ಗೊಲ್ಲರ ಸಾಧನೆ ಮಾಡಿದ್ದಾರೆ.

• **ಉದಯವಾಹಿನಿ, ಕಾರವಾರ:**

ಕನ್ನಡ ರಾಜ್ಯೋತ್ಸವದ ಸಂಭ್ರಮದ ದಿನವೇ ಕಾರವಾರದ ಕನ್ನಡಿಗನೊಬ್ಬ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಸಾಧನೆ ಮಾಡುವ ಮೂಲಕ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಭಾರತೀಯ ಸೇನೆಯ ಪ್ಯಾರಾ ಸ್ಪೆಷಲ್ ಫೋರ್ಸಸ್‌ನಲ್ಲಿ ಸೇವೆ ಸಲ್ಲಿಸುತ್ತಿರುವ ಕಾರವಾರದ ಪ್ರಕಾಶ ಗೊಲ್ಲರ ಅವರು ಗೋವಾದಲ್ಲಿ

1 : ಕಮಾಂಡೋ ಪ್ರಕಾಶ ಗೊಲ್ಲರ ಸಾಧನೆ
2 : ಸೇನಾ ಸೇವೆಯ ಜತೆಗೆ ಕ್ರೀಡಾ ಕ್ಷೇತ್ರದಲ್ಲಿ
3 : 2018ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆ

ನಡೆದ ಪ್ರತಿಷ್ಠಿತ 'ಐರನ್‌ಮ್ಯಾನ್ 70.3' ಸ್ಪರ್ಧೆಯನ್ನು ಕೇವಲ ಆರು ಗಂಟೆಗಳಲ್ಲಿ ಪೂರ್ಣಗೊಳಿಸಿದ್ದಾರೆ.

ಕಠಿಣ ದೈಹಿಕ ಸಾಮರ್ಥ್ಯ, ನಿರಂತರ ಅಭ್ಯಾಸ, ಮಾನಸಿಕ ದೃಢತೆ ಹಾಗೂ ಅಪಾರ ಶಿಸ್ತಿನ ಪರೀಕ್ಷೆಯಾಗಿರುವ ಈ ಸ್ಪರ್ಧೆಯಲ್ಲಿ ಯಶಸ್ವಿಯಾಗಿರುವುದು ಅವರ ಪರಿಶ್ರಮ ಮತ್ತು ಸಾಧನೆಯ ಫಲಕ್ಕೆ ಸಂದ ಗೌರವವಾಗಿದೆ.

ತೀರಾ ಬಡತನದ ಕುಟುಂಬದಲ್ಲಿ ಬೆಳೆದು ಬಂದ ಪ್ರಕಾಶ ಅವರು ತಮ್ಮ ಛಲ ಮತ್ತು ಪರಿಶ್ರಮದಿಂದ ಭಾರತೀಯ ಸೇನೆಗೆ ಸೇರ್ಪಡೆಯಾಗಿ, ದೇಶದ ಅತ್ಯಂತ ಕಠಿಣ ಸೇನಾ ತರಬೇತಿ



☛ಉದಯವಾಹಿನಿ ಚಿತ್ರ

ಹಾಗೂ ಕಾರ್ಯಾಚರಣೆಗಳಿಗೆ ಹೆಸರಾದ ಪ್ಯಾರಾ ಸ್ಪೆಷಲ್ ಫೋರ್ಸಸ್‌ನಲ್ಲಿ ಸ್ಥಾನ ಪಡೆದಿದ್ದಾರೆ. ಸೇನಾ ಸೇವೆಯ ಜತೆಗೆ ಕ್ರೀಡಾ ಕ್ಷೇತ್ರದಲ್ಲಿಯೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿರುವುದು ಅವರ ಸಾಧನೆಯ ವಿಶೇಷತೆಯಾಗಿದೆ.

2018ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆಯಾದ ಪ್ರಕಾಶ ಅವರು, ತಮ್ಮ ಸಾಮರ್ಥ್ಯ ಮತ್ತು ಕಠಿಣ ಪರಿಶ್ರಮದಿಂದ ಪ್ಯಾರಾ ಸ್ಪೆಷಲ್ ಫೋರ್ಸಸ್‌ಗೆ ಆಯ್ಕೆಯಾದರು. ಉತ್ತರ ಕನ್ನಡ ಜಿಲ್ಲೆಯಿಂದ ಈ ವಿಶೇಷ ಸೇನಾ ಪಡೆ ಸೇರಿದ ಮೊದಲ ಯೋಧ ಎಂಬ ಹೆಗ್ಗಳಿಕೆಯೂ ಇವರದ್ದಾಗಿದೆ. ಜಮ್ಮು ಮತ್ತು ಕಾಶ್ಮೀರ, ಲಡಾಖ್, ಹಿಮಾಚಲ ಪ್ರದೇಶ ಹಾಗೂ ಬೆಂಗಳೂರಿನಲ್ಲಿ

> ಆರ್ಥಿಕ ಸಂಕಷ್ಟಗಳ ನಡುವೆಯೇ ಬೆಳೆದ ಪ್ರಕಾಶ ಅವರು ತಮ್ಮ ಪರಿಶ್ರಮ, ಛಲ ಮತ್ತು ದೃಢಸಂಕಲ್ಪದಿಂದ ಭಾರತೀಯ ಸೇನೆಗೆ ಸೇರುವ ಕನಸನ್ನು ನನಸಾಗಿಸಿಕೊಂಡರು. ಅಲ್ಲಿಂದ ಪ್ಯಾರಾ ಸ್ಪೆಷಲ್ ಫೋರ್ಸಸ್‌ಗೆ ಆಯ್ಕೆಯಾಗಿ, ಇದೀಗ ಅಂತಾರಾಷ್ಟ್ರೀಯ ಮಟ್ಟದ ಸಹನಾ ಕ್ರೀಡಾಕೂಟದಲ್ಲಿಯೂ ಸಾಧನೆ ಮಾಡಿದ್ದಾರೆ. -ಪ್ರಕಾಶ

ಕರ್ತವ್ಯ ನಿರ್ವಹಿಸಿರುವ ಅವರು, ಪ್ರಸ್ತುತ ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸೇನಾ ಜೀವನದ ಶಿಸ್ತು, ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಸ್ಥೈರ್ಯವನ್ನು ಕ್ರೀಡಾ ಸಾಧನೆಯಲ್ಲಿಯೂ ಪ್ರತಿಬಿಂಬಿಸಿರುವ ಅವರು, ಇದೀಗ ಐರನ್‌ಮ್ಯಾನ್ ಸ್ಪರ್ಧೆ ಪೂರ್ಣಗೊಳಿಸಿ ಕಾರವಾರದ ಹೆಮ್ಮೆಯ ಸಾಧಕರಾಗಿ ಗುರುತಿಸಿಕೊಂಡಿದ್ದಾರೆ.

ಗೋವಾದಲ್ಲಿ ನ.1ರಂದು ನಡೆದ ಐರನ್‌ಮ್ಯಾನ್ 70.3 ಸ್ಪರ್ಧೆಯಲ್ಲಿ ವಿವಿಧ ದೇಶಗಳ ಕ್ರೀಡಾಪಟುಗಳು ಪಾಲ್ಗೊಂಡಿದ್ದರು. ಈ ಸ್ಪರ್ಧೆಯಲ್ಲಿ ಮೂರು ಕ್ರೀಡಾ ವಿಭಾಗಗಳನ್ನು ಒಂದರ ನಂತರ ಒಂದರಂತೆ ಪೂರ್ಣಗೊಳಿಸಬೇಕಾಗುತ್ತದೆ. ಸಮುದ್ರದ ನೀರಿನಲ್ಲಿ 1.9 ಕಿ.ಮೀ. ಈಜು, 90 ಕಿ.ಮೀ. ಸೈಕ್ಲಿಂಗ್ ಹಾಗೂ 21.1 ಕಿ.ಮೀ. ಓಟ ಸೇರಿದಂತೆ ಒಟ್ಟು 113 ಕಿ.ಮೀ. ದೂರವನ್ನು

> ಐರನ್‌ಮ್ಯಾನ್ 70.3 ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಟ್ರಯಥ್ಲಾನ್ (ಮೂರು ಕ್ರೀಡೆಗಳ ಸಂಯೋಜಿತ ಸ್ಪರ್ಧೆ) ಆಗಿದೆ. ಒಟ್ಟು 70.3 ಮೈಲುಗಳ ದೂರ ಹೊಂದಿರುವುದರಿಂದ ಈ ಹೆಸರು ಬಂದಿದ್ದು, ಪೂರ್ಣ ಐರನ್‌ಮ್ಯಾನ್ ಸ್ಪರ್ಧೆಯ ಅರ್ಧದಷ್ಟು ದೂರ ಇರುವುದರಿಂದ ಹಾಫ್ ಐರನ್‌ಮ್ಯಾನ್ ಎಂದೂ ಕರೆಯಲಾಗುತ್ತದೆ.

ಕ್ರಮಿಸಬೇಕು. ಒಂದು ವಿಭಾಗ ಮುಗಿದ ತಕ್ಷಣ ಮತ್ತೊಂದು ವಿಭಾಗಕ್ಕೆ ಸಿದ್ಧರಾಗಿ ಮುಂದುವರಿಯಬೇಕಿರುವುದರಿಂದ ದೈಹಿಕ ಸಾಮರ್ಥ್ಯದ ಜತೆಗೆ ಮಾನಸಿಕ ಸ್ಥೈರ್ಯವೂ ಅತ್ಯಗತ್ಯ.

ಸೇನೆಯ ಸಮವಸ್ತ್ರ ಧರಿಸಿ ದೇಶದ ರಕ್ಷಣೆಯ ಹೊಣೆ ಹೊತ್ತಿರುವ ಪ್ರಕಾಶ ಅವರು, ಕ್ರೀಡಾ ಕ್ಷೇತ್ರದಲ್ಲಿಯೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಬಡತನ ಸಾಧನೆಗೆ ಅಡ್ಡಿಯಾಗುವುದಿಲ್ಲ, ನಿರಂತರ ಪರಿಶ್ರಮ ಮತ್ತು ಗುರಿಯ ಮೇಲಿನ ಬದ್ಧತೆ ಇದ್ದರೆ ಅಂತಾರಾಷ್ಟ್ರೀಯ ವೇದಿಕೆಯಲ್ಲಿಯೂ ಗುರುತಿಸಿಕೊಳ್ಳಬಹುದು ಎಂಬುದಕ್ಕೆ ಪ್ರಕಾಶ ಗೊಲ್ಲರ ಅವರ ಸಾಧನೆಯೇ ಸಾಕ್ಷಿಯಾಗಿದೆ. ಕನ್ನಡ ರಾಜ್ಯೋತ್ಸವದ ದಿನವೇ ಈ ಸಾಧನೆ ಹೊರಹೊಮ್ಮಿರುವುದು ಕಾರವಾರ ಹಾಗೂ ಉತ್ತರ ಕನ್ನಡ ಜಿಲ್ಲೆಯ ಜನರ ಹೆಮ್ಮೆಯನ್ನು ಇಮ್ಮಡಿಗೊಳಿಸಿದೆ.